ಕನ್ನಡ ವಿಶ್ವವಿದ್ಯಾನಿಲಯ

ಹಂಪಿ

ಕನ್ನಡ ಸಾಹಿತ್ಯದಲ್ಲಿ ಬುದ್ಧನ ಕುರಿತ ನಾಟಕಗಳು

ಎಂ.ಫಿಲ್. ಪದವಿಗಾಗಿ ಸಾದರಪಡಿಸಿದ ನಿಬಂಧ

ನಿಬಂಧಕಾರರು

ಎಂ.ಎಂ. ಕೀರ್ತಿಕುಮಾರಿ

ಎಂ.ಫಿಲ್. ಪದವಿ

ಶ್ರೀ ಕಂಠೇಶಗೌಡ ಸಂಶೋಧನಾ ಕೇಂದ್ರ ಕರ್ನಾಟಕ ಸಂಘ

ಮಂಡ್ಯ

ಮಾರ್ಗದರ್ಶಕರು

ಡಾ. ಎಚ್.ಟಿ.ಗೀತಾ

ಆಯ್ಕೆ ಶ್ರೇಣಿ ಕನ್ನಡ ಉಪನ್ಯಾಸಕರು

ಸರ್ಕಾರಿ ಪ್ರಥಮದರ್ಜೆ ಕಾಲೇಜು

ಕುವೆಂಪುನಗರ,

ಮೈಸೂರು

2010-11

ಕನ್ನಡ ವಿಶ್ವವಿದ್ಯಾನಿಲಯ

ಹಂಪಿ

ಕನ್ನಡ ಸಾಹಿತ್ಯದಲ್ಲಿ ಬುದ್ಧನ ಕುರಿತ ನಾಟಕಗಳು

ಎಂ.ಫಿಲ್. ಪದವಿಗಾಗಿ ಸಾದರಪಡಿಸಿದ ನಿಬಂಧ

ನಿಬಂಧಕಾರರು

ಎಂ.ಎಂ. ಕೀರ್ತಿಕುಮಾರಿ

ಎಂ.ಫಿಲ್. ಪದವಿ

ಶ್ರೀ ಕಂಠೇಶಗೌಡ ಸಂಶೋಧನಾ ಕೇಂದ್ರ ಕರ್ನಾಟಕ ಸಂಘ

ಮಂಡ್ಯ

ಮಾರ್ಗದರ್ಶಕರು

ಡಾ. ಎಚ್.ಪಿ.ಗೀತಾ

ಆಯ್ಕೆ ಶ್ರೇಣಿ ಕನ್ನಡ ಉಪನ್ಯಾಸಕರು

ಸರ್ಕಾರಿ ಪ್ರಥಮದರ್ಜೆ ಕಾಲೇಜು

ಕುವೆಂಪುನಗರ,

ಮೈಸೂರು

2010–11

ಘೋಷಣಾ ಪತ್ರ

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಪದವಿ ವಿದ್ಯಾರ್ಥಿಯಾಗಿ ಅಧ್ಯಯನ ಮಾಡುತ್ತಿರುವ ನಾನು ಎಂ.ಫಿಲ್. ಪದವಿಯ ಒಂದು ಭಾಗವಾದ ನಿಬಂಧ ರಚನೆಗೆ ಸಂಬಂಧಿಸಿದಂತೆ **"ಕನ್ನಡ ಸಾಹಿತ್ಯದಲ್ಲಿ ಬುದ್ಧನ ಕುರಿತು ನಾಟಕಗಳು"** ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಸಂಶೋಧನಾ ನಿಬಂಧವನ್ನು ಸಿದ್ದಪಡಿಸಿರುತ್ತೇನೆ. ಈ ಸಂಶೋಧನಾ ನಿಬಂಧವನ್ನು ಈ ಮೊದಲು ಭಾಗಶಃವಾಗಲಿ ಅಥವಾ ಪೂರ್ಣವಾಗಿಯಾಗಲೀ ಯಾವುದೇ ಪದವಿ ಅಥವಾ ಡಿಪ್ಲೊಮೋಗಳಿಗಾಗಲಿ ಅಥವಾ ಅಂತಹ ಇತರ ಯಾವುದೇ ಪದವಿ ಪರೀಕ್ಷೆಗಳಿಗೆ ನಾನು ಒಪ್ಪಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ಮಂಡ್ಯ

ದಿನಾಂಕ : 18/08/10

ನಿಬಂಧಕರ ಸಹಿ

M.M. Keerthi Kumari

(ಎಂ.ಎಂ. ಕೀರ್ತಿಕುಮಾರಿ)

ಮಾರ್ಗದರ್ಶಕರ ಪ್ರಮಾಣ ಪತ್ರ

ನಿಬಂಧಕಿ **ಎಂ.ಎಂ. ಕೀರ್ತಿ ಕುಮಾರಿ** ಎಂಬ ಎಂ.ಫಿಲ್. ಪದವಿ ವಿದ್ಯಾರ್ಥಿ ಅವರು ನನ್ನ ಮಾರ್ಗದರ್ಶನದಲ್ಲಿ ಎಂ.ಫಿಲ್. ಪದವಿಯ ಒಂದು ಭಾಗವಾದ ನಿಬಂಧ ರಚನೆಗೆ ಸಂಬಂಧಿಸಿದಂತೆ "ಕನ್ನಡ ಸಾಹಿತ್ಯದಲ್ಲಿ ಬುದ್ಧನ ಕುರಿತ ನಾಟಕಗಳು" ಎಂಬ ಈ ನಿಬಂಧವನ್ನು ಸಿದ್ಧಪಡಿಸಿರುತ್ತಾರೆ. ಈ ನಿಬಂಧವನ್ನು ಈ ಮೊದಲು ಭಾಗಶಃವಾಗಲಿ, ಪೂರ್ಣವಾಗಲೀ ಬೇರಾವುದೇ ಪದವಿ, ಡಿಪ್ಲೊಮೊ ಅಥವಾ ಇತರ ಪದವಿಗಳಿಗಾಗಿ ಒಪ್ಪಿಸಿಲ್ಲ.

ಸ್ಥಳ : ಮಂಡ್ಯ

ದಿನಾಂಕ : 08/08/10

ಮಾರ್ಗದರ್ಶಕರ ಸಹಿ

(ಡಾ. ಎಚ್.ಪಿ. ಗೀತಾ)

ಪರಿವಿಡಿ

ಅಧ್ಯಾಯ – 1

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಕನ್ನಡ ಸಾಹಿತ್ಯಕ್ಕೆ ಸುಮಾರು 1500 ವರ್ಷಗಳ ಇತಿಹಾಸವಿದೆ. ಇಷ್ಟು ಸುಧೀರ್ಘವಾದ ಕನ್ನಡ ಸಾಹಿತ್ಯದಲ್ಲಿ ಸಾಹಿತ್ಯ ಚರಿತ್ರಾಕಾರರು ಹಲವಾರು ಕಾಲಘಟ್ಟಗಳನ್ನು ತಿಳಿಸಿದ್ದಾರೆ. ಪಂಪ ಪೂರ್ವಯುತ, ಪಂಪಯುಗ, ಬಸವಯುಗ, ಕುಮಾರವ್ಯಾಸ ಯುಗ, ಆಧುನಿಕ ಯುಗ, ಈ ಎಲ್ಲಾ ಯುಗಗಳಲ್ಲೂ ಅಪಾರ ಸಾಹಿತ್ಯ ರಾಶಿ ಬೆಳೆದು ಬಂದಿದೆ. ಸಾಮಾನ್ಯವಾಗಿ ಈ ಎಲ್ಲಾ ಕಾಲಘಟ್ಟಗಳಲ್ಲಿಯೂ ಚಂಪೂ, ರಗಳೆ, ಷಟ್ಪದಿ, ಸಾಂಗತ್ಯ ಕಾವ್ಯಗಳೇ ಕಂಡುಬರುತ್ತವೆ. ಆದರೆ ನಾಟಕ ಪ್ರಕಾರ ಕಂಡುಬರುವುದಿಲ್ಲ. ಹಳಗನ್ನಡ, ನಡುಗನ್ನಡ, ಕಾವ್ಯಗಳಲ್ಲಿ ನಾಟಕದ ಲಕ್ಷಣಗಳು ಕಂಡು ಬರುತ್ತವೆ. ರನ್ನನ 'ಗದಾಯುದ್ಧ', ರಾಘವಾಂಕನ 'ಹರಿಶ್ಚಂದ್ರ ಕಾವ್ಯ' ಗ್ರಂಥಗಳಲ್ಲಿ ನಾಟಕೀಯ ಸಂಭಾಷಣೆಗಳು ಕಂಡುಬರುತ್ತವೆ. ಆದರೆ ಸ್ವತಂತ್ರ ನಾಟಕ ಕೃತಿಗಳು ರಚನೆಯಾಗಿಲ್ಲ. ಕನ್ನಡ ಸಾಹಿತ್ಯದಲ್ಲಿ ನಾಟಕ ಪ್ರಕಾರ ಕಂಡುಬರುವುದು ಆಧುನಿಕ ಯುಗದಲ್ಲಿ ಮಾತ್ರ ಎಂಬುದು ಪ್ರಮುಖವಾದ ವಿಷಯ.

ನಾಟಕ ಪ್ರಕಾರ ಎಂಬುದು ಕನ್ನಡದ ಕೂಸಲ್ಲ, ಬದಲಾಗಿ ಬೇರೆ ಭಾಷೆಯ ಕೂಸನ್ನು ತಂದು ಇಲ್ಲಿ ಸುಪುಷ್ಟವಾಗಿ ಬೆಳೆಸಲಾಗಿದೆ. ಮೂಲತಃ ನಾಟಕಗಳು ಗ್ರೀಕ್‌ನಲ್ಲಿ ಜನ್ಮ ತಾಳಿದವು. ಅಲ್ಲಿನ ಡಯೊPಟಿಯಸ್ ದೇವತೆಯ ಹಬ್ಬದ ಉತ್ಸವಗಳಲ್ಲಿ ದೇವತೆಯ ಮುಂದೆ ಮಾಡುತ್ತಿದ್ದ ಅಭಿನಯ, ಹಾಡು, ಸಂಗೀತ ಇವುಗಳೆಲ್ಲವೂ ನಾಟಕದ ಹುಟ್ಟಿಗೆ ಕಾರಣವಾದವು. ಆರಂಭದಲ್ಲಿ ನಾಟಕ ಎಂಬುವುದು ದೇವತೆಗಳನ್ನು ತೃಪ್ತಿ ಪಡಿಸುವುದಕ್ಕಾಗಿ ಬೆಳೆದು ಬಂದಿತು. ದುಷ್ಟ ದೇವತೆಗಳನ್ನು ಅವುಗಳಿಗೆ ಹಾಡು ಸಂಗೀತದ ಮೂಲಕ ತೃಪ್ತಿ ಪಡಿಸಲಾಗುತ್ತಿತ್ತು. ಈ ರೀತಿಯಿಂದ ಆರಂಭವಾದ ನಾಟಕ ಇಂದು ತುಂಬಾ ಎತ್ತರಕ್ಕೆ ಬೆಳೆದು ನಿಂತಿದೆ. ನಾಟಕ ರಂಗಭೂಮಿಯ ಮೇಲೆ ನಟಿಸುವುದಕ್ಕಾಗಿ ರೂಪುಗೊಂಡ ಸಾಹಿತ್ಯ ಪ್ರಕಾರವಾದ್ದರಿಂದ ಉಳಿದ ಸಾಹಿತ್ಯದ ಪ್ರಕಾರಗಳಿಗಿಂತ ಇದು ಅತ್ಯುನ್ನತ ಸ್ಥಾನವನ್ನು ಪಡೆದಿದೆ. ಕವಿ ಕಾಳಿದಾಸನು ನಾಟಕದ ಪ್ರಾಮುಖ್ಯತೆಯನ್ನು ತಿಳಿಸುತ್ತಾ 'ಕಾವ್ಯೇಷು ನಾಟಕಂ ರಮ್ಯಂ' ಎಂದಿದ್ದಾನೆ.

ಭಾರತೀಯ ಪರಂಪರೆಯಲ್ಲಿ ನಾಟಕದ ಪರಂಪರೆಯನ್ನು ನೋಡಿದರೆ ಕ್ರಿ.ಶ.ದ ಆರಂಭದಿಂದಲೂ ನಾಟಕ ಪ್ರಕಾರ ಇರಬಹುದು ಎಂದು ತಿಳಿಯಬಹುದು. ಭರತನ 'ನಾಟ್ಯಶಾಸ್ತ್ರ'ದಲ್ಲಿ ನಾಟಕದ ವಿಚಾರವನ್ನು ತಿಳಿಯಬಹುದು. ಈತನಿಗಿಂತ ಮೊದಲು ಶಿಲಾಲಿ,

ಕೃಶಾಶ್ವರು ನಾಟಕಗಳ ಕುರಿತು ವಿವೇಚನೆ ಮಾಡಿರುವಂತೆ ತಿಳಿದು ಬರುತ್ತದೆ. ಭರತನ ನಾಟ್ಯಶಾಸ್ತ್ರದಲ್ಲಿ ನಾಟಕದ ಉಗಮಕ್ಕೆ ಸಂಬಂಧಿಸಿದಂತೆ ದಂತಕಥೆಯೊಡನೆ ಆರಂಭವಾಗುತ್ತದೆ. "ಜನರು ರಾಗದ್ವೇಷ. ಅಸೂಯೆಗಳಿಗೆ ಒಳಗಾದಾಗ ದೇವತೆಗಳು ಅವರಿಗೆ ಮನರಂಜನೆಯನ್ನು ಉಂಟುಮಾಡುವುದರ ಮೂಲಕ ಇವುಗಳನ್ನು ಹೋಗಲಾಡಿಸುವ ಒಂದು ಸಾಧನವನ್ನು ಅನುಗ್ರಹಿಸಬೇಕೆಂದು ಬ್ರಹ್ಮನನ್ನು ಪ್ರಾರ್ಥಿಸುತ್ತಾರೆ. ಆಗ ಬ್ರಹ್ಮ ನಾಲ್ಕು ವೇದಗಳಿಂದ ಒಂದೊಂದು ಅಂಶವನ್ನು ಪಡೆದು ಅಂದರೆ ಋಗ್ವೇದದಿಂದ ಭಾಷೆಯನ್ನು, ಸಾಮವೇದದಿಂದ ಗೀತವನ್ನು, ಯಜುರ್ವೇದದಿಂದ ಅಭಿನಯವನ್ನು, ಅಥರ್ವಣವೇದದಿಂದ ರಸಗಳನ್ನು ಆಯ್ದುಕೊಂಡು 'ನಾಟ್ಯವೇದ'ವೆಂಬ ಐದನೆಯ ವೇದವನ್ನು ಸೃಷ್ಟಿಸುವಂತೆ ಭರತನಿಗೆ ಭೋದಿಸಿದನು ಎಂಬ ಈ ಕಥೆ ಅರ್ಥವತ್ತಾಗಿದೆ".[1] ಈ ಮಾತುಗಳ ಮುಖಾಂತರ ಭಾರತೀಯರಲ್ಲಿ ನಾಟಕದ ಪ್ರಾಮುಖ್ಯತೆ ಏನು ಎಂಬುದು ತಿಳಿಯುತ್ತದೆ. ಸಂಸ್ಕೃತ ಸಾಹಿತ್ಯದಲ್ಲಿ ಅಪಾರ ಪ್ರಮಾಣದಲ್ಲಿ ನಾಟಕ ರಚನೆ ಆಗಿರುವುದನ್ನು ಕಾಣಬಹುದು.

ಕನ್ನಡದ ಪ್ರಾಚೀನ ಸಾಹಿತ್ಯದಲ್ಲಿ ನಾಟಕ ಪ್ರಕಾರ ಬೆಳೆದು ಬರದಿದ್ದರೂ ಆಧುನಿಕ ಕಾಲಘಟ್ಟದಲ್ಲಿ ರಾಶಿಯಾಗಿ ಬೆಳೆದಿದೆ. ನಾಟಕ ಸಾಹಿತ್ಯದ ರಚನೆಯ ಆರಂಭ ಕಾಲದಲ್ಲಿ ಸ್ವತಂತ್ರ ನಾಟಕಗಳು ಕಂಡು ಬರುವುದಿಲ್ಲ. ಬದಲಾಗಿ ಬೇರೆ ಭಾಷೆಯ ನಾಟಕಗಳನ್ನೇ ಭಾಷಾಂತರ, ರೂಪಾಂತರದ ಮೂಲಕ ರಚಿಸುತ್ತಿದ್ದರು. ಅನಂತರ ಅವಧಿಯಲ್ಲಿ ಸ್ವತಂತ್ರ ನಾಟಕಗಳ ರಚನೆ ಆರಂಭವಾಯಿತು. ಈ ರೀತಿ ಸ್ವತಂತ್ರ ನಾಟಕಗಳು ರಚನೆಯಾಗುವ ಸಂದರ್ಭದಲ್ಲಿ ಹಲವಾರು ಐತಿಹಾಸಿಕ, ಪೌರಾಣಿಕ, ಸಾಮಾಜಿಕ ವಸ್ತುಗಳು ನಾಟಕದ ವಸ್ತುಗಳಾದವು. ಅದೇ ರೀತಿ ಐತಿಹಾಸಿಕ ವ್ಯಕ್ತಿಯಾದ ಬುದ್ದ (ಸಿದ್ದಾರ್ಥ)ನೂ ಕೂಡ ನಾಟಕಗಳ ವಸ್ತುವಾಗಿದ್ದಾನೆ.

ಸಿದ್ದಾರ್ಥನ ಬದುಕು ಭೂತಕಾಲದ್ದಾದರೂ ವರ್ತಮಾನದ ಸಂದರ್ಭಗಳಲ್ಲಿ ಆತನ ವಿಷಯಗಳು ಮಹತ್ವವನ್ನು ಗಳಿಸಿಕೊಂಡಿವೆ. ಹಾಗಾಗಿ ಆತನ ವಿಚಾರ ಸರ್ವಕಾಲದಲ್ಲೂ, ಸರ್ವ ಭಾಷೆಯಲ್ಲೂ ಮಂಡಿತವಾಗಿದೆ. ಕನ್ನಡ ಸಾಹಿತ್ಯದಲ್ಲಿ ಈತನ ವಿಚಾರಗಳು ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಕಂಡು ಬರುತ್ತದೆ. ಕುವೆಂಪು ಅವರು ತಮ್ಮ ಒಂದು ಕವನದಲ್ಲಿ,

ಬುದ್ದ; ಬುದ್ಧ
ಜಗವೆಲ್ಲ ಮಲಗಿರಲು
ಇವನೊಬ್ಬನೆದ್ದ

[1] ತೌಲನಿಕ ಕಾವ್ಯ ಮೀಮಾಂಸೆ – ಡಾ.ಎಚ್. ತಿಪ್ಪೇರುದ್ರಸ್ವಾಮಿ, ಪುಟ ಸಂಖ್ಯೆ 8, 1998, ಡಿ.ವಿ.ಕೆ ಮೂರ್ತಿ ಪ್ರಕಾಶನ.

ಎಂದಿದ್ದಾರೆ. ಅಂದರೆ ಈತನ ವಿಚಾರಗಳು ಕವನದಲ್ಲಿಯೂ ಮಂಡಿತವಾಗಿದೆ. ಅಲ್ಲದೆ ಈತನನ್ನು ಕುರಿತ ಗೋವಿಂದ ಪೈ ಅವರು 'ವೈಶಾಖ' ಎಂಬ ಖಂಡಕಾವ್ಯವನ್ನೂ ಲತಾ ರಾಜಶೇಖರ ಅವರು 'ಬುದ್ಧ ಚರಿತ' ಎಂಬ ಮಹಾಕಾವ್ಯವನ್ನು, ಜಿ.ಪಿ. ರಾಜರತ್ನಂ ಅವರು 'ಧರ್ಮದಾನಿ ಬುದ್ಧ' 'ಬುದ್ಧನ ವಚನ ಪರಿಚಯ' 'ಜಾತಕ ಕಥೆಗಳು' ಪಾಲಿಪಜ್ಜ ಪುಷ್ಪಾಂಜಲಿ' 'ಭಗವಾನ್ ಬುದ್ಧ' ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಅಲ್ಲದೆ ಬುದ್ಧನನ್ನು ಕುರಿತು ಹಲವಾರು ನಾಟಕಗಳು ರಚನೆಯಾಗಿವೆ. ಅವುಗಳೆಂದರೆ, ಭಾರದ್ವಾಜ ದತ್ತಾತ್ರೇಯ ಕೃಷ್ಣ ಅವರ 'ಬುದ್ಧನ ಗೃಹ ತ್ಯಾಗ', ಜಿ. ಪುಟ್ಟಸ್ವಾಮಯ್ಯನವರ 'ಗೌತಮ ಬುದ್ಧ', ಶ್ರೀನಂದರವರ 'ದುಶೀರ', ಗುಂಡಣ್ಣ ಕೊಲೂರ ಅವರ 'ಭಗವಾನ್ ಬುದ್ಧ', ಬಾದರಾಯಣ ಮೂರ್ತಿಯವರ 'ಜ್ಞಾನೋದಯ', ಜಿ.ಪಿ. ರಾಜರತ್ನಂ ಅವರ 'ಸಂಭವಾಮಿ ಯುಗೇ ಯುಗೇ', ಕುವೆಂಪು ಅವರ 'ಮಹಾರಾತ್ರಿ, ಯು.ಎಸ್. ಶೆಟ್ಟಿಯವರ 'ಗೃಹತ್ಯಾಗ', ಗೋಪಾಲಕೃಷ್ಣ ಭಟ್ಟರ 'ಮಹಾ ನಿಷ್ಕ್ರಮಣ ಭಾಗ 1, 2', ಕೆ.ವಿ. ಶಣ್ಯ ಅವರ 'ಗೌತಮನ ಗೃಹ ತ್ಯಾಗ ಮತ್ತು ಸಿದ್ಧಾರ್ಥನ ಕಾರುಣ್ಯ', 'ಅಂಗುಲಿಮಾಲಾ', 'ವೈರಾಗ್ಯ ನಿಧಿ', ಬಿ. ಭೀಮರಾಜು ಅವರ 'ಸಿದ್ಧಾರ್ಥ–ಬುದ್ಧ', ಪ್ರಭುಶಂಕರರ 'ಅಂಗುಲಿಮಾಲಾ' 'ಆಮ್ರಪಾಲಿ' 'ಸುಜಾತ' 'ಗಾಳಿ ಎಂಬ ಕುದುರೆ ಏರಿ', ಶಿವರಾಮ ಕಾರಂತರ 'ಕಿಸಾಗೋತಮಿ' 'ಬುದ್ಧೋದಯ', ಮಾಸ್ತಿಯವರ 'ಯಶೋಧರ', ಮನಜ ಅವರ 'ಜಲ' ಮುಂತಾದವು.

ಈ ರೀತಿಯಾಗಿ ಕನ್ನಡ ಸಾಹಿತ್ಯದಲ್ಲಿ ಅಪಾರ ಪ್ರಮಾಣದಲ್ಲಿ ಬುದ್ಧನ ಕುರಿತ ಸಾಹಿತ್ಯ ರಚನೆಯಾಗಿದೆ. ಆದರೆ ಎಲ್ಲಾ ಕೃತಿಗಳನ್ನು ಅಧ್ಯಯನಕ್ಕೆ ಒಳಪಡಿಸುವ ಕಾರ್ಯ ನಡೆದಿಲ್ಲವೆಂದೇ ಹೇಳಬೇಕು. ನಮ್ಮ ಲೇಖಕರು ಮೂಲ ಕೃತಿ ರಚನೆಗೆ ಕೊಟ್ಟ ಗಮನವನ್ನು ಅವುಗಳ ವಿಮರ್ಶೆಯ ಕಡೆಗೆ ನೀಡದಿರುವುದು ದುರದೃಷ್ಟವೇ ಸರಿ. ಹಾಗಾಗಿ ಆ ನಿಟ್ಟಿನಲ್ಲಿ ಒಂದು ಸಣ್ಣ ಪ್ರಯತ್ನವಾಗಿ 'ಕನ್ನಡದಲ್ಲಿ ಬುದ್ಧನನ್ನು ಕುರಿತ ನಾಟಕಗಳು' ಎಂಬ ವಿಷಯವನ್ನು ಆಯ್ಕೆ ಮಾಡಿಕೊಂಡು ಕನ್ನಡ ಸಾಹಿತ್ಯದಲ್ಲಿ ಬುದ್ಧನನ್ನು ಕುರಿತ ರಚನೆ ಆಗಿರುವ ನಾಟಕಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ನನ್ನ ಉದ್ದೇಶ. ಆದರೆ ಕನ್ನಡದಲ್ಲಿ ಬುದ್ಧನನ್ನು ಕುರಿತು ಇಪ್ಪತ್ತಕ್ಕಿಂತಲೂ ಹೆಚ್ಚು ನಾಟಕಗಳು ರಚನೆ ಆಗಿರುವುದನ್ನು ಕಾಣಬಹುದು. ಈ ಎಲ್ಲಾ ನಾಟಕಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಪಡಿಸುವುದು ಸಾಧ್ಯವಾಗದ ಮಾತು. ಏಕೆಂದರೆ ಇದು ಒಂದು ಪಿಎಚ್.ಡಿ.ಗಾಗುವ ವಿಷಯದಷ್ಟಿದೆ. ಹಾಗಾಗಿ ಇಲ್ಲಿ ಸಮಯದ ಅಭಾವ ಮತ್ತು ಪುಟಮಿತಿ ಇರುವುದರಿಂದ ಕೆಲವೇ ನಾಟಕಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅಂದರೆ ಪ್ರಭುಶಂಕರರ 'ಅಂಗುಲಿಮಾಲಾ' 'ಆಮ್ರಪಾಲಿ' 'ಸುಜಾತ' 'ಗಾಳಿ ಎಂಬ

ಕುದುರೆ ಏರಿ', ಕಾರಂತರ 'ಕಿಸಾಗೋತಮಿ' 'ಬುದ್ಧೋದಯ', ಕುವೆಂಪು ಅವರ 'ಮಹಾರಾತ್ರಿ', ಮಾಸ್ತಿಯವರ 'ಯಶೋಧರ' ಮತ್ತು ಮ.ನ.ಜ ಅವರ 'ಜಲ' ನಾಟಕಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ.

ಈ ಅಧ್ಯಯನದ ಅನುಕೂಲಕ್ಕಾಗಿ ಈ ಕೆಳಕಂಡಂತೆ ಅಧ್ಯಾಯಗಳನ್ನು ವಿಭಾಗ ಮಾಡಿಕೊಂಡು ಅಧ್ಯಯನ ಮಾಡಲಾಗಿದೆ.

1. ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ.
2. ನಾಟಕ ಪ್ರಕಾರದ ಹುಟ್ಟು ಮತ್ತು ಬೆಳವಣಿಗೆ
3. ಇತಿಹಾಸ ಮತ್ತು ಬುದ್ಧ
4. ಕನ್ನಡ ನಾಟಕಗಳು ಮತ್ತು ಬುದ್ಧ
    ಅ) ಪ್ರಭುಶಂಕರರ 'ಅಂಗುಲಿಮಾಲಾ' 'ಆಮ್ರಪಾಲಿ' 'ಸುಜಾತ' 'ಗಾಳಿ ಎಂಬ ಕುದುರೆ ಏರಿ'
    ಆ) ಕಾರಂತರ 'ಕಿಸಾಗೋತಮಿ' 'ಬುದ್ಧೋದಯ'
    ಇ) ಕುವೆಂಪು ಅವರ 'ಮಹಾರಾತ್ರಿ'
    ಈ) ಮಾಸ್ತಿಯವರ 'ಯಶೋಧರ'
    ಉ) ಮನಜ ಅವರ 'ಜಲ'
5. ಸಾಮ್ಯತೆ ಮತ್ತು ವೈಷಮ್ಯಗಳು
6. ಉಪ ಸಂಹಾರ

ಮೊದಲನೆ ಅಧ್ಯಾಯದಲ್ಲಿ ನಾಟಕ ಪ್ರಕಾರದ ಇತಿಹಾಸವನ್ನು ತಿಳಿದುಕೊಳ್ಳುವುದರ ಜೊತೆಗೆ ಕನ್ನಡದಲ್ಲಿ ಬುದ್ಧನ ಸಾಹಿತ್ಯ ಹೇಗೆ ಬೆಳೆದು ಬಂದಿದೆ ಎಂದು ತಿಳಿದುಕೊಂಡು ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ತಿಳಿಸಲಾಗಿದೆ. ಎರಡನೆಯ ಅಧ್ಯಾಯದಲ್ಲಿ ನಾಟಕ ಪ್ರಕಾರ ಯಾವಾಗ ಮತ್ತು ಎಲ್ಲಿ ಜನ್ಮ ತಳೆಯಿತು. ಅನಂತರ ಅದರ ಬೆಳವಣಿಗೆಯ ಹಂತದಲ್ಲಿ ಅದರ ಪ್ರಕಾರಗಳನ್ನು ತಿಳಿಸಲಾಗಿದೆ. ಮೂರನೇ ಅಧ್ಯಾಯದಲ್ಲಿ ಇತಿಹಾಸದಲ್ಲಿ ಬುದ್ಧನನ್ನು ಹೇಗೆ ಚಿತ್ರಿಸಲಾಗಿದೆ ಎಂಬುದನ್ನು ತಿಳಿಸಲಾಗಿದೆ. ನಾಲ್ಕನೇ ಅಧ್ಯಾಯದಲ್ಲಿ ಅಧ್ಯಯನದ ಸಲುವಾಗಿ ಆವರಿಸಿಕೊಂಡಿರುವ ನಾಟಕಗಳಲ್ಲಿ ಬುದ್ಧನನ್ನು ಹೇಗೆ ಚಿತ್ರಿಸಲಾಗಿದೆ ಮತ್ತು ಪ್ರತಿಯೊಬ್ಬ

ನಾಟಕಕಾರರ ದೃಷ್ಟಿಕೋನ ಮತ್ತು ಆಶಯವನ್ನು ತಿಳಿಸಲಾಗಿದೆ. ಐದನೇ ಅಧ್ಯಾಯದಲ್ಲಿ ಆರಿಸಿಕೊಂಡಿರುವ ನಾಟಕಗಳಲ್ಲಿ ಕಂಡುಬರುವ ಪರಸ್ಪರ ಸಾಮ್ಯತೆಗಳನ್ನು, ವೈಷಮ್ಯತೆಗಳನ್ನು ತಿಳಿಸಲಾಗಿದೆ. ಆರನೇ ಅಧ್ಯಾಯದಲ್ಲಿ ಈ ಎಲ್ಲಾ ಅಧ್ಯಾಯಗಳಿಂದ ಅರಿತುಕೊಂಡ ಅಂಶವನ್ನು ತಿಳಿಸಲಾಗಿದೆ.

ಈ ರೀತಿಯ ವಿಭಾಗ ಕ್ರಮದ ಮುಖಾಂತರ ಅಧ್ಯಯನ ಕೈಗೊಳ್ಳಲಾಗಿದೆ.

ಅಧ್ಯಾಯ – 2

ನಾಟಕ ಪ್ರಕಾರದ ಹುಟ್ಟು ಬೆಳವಣಿಗೆ

ಜಗತ್ತಿನ ಅತ್ಯಂತ ಪ್ರಾಚೀನ ಕಲೆಗಳಲ್ಲಿ ನಾಟಕ ಪ್ರಮುಖವಾಗಿ ಕಂಡು ಬರುತ್ತದೆ. ಜಗತ್ತಿನಲ್ಲಿ ವಿವಿಧ ರೀತಿಯ ಸಂಸ್ಕೃತಿಗಳನ್ನು ಆಚರಣೆಯ ವಿಧಾನಗಳನ್ನು ಕಾಣುತ್ತೇವೆ. ಒಂದೊಂದು ಸಂಸ್ಕೃತಿಗೂ ತನ್ನದೇ ಆದ ವಿಶಿಷ್ಟ ಪರಂಪರೆ ಇರುವುದಾದರೂ ಬಹುಪಾಲು ಎಲ್ಲಾ ಸಂಸ್ಕೃತಿಗಳಲ್ಲಿಯೂ ನಾಟಕದ ಹುಟ್ಟಿಗೆ ಕಾರಣವಾಗಿರುವ ಸಂದರ್ಭಗಳು ಏಕ ರೀತಿಯಲ್ಲಿರುತ್ತವೆ. ಎಲ್ಲಾ ದೇಶಗಳಲ್ಲಿಯೂ ನಾಟಕ ಹುಟ್ಟಿದ್ದು ದೇವತೆಗಳ ಪ್ರೀತ್ಯರ್ಥವಾಗಿ ಅಥವಾ ಭೂತ ಬೇತಾಳಗಳನ್ನು ತೃಪ್ತಿಪಡಿಸುವುದಕ್ಕಾಗಿ ವ್ರತ ಮತ್ತು ಆಚರಣೆಗಳಿಂದ.

ಆದಿಯಲ್ಲಿ ಮಾನವ ಇಂದಿನ ರೀತಿ ಒಂದು ಸುಸಜ್ಜಿತವಾದ ರೀತಿಯಲ್ಲಿ ಜೀವನವನ್ನು ಸಾಗಿಸುತ್ತಿರಲಿಲ್ಲ. ಆತ ಏಕಾಂಗಿಯಾಗಿ ಕಾಡು ಮೇಡುಗಳಲ್ಲಿ ಅನಾಗರೀಕನ ರೀತಿಯಲ್ಲಿ ಕಾಡಿನಲ್ಲಿ ಲಭ್ಯವಾಗುವ ಗೆಡ್ಡೆ–ಗೆಣಸುಗಳನ್ನು ತಿಂದೊ ಅಥವಾ ಪ್ರಾಣಿಗಳನ್ನು ಬೇಟೆಯಾಡಿಯೋ, ಜೀವನ ಸಾಗಿಸುತ್ತಿದ್ದನು. ಈ ರೀತಿ ಬದುಕುತ್ತಿರುವ ಕಾಲದಲ್ಲಿ ಆತ ಉಗ್ರ ಪರಿಸರದೊಡನೆ ಸದಾ ಹೋರಾಡುತ್ತಲೇ ಇರಬೇಕಾಗಿದ್ದಿತು. ಈ ರೀತಿಯ ಹೋರಾಟದಿಂದ ಭಯಗೊಂಡ ಆತ ಒಂದು ಅವ್ಯಕ್ತ ಶಕ್ತಿಯ ಮೊರೆ ಹೋದ. ಆ ಅವ್ಯಕ್ತ ಶಕ್ತಿಯೇ ಮುಂದೆ ದೇವತೆ ಮತ್ತು ಭೂತದ ರೂಪು ಪಡೆದವು. ತಾನೇ ಸೃಷ್ಟಿಸಿದ ದೇವತೆ ಮತ್ತು ಭೂತಗಳಿಂದ ಈತ ಮತ್ತಷ್ಟು ಭಯ ಭೀತನಾಗಿ ಅದರ ಮುಂದುವರೆದ ರೂಪ ಎಂಬಂತೆ ಧರ್ಮವನ್ನು ರಚಿಸಿಕೊಂಡ. ಅನಂತರ ಧರ್ಮದ ನೆರಳಿನಲ್ಲಿ ಬಂಧಿಯಾಗಿ ಹೊರಬರಲಾರದೆ ಈ ದೇವತೆ ಮತ್ತು ಭೂತಗಳನ್ನು ತೃಪ್ತಿ ಪಡಿಸುವುದಕ್ಕಾಗಿ ಹಲವಾರು ಮಾರ್ಗಗಳನ್ನು ಅನುಸರಿಸತೊಡಗಿದ. ಆ ಮಾರ್ಗಗಳೆಂದರೆ ದೇವತೆಯ ಒಂದು ಹಾಡು, ಕುಣಿತ ಮುಂತಾದವು.

ಹಾಡು, ಕುಣಿತಗಳು ಅತ್ಯಂತ ಪ್ರಾಚೀನ ಕಾಲದಲ್ಲಿಯೇ ಧಾರ್ಮಿಕ ವ್ರತಾಚರಣೆಗಳ ಅಂಗವಾಗಿ ಬಳಕೆಗೆ ಬಂದವು. ಪುರಾಣಗಳು ಮಹಾಕಾವ್ಯಗಳು ರೂಪು ಹೊಂದಿದ್ದು ಧರ್ಮದ ಪ್ರೇರಣೆಯಿಂದ ನಾಟಕಗಳು ಪ್ರಾಚೀನ ಸಾಹಿತ್ಯ ವೃಕ್ಷದ ಕೊನೆಯ ಫಲಗಳು ಈಗಾಗಲೇ ಸ್ಪಷ್ಟ ರೂಪು ತಾಳಿ ಸದೃಢವಾಗಿದ್ದ ನೃತ್ಯ, ಸಂಗೀತ, ಪುರಾಣ, ಮಹಾಕಾವ್ಯ ಎಲ್ಲವನ್ನೂ ಬಳಸಿಕೊಂಡು ನಾಟಕ ಸಂಕೀರ್ಣವಾದ ಕಲೆಯಾಗಿ ಬೆಳೆಯಿತು. ಒಟ್ಟಾರೆ ಹೇಳುವುದಾದರೆ ಯಾವುದೇ ದೇಶದ ರಂಗಭೂಮಿ ಅಲ್ಲಿನ ಧಾರ್ಮಿಕ ಪರಂಪರೆಯ ಅಂಗವಾಗಿ ಹುಟ್ಟಿ ಸಾಮಾಜಿಕವಾಗಿ ಬೆಳೆದಿದೆ

ಎಂಬುದು ಸ್ಪಷ್ಟ ವಿಚಾರ. ನೃತ್ಯ, ಸಂಗೀತ, ಶಿಲ್ಪ ಮುಂತಾದ ಸಾಹಿತ್ಯೇತರ ಕಲೆಗಳು, ನಾಟಕಗಳು ಪ್ರಮುಖವಾದ ಅಂಗಗಳು.

ಪಾಶ್ಚಾತ್ಯ ನಾಗರೀಕತೆಯ ತಲಕಾವೇರಿಯಾಗಿದ್ದ ಗ್ರೀಕ್ ಸಂಸ್ಕೃತಿಯ ಹೆಮ್ಮೆಯ ಕೊಡುಗೆಯೆನಿಸಿದ ರುದ್ರ ನಾಟಕಗಳು ಹುಟ್ಟಿದ್ದು ಅಲ್ಲಿನ ಧರ್ಮ ಪ್ರಕ್ರಿಯೆಯಿಂದ, ಕೃಷಿಯ ಸಂವೃದ್ಧಿಯನ್ನು ಬಯಸಿ ಪ್ರಾಚೀನ ಗ್ರೀಕರು ನಡೆಸುತ್ತಿದ್ದ ಉತ್ಸವ ಆಚರಣೆಗಳಲ್ಲಿ ಮತ್ತು ನಾಡಿನ ಒಳಿತಿಗಾಗಿ ಮಡಿದ ವೀರರ ಸಮಾಧಿ ಪೂಜೆಗಳಲ್ಲಿ ಗ್ರೀಕ್ ನಾಟಕದ ಮೂಲವನ್ನು ಗುರುತಿಸಬಹುದು. ಪ್ರಕೃತಿಯ ಜೀವಶಕ್ತಿ ಮತ್ತು ಚೈತನ್ಯಗಳು ಅದರ ಅಳಿವು ಮತ್ತು ಮರು ಹುಟ್ಟುಗಳನ್ನು ಅನುಕರಿಸಿ ಆಚರಿಸುತ್ತಿದ್ದ ಆರಾಧನೆಯಾದ ಡಯಾನಿಸಿಸ್ ದೇವತೆಯ ಉತ್ಸವ ಗ್ರೀಸಿನಲ್ಲಿ ಬಹು ಅದ್ದೂರಿಯಿಂದ ನಡೆಯುತ್ತಿತ್ತು. ಡಯಾನಿಸಿಸ್ ಸಸ್ಯಾದಿ ದೇವತೆ ಜನನ ಶಕ್ತಿಯ ಚಿಹ್ನೆಯಾದ ಲಿಂಗ ಆ ದೇವತೆಯ ಲಾಂಛನ. ಅಥೆನ್ಸಿನಲ್ಲಿ ಡಯಾನಿಸಿಸ್ ದೇವತೆಗೆ ಪ್ರತಿವರ್ಷ ಎರಡು ಉತ್ಸವಗಳು ನಡೆಯುತ್ತಿದ್ದು ಅವುಗಳಲ್ಲೊಂದಾದ ವಸಂತೋತ್ಸವದಲ್ಲಿ ದೇವತಾ ಮಹಿಮೆಗಳನ್ನು ಕೊಂಡಾಡುವ ಐತಿರ್‍ಯಾಂಬಸ್ ಮೇಳಗೀತೆಗಳನ್ನು ಹಾಡುತ್ತಿದ್ದರು. ನೃತ್ಯಾಭಿನಯಗಳಿಂದ ಕೂಡಿದ ಈ ಜನಪದ ಮೇಳ ಗೀತೆಗಳು ಕ್ರಿ.ಪೂ. 6ನೇ ಶತಮಾನದಲ್ಲಿ ಸಂವಾದ ರೂಪಕ್ಕೆ ತಿರುಗಿ ಕ್ರಮೇಣ ಅದರಿಂದ ರುದ್ರ ನಾಟಕವು ಸ್ಪಷ್ಟವಾಗಿ ಮೈತಾಳಿತು. "ವಾಸ್ತವವಾಗಿ ಈಜಿಪ್ಟಿನ ಭಾವೋದ್ರೇಕದ ನಾಟಕಗಳು (Passion plays) ಮತ್ತು ಸಸ್ಯ ಜಲದೇವತೆಗಳ ವ್ರತಾಚರಣೆಯ ಹಿನ್ನೆಲೆಯಲ್ಲಿ ರೂಪು ಹೊಂದಿದ ಸಿರಿಯಾದ ರಂಗಭೂಮಿಯು ಗೀತರುದ್ರ ನಾಟಕಗಳಿಗಿಂತ ಪ್ರಾಚೀನವೆನ್ನಬಹುದಾದರೂ ಸಂಭಾಷಣೆ , ವಸ್ತು, ಪಾತ್ರ ರಚನೆಗಳಿಂದ ಸಮಗ್ರಗೊಂಡ ಶ್ರೇಷ್ಠ ನಾಟಕಗಳು ಹುಟ್ಟಿದ್ದು ಗ್ರೀಸಿನಲ್ಲಿಯೇ ಮೊತ್ತಮೊದಲು".

ಇದೇ ರೀತಿ ಇಂಗ್ಲೀಷ್ ನಾಟಕಗಳು ಕೂಡ ಧಾರ್ಮಿಕ ಹಿನ್ನೆಲೆಯಲ್ಲಿಯೇ ರೂಪುಗೊಂಡಿವೆ. ಇಂಗ್ಲೀಷ್ ನಾಟಕಗಳ ಹುಟ್ಟಿಗೆ ಕಾರಣವಾದ ಕ್ರೈಸ್ತ ಮತೀಯ ಆಚರಣೆಗಳು ಮತ್ತು ಚರ್ಚಿನ ಪ್ರಭಾವ ಇಂಗ್ಲೀಷ್ ರಂಗಭೂಮಿಯ ಮೇಲೆ ತನ್ನ ಹಿಡಿತವನ್ನು ಕ್ರಿ.ಶ. 1450ರವರೆಗೂ ಉಳಿಸಿಕೊಂಡಿತ್ತು. ಬೈಬಲ್ಲಿನ ಕತೆಗಳನ್ನು ನಾಟಕ ರೂಪದಲ್ಲಿ ಜನಗಳಿಗೆ ಪರಿಚಯ ಮಾಡಿಸುವ ಸಲುವಾಗಿ ಹುಟ್ಟಿದ ನಾಟಕಗಳಿಂದ ಆರಂಭವಾಗಿ ನೀತಿ ನಾಟಕಗಳ ಯುಗವನ್ನು ದಾಟುವವರೆಗೂ ಇಂಗ್ಲೀಷ್ ನಾಟಕ[1] ಪ್ರಧಾನವಾಗಿ ಧಾರ್ಮಿಕ ಉದ್ದೇಶಗಳನ್ನೇ ಹೊಂದಿತ್ತು. ಫ್ರೆಂಚ್ ರಂಗಭೂಮಿಯ ಉದಯಕ್ಕೆ ಕ್ರೈಸ್ತ ಧರ್ಮವು ಪ್ರೇರಣೆ ಕೊಟ್ಟಿದ್ದರೆ ಜರ್ಮನಿಯಲ್ಲಿ ಕ್ರಿಶ್ಚಿಯನ್ ಧರ್ಮಕ್ಕೆ ಭಿನ್ನವಾದ

[1] ಪುಟ 5 ಆಧುನಿಕ ಕನ್ನಡ ನಾಟಕ ಡಾ. ಕೆ. ಮರುಳ ಸಿದ್ದಪ್ಪ

ಜಾನಪದ ಮೂಲದಿಂದ ನಾಟಕವು ಹುಟ್ಟಿತ್ತೆಂದು ಹೇಳುತ್ತಾರೆ. ಜಪಾನಿನ ರಂಗಭೂಮಿಯು ಬೌದ್ಧ ಧರ್ಮದ ಪ್ರಾಚೀನ ಕತೆಗಳಿಂದ ಚೀನಾ ಮತ್ತು ಜಪಾನಿನ ಸಮೃದ್ಧ ಜನಪದ ಕಥಾಮೂಲಗಳಿಂದ ಮತ್ತು ಅಲ್ಲಿನ ದೇವಾಲಯಗಳಲ್ಲಿ ನಡೆಯುತ್ತಿದ್ದ ಜನಪದ ನೃತ್ಯ ಸಂಗೀತಗಳಿಂದ ಸ್ಫೂರ್ತಿಗೊಂಡು ಮುನ್ನಡೆಯಿತು.

ಋಗ್ವೇದದ ಸಂವಾದ ಸೂಕ್ತಗಳೇ ಸಂಸ್ಕೃತ ನಾಟಕದ ಬೀಜಾಂಕುರಗಳೆಂದು ಕೆಲವು ವಿದ್ವಾಂಸರು ಊಹಿಸಿದ್ದಾರೆ. ಇದರೊಂದಿಗೆ ಸಂಸ್ಕೃತ ನಾಟಕದ ಹುಟ್ಟಿಗೆ ಪುರಾಣ ಇತಿಹಾಸಗಳು ಕಾರಣವಾದವು.

ನಮ್ಮಲ್ಲಿಯೂ ಕೆಲವೆಡೆ ಮಾರಿಯ ಮೆರವಣಿಗೆಗಳಲ್ಲಿಯೂ, ಜಾತ್ರೆಗಳಲ್ಲಿಯೂ ಚೋಮನ ಕುಣಿತ ನಡೆಯುವುದುಂಟು. ಮೆರವಣಿಗೆ ಅಲ್ಲಲ್ಲಿ ನಿಂತಾಗ ಮಾರಮ್ಮನ ಮುಂದೆ ಭಕ್ತನೊಬ್ಬ ಮೊಗವಾಡ ಹಾಕಿಕೊಂಡು ಆವೇಶದಿಂದ ಕುಣಿಯುತ್ತಾನೆ. ಹರೆ, ತಮಟೆಗಳನ್ನು ಬಾರಿಸುತ್ತಾ ಹಾಡು ಹೇಳಿಕೊಂಡು ಸುತ್ತುತ್ತಾರೆ. ಮೊಗವಾಡ ಉಪಾಸನಾ ದೇವತೆಯ ಸ್ವರೂಪಕ್ಕೆ ತಕ್ಕಂತೆ ಭೀಷಣವಾಗಿರುತ್ತದೆ. ಕುಣಿತ ಸಾಮಾನ್ಯವಾಗಿ ರಾಕ್ಷಸ ರೀತಿಯದು. ಹಾಡು ಬಹುಪಾಲು ಮಾರಿಯ ಸಾಹಸ, ಪರಾಕ್ರಮಗಳನ್ನು ಕುರಿತವು. ದಕ್ಷಿಣ ಕನ್ನಡ ತುಳು ಸೆರಗಿನ ಕೆಲವೆಡೆಗಳಲ್ಲಿ ನಡೆಯುವ ದೆವ್ವದ ಕುಣಿತ ಅಥವಾ ಮೇಳ ಹೆಚ್ಚು ಕಡಿಮೆ ಇದೇ ರೀತಿಯಾದದ್ದು.

ಇನ್ನು ಕನ್ನಡ ಸಾಹಿತ್ಯದಲ್ಲಿ ನಾಟಕದ ಹುಟ್ಟು ಬೆಳವಣಿಗೆಯನ್ನು ಗಮನಿಸುವುದಾದರೆ ಹಳಗನ್ನಡ ಸಾಹಿತ್ಯದಲ್ಲಿ ನಾಟಕಗಳಿಲ್ಲದಿರುವುದು ಕಂಡುಬರುತ್ತದೆ. ನಮ್ಮ ಪೂರ್ವಜರಿಗೆ ನಾಟಕ ಅಪರಿಚಿತವಾದ ರೂಪವೇನೂ ಅಲ್ಲ. ಕನ್ನಡದ ಜನತೆ ಬಹು ಹಿಂದಿನಿಂದಲೂ ನಾಟಕದ ಪರಿಚಯವನ್ನು ಹೊಂದಿರಲೇಬೇಕೆಂದು ಊಹಿಸಲು ನಮ್ಮ ಜನಪದ ಕುಣಿತ, ಆಚರಣೆ ಮತ್ತು ಆಟಗಳು ಆಧಾರವಾಗಿಯಾದರೂ ಸ್ಪಷ್ಟವಾಗಿ ಲಿಖಿತ ದಾಖಲೆಗಳ ಮೂಲಕ ಅದನ್ನು ಸ್ಥಾಪಿಸಲು ಪ್ರಾಚೀನ ಸಾಹಿತ್ಯ ಮತ್ತು ಶಾಸನಗಳ ಮೊರೆ ಹೋಗಬೇಕಾಗುತ್ತದೆ. ನಟ, ನಾಟಕ, ನಾಟಕ ಶಾಲೆ ಎಂಬಂತಹ ಮಾತುಗಳು ಅದಕ್ಕೆ ಸಂಬಂಧಿಸಿದ ಹೇಳಿಕೆಗಳು ಉಲ್ಲೇಖಗಳು 9ನೇ ಶತಮಾನದಿಂದಲೂ ಕನ್ನಡ ಕಾವ್ಯಗಳಲ್ಲಿ ಮತ್ತು ಶಾಸನಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತವೆ.

ಕನ್ನಡ ನಾಡಿನ ನಾಟಕದ ಹಳಮೆಯನ್ನು ಕುರಿತು ನಡೆದಿರುವ ಸಂಶೋಧನೆಗಳಲ್ಲಿ ಶ್ರೀ ಗೋವಿಂದ ಪೈಗಳ ಕೆಲಸ ಅಗಾಧವಾದದ್ದು. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ನಾಟಕಗಳಿದ್ದಿರಬೇಕೆಂದು ಸಾಧಿಸಿ ತೋರಿಸುವ ಹಲವು ಆಧಾರಗಳನ್ನು ಶ್ರೀ ಗೋವಿಂದ ಪೈರವರು ತೋರಿಸಿಕೊಟ್ಟಿದ್ದಾರೆ.

ರನ್ನನ 'ಸಾಹಸಭೀಮ ವಿಜಯ', ನಿಜಗುಣ ಶಿವಯೋಗಿಯ 'ವಿವೇಕ ಚಿಂತಾಮಣಿ', 'ಗದುಗಿನ ಭಾರತ', ದುರ್ಗಸಿಂಹನ 'ಪಂಚತಂತ್ರ' ಮುಂತಾದ ಕನ್ನಡ ಪ್ರಾಚೀನ ಕಾವ್ಯಗಳಲ್ಲಿ ದೊರೆಯುವ ಆಧಾರಗಳನ್ನು ಅವರು ಉಲ್ಲೇಖಿಸಿದ್ದಾರೆ.

ಹೀಗೆ ನಮ್ಮ ರಂಗಭೂಮಿ ಮತ್ತು ನಾಟಕಗಳ ಪ್ರಾಚೀನತೆಯನ್ನು ಸ್ಥಾಪಿಸಲು ಹೊರಟ ವಿದ್ವಾಂಸರಿಗೆ ಕನ್ನಡದಲ್ಲಿ 9ನೇ ಶತಮಾನದಿಂದಲೂ ಸಾಹಿತ್ಯೋಚಿತವಾದ ನಾಟಕಗಳಿದ್ದಿರಬೇಕೆಂದು ಊಹಿಸಲು ಕೊನೆಯ ಪಕ್ಷ ಸ್ಥೂಲವಾದ ಆಧಾರಗಳು ಇವೆ ಎಂಬುದನ್ನು ಮೇಲಿನ ನಿರೂಪಣೆ ಸ್ಪಷ್ಟಪಡಿಸುತ್ತವೆ. ಆರಂಭದಲ್ಲಿ ನಾಟಕಗಳಿಲ್ಲದಿದ್ದರೂ ರಂಗಭೂಮಿ ಇತ್ತು. ರಂಗಭೂಮಿಯಲ್ಲಿ ಹಲವಾರು ನಾಟಕಗಳನ್ನು ಪ್ರದರ್ಶಿಸುತ್ತಿದ್ದರು. ಆ ಕಾಲದಲ್ಲಿದ್ದಂತಹ ಜನಪದ ರಂಗಭೂಮಿ ಯಾವುವೆಂದರೆ –

1. ಯಕ್ಷಗಾನ
2. ತಾಳಮದ್ದಲೆ
3. ಗೊಂಬೆಯಾಟ
4. ತೊಗಲು ಗೊಂಬೆಯಾಟ
5. ದೊಡ್ಡಾಟ
6. ಸಣ್ಣಾಟ
7. ವೈಷ್ಣವ ಸಣ್ಣಾಟಗಳು ದಾಸರಾಟ
8. ಶ್ರೀ ಕೃಷ್ಣ ಪಾರಿಜಾತ

ಕೇವಲ ಜನಪದ ರಂಗಭೂಮಿಯಲ್ಲದೇ ವೃತ್ತಿ ರಂಗಭೂಮಿಯೂ ಕೂಡ ಆ ಕಾಲದಲ್ಲಿ ಇದ್ದವು. ಇವರು ನಾಟಕವನ್ನು ಒಂದು ವೃತ್ತಿಯನ್ನಾಗಿ ಸ್ವೀಕರಿಸಿ ಕಂಪನಿಗಳ ಅಡಿಯಲ್ಲಿ ನಾಟಕವನ್ನು ಪ್ರದರ್ಶಿಸುತ್ತಿದ್ದರು. ಅಂದು ಇದ್ದಂತಹ ಪ್ರಮುಖ ನಾಟಕ ಕಂಪನಿಗಳೆಂದರೆ–

1. ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ, ಮೈಸೂರು.
2. ಶ್ರೀ ಶಾಕುಂತಲ ಕರ್ನಾಟಕ ನಾಟಕ ಸಭಾ, ಮೈಸೂರು.
3. ಶ್ರೀ ಚಾಮುಂಡೇಶ್ವರಿ ಕರ್ನಾಟಕ ನಾಟಕ ಸಭಾ, ಮೈಸೂರು.
4. ರಾಜಧಾನಿ ನಾಟಕ ಮಂಡಳಿ, ಮೈಸೂರು.

5. ರತ್ನಾವಳಿ ನಾಟಕ ಸಭಾ, ಮೈಸೂರು.

6. ಗುಬ್ಬಿ ಶ್ರೀ ಚನ್ನ ಬಸವೇಶ್ವರ ಕೃಪಾಪೋಷಿತ ನಾಟಕ ಮಂಡಳಿ

7. ಹಲಸಗಿ ನಾಟಕ ಮಂಡಳಿ

8. ಕರ್ನಾಟಕ ನಾಟಕ ಕಂಪನಿ, ಗದಗ.

ಇವೇ ಮುಂತಾದಂತಹ ನಾಟಕ ಕಂಪನಿಗಳು ನಾಟಕಗಳ ಬೆಳವಣಿಗೆಗಳಿಗೆ ಕಾರಣವಾದವು.

ಕನ್ನಡ ಸಾಹಿತ್ಯದಲ್ಲಿ ನಾಟಕ ಪ್ರಕಾರ ಎಂಬುದು ನವೋದಯದ ಪೂರ್ವದ ಕಾಲಘಟ್ಟದಲ್ಲಿ ಕಂಡು ಬರುವಂತಹದು. ಕನ್ನಡ ಸಾಹಿತ್ಯಕ್ಕೆ ದೀರ್ಘವಾದ ಇತಿಹಾಸವಿದ್ದರೂ ನಾಟಕ ಪ್ರಕಾರದ ಸಾಹಿತ್ಯ ಕಂಡುಬರುವುದಿಲ್ಲ. ಮಹಾಕಾವ್ಯಗಳಲ್ಲಿ ಅಲ್ಲಲ್ಲಿ ನಾಟಕದ ವಿನ್ಯಾಸ, ಸಂಭಾಷಣೆ ಕಂಡು ಬರುವುದಾದರೂ ಪೂರಕವಾದ ನಾಟಕ ರಚನೆಯಾಗಿಲ್ಲ. ಹಾಗಾಗಿ ಕನ್ನಡದಲ್ಲಿ ನಾಟಕ ಸಾಹಿತ್ಯ ಕುರಿತು ವಿವೇಚಿಸುವಾಗ ಇತ್ತೀಚಿನ ಸಾಹಿತ್ಯವನ್ನು ಮಾತ್ರ ಅವಲೋಕಿಸಬೇಕಾಗುತ್ತದೆ.

ನವೋದಯ ಪೂರ್ವ

ಮೈಸೂರು ಒಡೆಯರ ಕಾಲದಲ್ಲಿ ಸಾಹಿತ್ಯ ಅಗಾಧ ಪ್ರಾಮಾಣದಲ್ಲಿ ಬೆಳೆಯಿತು. ಇದೇ ಸಂದರ್ಭದಲ್ಲಿ ನಾಟಕ ಪ್ರಕಾರದ ಬೆಳವಣಿಗೆಯೂ ಕೂಡ ಕಂಡು ಬರುತ್ತದೆ. ಚಿಕ್ಕದೇವರಾಜ ಒಡೆಯರ ಆಸ್ಥಾನ ಕವಿಯಾದ ಸಿಂಗರಾರ್ಯ ಕನ್ನಡ ಅಭಿಜಾತ ನಾಟಕ ಪರಂಪರೆಯ ಮೊದಲ ನಾಟಕಕಾರ. ಈತ ಸಂಸ್ಕೃತದ ಜನಪ್ರಿಯ ನಾಟಕವಾದ 'ಹರ್ಷನ ರತ್ನಾವಳಿ' ನಾಟಕವನ್ನು ಕನ್ನಡದಲ್ಲಿ 'ಮಿತ್ರಾವಿಂದ ಗೋವಿಂದ' ಎಂಬ ಹೆಸರಿನಲ್ಲಿ ಅನುವಾದ ಮಾಡಿದನು. ಇದೇ ಕನ್ನಡದ ಮೊದಲ ನಾಟಕ. ಸಿಂಗರಾರ್ಯನಿಗಿಂತ ಹಿಂದೆ ಯಾರಾದರೂ ಸಂಸ್ಕೃತ ನಾಟಕಗಳನ್ನು ಅನುವಾದಿಸಿದ್ದಿರಬಹುದಾದರೂ ಅವುಗಳಾವವು ಈಗ ಉಪಲಬ್ದವಿಲ್ಲ.

ನವೋದಯ ಪೂರ್ವದ ಅವಧಿಯಲ್ಲಿ ಅನುವಾದದ ಮುಖಾಂತರವೇ ಕನ್ನಡ ನಾಟಕ ರಚನೆ ಆರಂಭವಾಯಿತು. ಸಂಸ್ಕೃತ, ಇಂಗ್ಲೀಷ್, ಹಿಂದೂ, ಸ್ಥಾನಿ, ಮರಾಠಿ ಮುಂತಾದ ಬೇರೆ ಬೇರೆ ಭಾಷೆಗಳಿಂದ ನಾಟಕಗಳನ್ನು ಅನುವಾದಿಸಲಾಯಿತು. ಈ ರೀತಿ ಅನುವಾದಿಸಿದ ಪ್ರಮುಖ ನಾಟಕಕಾರರು ಮತ್ತು ಅವರ ನಾಟಕ ಕೃತಿಗಳೆಂದರೆ, ಚುರುಮುರಿ ಶೇಷಗಿರಿರಾಯರ 'ಶಕುಂತಲ,' ಬಸವಪ್ಪ ಶಾಸ್ತ್ರಿಗಳ 'ಶಾಕುಂತಲ, 'ವಿಕ್ರಮೋರ್ವಶಿಯ ರತ್ನಾವಳಿ', 'ಉತ್ತರ ರಾಮ ಚರಿತೆ', 'ಮಾಲತೀ ಮಾಧವ', 'ಚಂಡ ಕೌಶಿಕ ನಾಟಕ, ಧೊಂಡೋ ನರಸಿಂಹ ಮುಳಬಾಗಲರ 'ಶೂದ್ರಕನ ಮೃಚ್ಛಕಟಿಕ', ಭಟ್ಟನಾರಾಯಣನ 'ವೇಣಿಸಂಹಾರ. ಕಾಳಿದಾಸನ 'ಮಾಳವೀಕಾಗ್ನಿಮಿತ್ರ', ನಂಜನಗೂಡು

ಶ್ರೀಕಂಠಶಾಸ್ತ್ರಿಗಳ 'ರತ್ನಾವಳಿ' 'ಪ್ರಿಯದರ್ಶಿಕ' ಈ ಅವಧಿಯಲ್ಲಿ ಸಂಸ್ಕೃತದ ಪ್ರಸಿದ್ಧ ನಾಟಕಕಾರರಾಧ ಶೂದ್ರಕ, ಭಟ್ಟನಾರಾಯಣ, ಕಾಳಿದಾಸ, ಭಾಸ, ಭವಭೂತಿ, ವಿಶಾಖದತ್ತ, ಹರ್ಷವರ್ಧನ, ರಾಜಶೇಖರ ಮುಂತಾಧ ಸಂಸ್ಕೃತ ನಾಟಕಕಾರರ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸಲಾಯಿತು. ಉಳಿದಂತೆ ಇಂಗ್ಲೀಷ್‌ನಿಂದ ಷೇಕ್ಸ್‌ಪಿಯರಿನ ನಾಟಕಗಳನ್ನು ಕನ್ನಡಕ್ಕೆ ಅನುವಾದಿಸುವ ಕಾರ್ಯ ಎಂ.ಎಂ. ಶ್ರೀಕಂಠೇಗೌಡರಿಂದ ಆರಂಭವಾಯಿತು. ಇವರು ಮ್ಯಾಕ್‌ಬತ್ ನಾಟಕವನ್ನು ಪ್ರತಾಪ ರುದ್ರದೇವ ಎಂಬುದಾಗಿಯೂ, A Mid Summer Nights Dream ನಾಟಕವನ್ನು ಪ್ರಮಿಳಾರ್ಜುನಿಯಂ ಎಂಬುದಾಗಿಯೂ, Othello ಎಂಬ ನಾಟಕವನ್ನು ಶೂರಸೇನ ಚರಿತ್ರೆ ಎಂಬುದಾಗಿಯೂ ರೂಪಾಂತರಿಸಿದರು. ಸಿ. ಆನಂದರಾಯರು ಷೇಕ್ಸ್‌ಪಿಯರ್‌ನ 'ರೋಮಿಯೋ ಜೂಲಿಯಟ್' ಮತ್ತು 'ಹ್ಯಾಮ್ಲೆಟ್' ಎಂಬ ನಾಟಕಗಳನ್ನು ರೂಪಾಂತರಿಸಿದರು.

ನವೋದಯ

ಸಾಮಾನ್ಯವಾಗಿ ಭಾರತದ ಯಾವುದೇ ಭಾಷೆಯಲ್ಲಿ ನಾಟಕ ರಚನೆ ಆರಂಭವಾದದ್ದೇ 19ನೇ ಶತಮಾನದ ಬಳಿಕ. ನವೋದಯ ಸಾಹಿತ್ಯದ ಉಗಮ ಬಿ.ಎಂ.ಶ್ರೀ.ಯವರಿಂದ ಆಯಿತು. ಶ್ರೀಯವರ ಇಂಗ್ಲೀಷ್ ಗೀತೆಗಳು ಮೂಲಕವೇ ನವೋದಯಕ್ಕೆ ನಾಂದಿ ಹಾಡಲಾಯಿತು. ಶ್ರೀಯವರು ಭಾಷಾಂತರ ಮತ್ತು ರೂಪಾಂತರಗಳ ಮೂಲಕ ನಾಟಕ ರಚನೆ ಮಾಡಿದರು. ಅವುಗಳೆಂದರೆ ಗದಾಯುದ್ಧ ನಾಟಕ, ಅಶ್ವತ್ಥಾಮನ್ ಪಾರಸಿಕರು. ನವೋದಯ ಕಾಲಘಟ್ಟದಲ್ಲಿ ನಾಟಕ ಸಾಹಿತ್ಯ ಅಗಾಧವಾಗಿ ಬೆಳೆಯಿತು. ಈ ಅವಧಿಯಲ್ಲಿ ಕುವೆಂಪು, ಮಾಸ್ತಿ, ವೀ.ಸಿ..ಸಿ.ಕೆ. ವೆಂಕಟರಾಮಯ್ಯ, ಪು.ತಿ.ನ. ಮುಂತಾದ ಹಲವಾರು ನಾಟಕಕಾರರು ನಾಟಕ ಪ್ರಕಾರವನ್ನು ಔನ್ನತ್ಯಕ್ಕೆ ಏರಿಸಿದರು. ಈ ಕಾಲಘಟ್ಟದಲ್ಲಿ ರಚನೆಯಾದ ನಾಟಕಗಳನ್ನು ಹಲವಾರು ವಿಧಗಳಾಗಿ ವಿಂಗಡಿಸಬಹುದು.

1. **ಪೌರಾಣಿಕ ನಾಟಕಗಳು:** ಪುರಾಣದ ವಸ್ತುವನ್ನು ಆಯ್ಕೆ ಮಾಡಿಕೊಂಡು ನಾಟಕ ರೂಪದಲ್ಲಿ ರಚನೆ ಮಾಡಲಾಗಿದೆ. ಈ ರೀತಿಯ ಪೌರಾಣಿಕ ನಾಟಕಗಳು ಯಾವುವೆಂದರೆ ನಂಜನಗೂಡು ಶ್ರೀಕಂಠಶಾಸ್ತ್ರಿಗಳ ಸೀತಾ ಪರಿಣಯ, ಸೀತಾ ಸ್ವರ್ಣಮೃಗ, ಅಭಿಜ್ಞಾನ ಪ್ರಧಾನ, ಬೆಳ್ಳಾವೆ ನರಹರಿ ಶಾಸ್ತ್ರಿಗಳ 'ಭಕ್ತಿ ಸಾಮ್ರಾಜ್ಯ,' 'ಶ್ರೀಕೃಷ್ಣ ಪಾರಿಜಾತ,' ಪುಟ್ಟ ಸ್ವಾಮಯ್ಯನವರ 'ಯಾಜ್ಞಸೇನಿ', ಕೆರೂರು ವಾಸುದೇವಾಚಾರ್ಯರ 'ನಳದಮಯಂತಿ,' ಮಾಸ್ತಿಯವರ 'ಸಾವಿತ್ರಿ', 'ಶಾಂತ', 'ಉಷಾ.' ಕುವೆಂಪುರವರ 'ಯಮನಸೋಲು', ವಾಲ್ಮೀಕಿಯ 'ಭಾಗ್ಯ', 'ಶೂದ್ರ ತಪಸ್ವಿ', 'ಬೆರಳ್ಗೆ ಕೊರಳ್', 'ಶ್ಮಶಾನ ಕುರುಕ್ಷೇತ್ರ', 'ಚಂದ್ರಹಾಸ', 'ಮಹಾರಾತ್ರಿ', 'ಜಲಗಾರ', ಸಿ.ಕೆ. ವೆಂಕಟರಾಮಯ್ಯನವರ 'ಮಂಡೋದರಿ', ಬಿ. ಸೀತಾರಾಮಯ್ಯನವರ

ಆಗ್ರಹ. ಜಿ.ಪಿ. ರಾಜರತ್ನಂರವರ 'ಬಾಹುಬಲಿ ವಿಜಯಂ', 'ಗೊಮ್ಮಟಶಿಲ್ಪಿ,' 'ಗಂಡುಗೊಡಲಿ,' ಅ.ನ.ಕೃ ರವರ 'ಸ್ವರ್ಣಮೂರ್ತಿ', ಮತ್ತು 'ಹಿರಣ್ಯಕಶಿಪು.' ಪ್ರಭುಶಂಕರರ 'ಆಮ್ರಪಾಲಿ' ಮತ್ತು 'ಅಂಗುಲಿಮಾಲ' ಇವೇ ಮುಂತಾದ ನಾಟಕಗಳನ್ನು ಪೌರಾಣಿಕ ವಸ್ತುವಿನ ಹಿನ್ನೆಲೆಯಲ್ಲಿ ರಚಿಸಿದ್ದಾರೆ.

2. **ಐತಿಹಾಸಿಕ ನಾಟಕ** : ಐತಿಹಾಸಿಕವಾಗಿ ಪ್ರಸಿದ್ಧವಾಗಿರುವ ವಿಷಯಗಳನ್ನು ಆಧರಿಸಿ ನಾಟಕ ರಚನೆ ಮಾಡಲಾಗಿದೆ. ಇಂತಹ ಪ್ರಮುಖವಾದ ಐತಿಹಾಸಿಕ ನಾಟಕಗಳೆಂದರೆ ಸಂಪರ, ಬೆಟ್ಟದ ಅರಸು, ವಿಗಡ ವಿಕ್ರಮರಾಯ, ವಿಜಯ ನಾರಸಿಂಹ, ಮಂತ್ರಶಕ್ತಿ, ಬಿರುದಂತೆಂಬರ ಗಂಡ ಮತ್ತು ಸುಗುಣ ಸಂಬಂಧ, ಎಂ.ಆರ್. ಶ್ರೀಯವರ 'ಕಂಠೀರವ ವಿಜಯ' ಮತ್ತು 'ಧರ್ಮದುರಂತ,' ಡಿ.ವಿ.ಜಿ.ಯವರ 'ವಿದ್ಯಾರಣ್ಯ ವಿಜಯ,' ಮಾಸ್ತಿಯವರ 'ಕಾಕನಕೋಟೆ,' ಕಾರ್ನಾಡರ 'ತುಘಲಕ್', ಲಂಕೇಶರ 'ಸಂಕ್ರಾಂತಿ' ಇವೇ ಮುಂತಾದ ಐತಿಹಾಸಿಕ ನಾಟಕಗಳನ್ನು ಕಾಣಬಹುದು.

3. **ಸಾಮಾಜಿಕ ನಾಟಕ** : ಸಮಕಾಲೀನ ಸಮಸ್ಯೆಗಳನ್ನು, ಸಮಾಜದ ಇತರ ವಿಷಯಗಳನ್ನು ಕುರಿತು ನಾಟಕಕಾರರು ನಾಟಕ ರಚನೆ ಮಾಡಿದ್ದಾರೆ. ಇಂತಹ ಸಾಮಾಜಿಕ ನಾಟಕಗಳಲ್ಲಿ ಪ್ರಮುಖವಾದವುಗಳೆಂದರೆ 'ಇಗ್ಗಪ್ಪ ಹೆಗ್ಗಡೆಯ ವಿವಾಹ ಪ್ರಹಸನ', 'ಆರು ಬೆರಳಿನ ಕುರುಹು,' 'ಕನ್ಯಾ ವಿಕ್ರಯ', ಕೈಲಾಸಂರವರ 'ಟೊಳ್ಳುಗಟ್ಟಿ,' 'ನಮ್ಮಕ್ಲಬ್ಬು,' 'ಅನುಕೂಲಕ್ಕೆ ಒಬ್ಬಣ್ಣ,' 'ಸತ್ತವನ ಸಂತಾಪ,' 'ನಮ್ಮ ಕಂಪನಿ, 'ಬಂಡ್ವಾಳವಿಲ್ಲದ ಬಡಾಯಿ', 'ವೈದ್ಯನ ವ್ಯಾಧಿ,' 'ಬಹಿಷ್ಕಾರ,' 'ತಾಳಿಕಟ್ಟೋಕ್ಕೂಲೀನೆ', 'ಸೂಳೆ', 'ಪೋಲಿ ಕಿಟ್ಟಿ,' 'ಅಮ್ಮಾವ್ರ ಗಂಡ' ಮತ್ತು 'ಹೋಂ ರೂಲ್,' ಶ್ರೀರಂಗರ 'ಹರಿಜನ್ವಾರ, 'ಸಂಧ್ಯಾಕಾಲ', 'ಸಂಸಾರಿಗ ಕಂಸ,' 'ಶೋಕ ಚಕ್ರ,' 'ಸ್ವರ್ಗಕ್ಕ ಮೂರೇ ಬಾಗಿಲು', 'ರಂಗಭಾರತ', 'ಕೇಳು ಜನುಮೇಜಯ'. ಅ.ನ.ಕೃ.ರವರ 'ಧರ್ಮ ಸಂಕಟ', ಶಿವರಾಮಕಾರಂತರ 'ಗರ್ಭಗುಡಿ', ಬೇಂದ್ರೆಯವರ 'ಉದ್ಧಾರ' ಮತ್ತು 'ನಗೆಯ ಹೊಗೆ,' ವಿ.ಕೃ.ಗೋಕಾಕರ 'ಜನನಾಯಕ', ಕೀರ್ತಿನಾಥ ಕುರ್ತಕೋಟಿಯವರ 'ಆಮನಿ,' ಜಿ.ಬಿ.ಜೋಷಿಯವರ 'ಮೂಕಬಲಿ' ಮತ್ತು 'ಕದಡಿದ ನೀರು', ಲಂಕೇಶರ 'ಬಿ. ಪ್ರಸನ್ನನ ಗೃಹಸ್ಥಾಶ್ರಮ,' 'ನನ್ನ ತಂಗಿಗೊಂದು ಗಂಡು ಕೊಡಿ', 'ತೆರೆಗಳು' ಮತ್ತು 'ಗಿಳಿಯು ಪಂಜರದೊಳಿಲ್ಲ', ಮತ್ತು 'ಬಿರುಕು' ಇವೇ ಮುಂತಾದ ಹಲವಾರು ಸಾಮಾಜಿಕ ನಾಟಕಗಳನ್ನು ಕಾಣಬಹುದು.

4. **ಪ್ರಹಸನ** : ಪ್ರಹಸನಗಳ ಗುರಿ, ಮನರಂಜನೆ ಸಮಾಜದಲ್ಲಿ ಕಂಡುಬರುವ ಅಸಾಂಗತ್ಯಗಳನ್ನು, ಮನುಷ್ಯನ ಮಾತು, ಸ್ವಭಾವ ಮತ್ತು ನಡವಳಿಕೆಗಳ ವಿರೋಧಾಭಾಸಗಳನ್ನು ಅತಿಶಯೋಕ್ತಿಯಿಂದ ಒಡ್ಡಿ ನಗಿಸುವ ನಾಟಕಗಳೇ ಪ್ರಹಸನ. ಇಂತಹ ಪ್ರಮುಖ ಪ್ರಹಸನಗಳೆಂದರೆ ಬೆಳ್ಳಾವೆ ನರಹರಿ ಶಾಸ್ತ್ರಿಗಳ ಶ್ರೀ ಕೃಷ್ಣ ಪಾರಿಜಾತ ಮತ್ತು ಶ್ರೀ ಕೃಷ್ಣ ಗಾರುಡಿ, ಕೈಲಾಸಂ ಅವರ ಬಂಡ್ವಾಳವಿಲ್ಲದ ಬಡಾಯಿ, ಸೀ ಕರ್ಣೆ ಸಾವಿತ್ರಿ, ಸತ್ತವನ ಸಂತಾಪ, ಶಿವರಾಮಕಾರಂತರ ನಾಟಕವೆಂಬ ನಾಟಕ ಮತ್ತು ಸುಭದ್ರಾ ಕಲ್ಯಾಣ, ಶ್ರೀರಂಗರ ಸಂಪುಷ್ಪ ರಾಮಾಯಣ, ಬೇಂದ್ರೆಯವರ ಸಾಯೋ ಆಟ ಮತ್ತು ದೆವ್ವದ ಮನೆ ಚಂದ್ರಶೇಖರ ಪಾಟೀಲರ ಟಿಂಗರ ಬುಡ್ಡಣ್ಣ, ಪರ್ವತವಾಣಿಯವರ ಮೀನಾಮದುವೆ, ಪದ್ಮಾವತಿ ಪರಿಣಯ ಸಪ್ತಪದಿ ಮತ್ತು ಜೇನುಗೂಡು, ನಾ. ಕಸ್ತೂರಿಯವರ ವರ ಪರೀಕ್ಷೆ ಇವೇ ಮುಂತಾದ ಪ್ರಹಸನಗಳನ್ನು ಕಾಣಬಹುದು.

5. **ಗೀತನಾಟಕ** : ಗೀತನಾಟಕ ಎಂದರೆ ಛಂದೋಬದ್ಧವಾದ ಹಾಡುಗಳಲ್ಲಿ ಸಂಭಾಷಣೆಗಳನ್ನು ಒಳಗೊಂಡಿರುವ ದೃಶ್ಯಕಾವ್ಯ. ಆಧುನಿಕ ಕನ್ನಡ ನಾಟಕ ಪರಂಪರೆಯ ಒಂದು ವಿಶಿಷ್ಟ ಪ್ರಕಾರವಾದ ಗೀತನಾಟಕಕ್ಕೆ ಪ್ರೇರಣೆ ಪಾಶ್ಚಾತ್ಯ 'ಅಪೇರಾ'ಗಳು ಆದರೆ ನಮ್ಮ ಗೀತ ನಾಟಕಗಳಿಗೆ ಭಾರತೀಯ ಹಿನ್ನೆಲೆಯಿದೆ ಎಂಬ ಅಂಶವನ್ನು ಮರೆಯುವಂತಿಲ್ಲ. ಈ ಸಂಬಂಧದಲ್ಲಿ ಜಯದೇವ ಕವಿಯ "ಗೀತ ಗೋವಿಂದ"ವನ್ನು ಉಲ್ಲೇಖಿಸಬಹುದು. ತಮಿಳು, ತೆಲುಗು ಸಾಹಿತ್ಯದಲ್ಲಿಯೂ ಪ್ರಾಚೀನ ಕಾಲದಲ್ಲಿ ಗೀತ ರೂಪಕಗಳನ್ನು ಹೋಲುವಂತಹ ರಚನೆಗಳಿದ್ದುವೆಂದು ಕನ್ನಡ ಯಕ್ಷಗಾನ ಪರಂಪರೆ ಗೀತನಾಟಕಕ್ಕೆ ಹತ್ತಿರವಾದುದು. ವಸ್ತು, ನಿರೂಪಣೆ, ಸಂಗೀತಕ್ಕಿರುವ ಮಹತ್ವ, ನೃತ್ಯ, ಅಭಿನಯ ಮುಂತಾದ ಎಲ್ಲಾ ನಿಟ್ಟಿನಿಂದಲೂ ಯಕ್ಷಗಾನಗಳು ಗೀತರೂಪಕಗಳನ್ನು ಹೋಲುತ್ತವೆ. ಗೀತ ನಾಟಕದ ಸಂಭಾಷಣೆಯೆಲ್ಲವೂ ಪದ್ಯದಲ್ಲಿರುವುದರಿಂದ ಕಾವ್ಯ ಮತ್ತು ಸಂಗೀತದ ಸಂಬಂಧವೂ ಇಲ್ಲಿ ಏರ್ಪಡುತ್ತಿದೆ. ಗೀತ ನಾಟಕದ ಭಾಷೆಯೇ ಸಂಗೀತ. ಆದುದರಿಂದ ಈ ನಾಟಕಗಳನ್ನು ರಚಿಸುವವರೆಗೆ ಸಂಗೀತದಲ್ಲಿ ಆಳವಾದ ಪರಿಶ್ರಮವಿರಬೇಕಾಗುತ್ತದೆ.

ಕನ್ನಡದ ಪ್ರಮುಖವಾದ ಗೀತ ನಾಟಕಗಳೆಂದರೆ, ಪು.ತಿ.ನ. ಅವರ 'ವಸಂತಚಂದನ', 'ವರ್ಷ ಹರ್ಷ', ಶರದ್ವಿಲಾಸ, ದೀಪಲಕ್ಷ್ಮಿ, ರಾಮೋದಯಂ, ಸೀತಾ ಪರಿಣಯಂ, ಹರಿಣಾಭಿಸರಣ, ಶಬರಿ, ಶ್ರೀರಾಮ ಪಟ್ಟಾಭಿಷೇಕ, ಗೋಕುಲ ನಿರ್ಗಮನ. ಕವಿ ದೋಣಿಯ ಜನದ ಸತ್ಯಾಯನ ಹರಿಶ್ಚಂದ್ರ ಮತ್ತು ಅಹಲ್ಯೆ, ಶಿವರಾಮಕಾರಂತರ ಲವಕುಶ,

ಸಾವಿತ್ರಿ, ಸತ್ಯವಾನ್, ಕಿಸಾಗೋತಮಿ, ಬುದ್ಧೋದಯ, ಮುಕ್ತದ್ವಾರ, ಋತುಯಾತ್ರೆ, ಬದುಕಬಹುದು. ಸುಲಿಗೆಗೆ ಇಲ್ಲವೋ ಸಾವು ಮತ್ತು ಸೋಮಿಯ ಸೌಭಾಗ್ಯ, ಕೀರ್ತಿನಾಥ ಕುರ್ತುಕೋಟಿಯವರ ಸ್ವಪ್ನದರ್ಶಿ, ರಾಮಾವಸಾನ, ಮಹಾಪ್ರಸ್ಥಾನ, ಶೋಕವೃಕ್ಷ ಮತ್ತು ಮಹಾಶ್ವೇತ ಇವೇ ಮುಂತಾದ ಗೀತ ನಾಟಕಗಳನ್ನು ಕಾಣಬಹುದು.

6. **ಅಸಂಗತ ನಾಟಕ** : ವಸ್ತು, ಪಾತ್ರ, ಸನ್ನಿವೇಶಗಳಲ್ಲಿ ಮೇಲುನೋಟಕ್ಕೆ ಸಾಮಂಜಸ್ಯವಿಲ್ಲದಿರುವಂತೆ ರಚಿತವಾದ ಒಂದು ಬಗೆಯ ನಾಟಕವನ್ನು ಅಸಂಗತ ನಾಟಕ ಎನ್ನುವರು. ಈ ಅಸಂಗತ ನಾಟಕಗಳು ನವ್ಯದ ಕಾಲಘಟ್ಟದಲ್ಲಿ ಕಂಡುಬರುತ್ತವೆ. ಆಧುನಿಕ ಕನ್ನಡ ಹವ್ಯಾಸಿ ರಂಗಭೂಮಿಯಲ್ಲಿ ಕೆಲವು ಬೆಲೆಯುಳ್ಳ ಪ್ರಯೋಗಗಳಿಗೆ ಕಾರಣವಾದ ನವ್ಯ ನಾಟಕಗಳು ಕನ್ನಡ ನಾಟಕ ಸಾಹಿತ್ಯಕ್ಕೆ ಹೊಸ ಆಯಾಮವೊಂದನ್ನು ಸೃಷ್ಟಿಸಿದವು. ಕನ್ನಡ ನವ್ಯ ನಾಟಕವನ್ನು ಪ್ರಭಾವಿಸಿದ ಮುಖ್ಯವಾದ 2 ಪಾಶ್ಚಾತ್ಯ ಮೂಲಗಳೆಂದರೆ ಅಸಂಗತ ರಂಗಭೂಮಿ ಮತ್ತು ಎಪಿಕ್ ರಂಗಭೂಮಿಗಳು. ನವ್ಯ ನಾಟಕಕಾರರು, ಪಾಶ್ಚಾತ್ಯ ಅಸಂಗತ ನಾಟಕಕಾರರಾದ ಕಾಮು, ಸಾರ್ಥ್, ಬೆಕೆಟ್, ಅಯನಿಸ್ಕೊ, ಪಿಂಟರ್, ಜೀನೆ ಮುಂತಾದವರ ಪ್ರಭಾವದಿಂದ ಕನ್ನಡದಲ್ಲಿ ಅಸಂಗತ ನಾಟಕಗಳನ್ನು ರಚಿಸಿದ್ದಾರೆ.

ಕನ್ನಡದಲ್ಲಿ ಕಂಡುಬರುವ ಪ್ರಮುಖ ಅಸಂಗತ ನಾಟಕಗಳೆಂದರೆ, ಲಂಕೇಶ್ವರ, ಪೊಲೀಸರಿದ್ದಾರೆ ಎಚ್ಚರಿಕೆ, ಕ್ರಾಂತಿ ಬಂತು ಕ್ರಾಂತಿ, ಪೂರ್ಣಚಂದ್ರ ತೇಜಸ್ವಿಯವರ ಯಮಳ ಪ್ರಶ್ನೆ, ಚಂದ್ರಶೇಖರ ಕಂಬಾರರ ನಾರ್ಸಿಸಸ್, ಮತ್ತು ಚಾಳೇಶ, ಚಂದ್ರಶೇಖರ ಪಾಟೀಲರ ಟಂಗರ ಬುಡ್ಡಣ್ಣ, ಕೊಡೆಗಳು, ಗುರ್ತಿನವರು ಮತ್ತು ಕುಂಟ ಕುಂಟ ಕುರವತ್ತಿ, ನ. ರತ್ನರವರ ಗೋಡೆ ಬೇಕೆ ಗೋಡೆ, ಎಲ್ಲಿಗೆ ಮತ್ತು ಬೊಂತೆ. ಕುಸನೂರರ ಇದಕೆ ಸಂಶಯವಿಲ್ಲ. ಮತ್ತು ರತ್ತೋ ರತ್ತೋ ರಾಯನ ಮಗಳೆ, ಚದುರಂಗರ ಇಲಿಬೋನು, ಯು.ಆರ್. ಅನಂತಮೂರ್ತಿಯವರ ಆವಾಹನೆ, ಜಿ.ಬಿ. ಜೋಷಿಯವರ ನಾನೇ ಬಿಜ್ಜಳ ಮುಂತಾದ ಅಸಂಗತ ನಾಟಕಗಳನ್ನು ಕಾಣಬಹುದು.

ಇವೇ ಅಲ್ಲವೆ ಕನ್ನಡದಲ್ಲಿ ಏಕಾಂತ ನಾಟಕಗಳು, ಪ್ರಸಾರ ನಾಟಕಗಳು, ಮಕ್ಕಳ ನಾಟಕಗಳು ಮುಂತಾದ ಹಲವಾರು ನಾಟಕ ಪ್ರಕಾರಗಳನ್ನು ಕಾಣಬಹುದು.

ನಾಟಕ ಸಾಹಿತ್ಯ ಧರ್ಮದ ಹಿನ್ನೆಲೆಯಲ್ಲಿ ಹುಟ್ಟಿ ಬಂದರೂ ಹಂತಹಂತವಾಗಿ ಬೆಳೆದು ಇಂದು ಒಂದು ಬೃಹತ್‌ಸ್ಥಾನವನ್ನು ಪಡೆದುಕೊಂಡಿದೆ. ಪ್ರಪಂಚದ ಎಲ್ಲಾ ಭಾಷೆಗಳಲ್ಲಿಯೂ ನಾಟಕಗಳನ್ನು ಕಾಣಬಹುದು. ನಾಟಕ ನಟನ ಪ್ರದರ್ಶನಕ್ಕಾಗಿ ರಚಿತವಾಗಿರುವ ಒಂದು ಸಾಹಿತ್ಯ

ಪ್ರಕಾರವಾಗಿರುವುದರಿಂದ ಇದು ಉಳಿದ ಸಾಹಿತ್ಯ ಪ್ರಕಾರಗಳಿಗಿಂತ ಭಿನ್ನವಾಗಿ ಜನರ ಮನಸ್ಸಿನಲ್ಲಿ ನೆಲೆಯೂರಿದೆ. ಕನ್ನಡದಲ್ಲಿ ನಾಟಕ ಪ್ರಕಾರ ಆರಂಭವಾಗುವುದು ಸಿಂಗರಾರ್ಯನಿಂದಲೇ. ಆರಂಭದಲ್ಲಿ ರೂಪಾಂತರ ಮತ್ತು ಭಾಷಾಂತರಗಳ ಮೂಲಕ ಕನ್ನಡದಲ್ಲಿ ನಾಟಕ ರಚನೆ ಆದವು. ಅನಂತರ ಹಲವಾರು ಸ್ವತಂತ್ರ ನಾಟಕಗಳು, ಹೊಸಗನ್ನಡ ಸಾಹಿತ್ಯದ ಎಲ್ಲಾ ಕಾಲಘಟ್ಟಗಳಲ್ಲೂ ರಚನೆಯಾಗಿವೆ. ಈ ರೀತಿ ರಚನೆಯಾಗುವಾಗ ಒಂದೇ ಪ್ರಕಾರದಲ್ಲಿ ರಚನೆ ಆಗಿದೆ. ಬೇರೆ ಬೇರೆ ಪ್ರಕಾರಗಳಲ್ಲಿ ರಚನೆಯಾಗಿ ನಾಟಕ ಸಂಖ್ಯೆಯಲ್ಲಿ ಮತ್ತು ಗುಣದಲ್ಲಿ ಉನ್ನತ ಸ್ಥಾನವನ್ನು ತಲುಪಿದೆ.

ಅಧ್ಯಾಯ – 3

ಇತಿಹಾಸ ಮತ್ತು ಬುದ್ಧ

ಕ್ರಿ.ಪೂ. 6ನೇ ಶತಮಾನದ ವೇಳೆಗೆ ಭಾರತದಲ್ಲಿ ವೈದಿಕ ಧರ್ಮ ಒಂದು ಉಚ್ಛ್ರಾಯ ಸ್ಥಿತಿಯನ್ನು ತಲುಪಿದ್ದಿತು. ಈ ವೇಳೆಗೆ ವೈದಿಕ ಧರ್ಮ ಸಂಪೂರ್ಣವಾಗಿ ಪುರೋಹಿತಶಾಹಿಗಳ ಹಿಡಿತಕ್ಕೆ ಒಳಪಟ್ಟಿದ್ದಿತು. ಈ ಪುರೋಹಿತ ಶಾಹಿಗಳು ವೈದಿಕ ಧರ್ಮದ ನೀತಿ ನಿಯಮಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ, ಅರ್ಥೈಸಿ, ಸಾಮಾನ್ಯ ಜನರು ಈ ಧರ್ಮವನ್ನು ಅನುಸರಿಸಲು ಸಾಧ್ಯವಾಗದ ಮಟ್ಟಿಗೆ ಪ್ರತಿಬಂಧಕಗಳನ್ನು ವಿಧಿಸಿದ್ದರು. ಪ್ರತಿಯೊಂದು ವಿಷಯಕ್ಕೂ ಯಜ್ಞಯಾಗಾದಿಗಳನ್ನು ನಡೆಸಬೇಕಾಗಿದ್ದಿತು. ಯಜ್ಞ ಯಾಗಾದಿಗಳನ್ನು ನಡೆಸುವುದು ಸಾಮಾನ್ಯ ಜನರಿಗೆ ಅಸಮಾನ್ಯವಾಗಿದ್ದಿತು. ಆದರೆ ಪುರೋಹಿತಶಾಹಿಗಳು ತಮ್ಮ ಹೊಟ್ಟೆಯ ಹಿಟ್ಟಿಗಾಗಿ ಸಾಮಾನ್ಯರ ಪ್ರಾಣವನ್ನು ಕಿತ್ತು ತಿನ್ನುತ್ತಿದ್ದರು. ಹೀಗಾಗಿ ಈ ವೇಳೆಗೆ ವೈದಿಕ ಧರ್ಮಕ್ಕೆ ಪರ್ಯಾಯವಾಗಿ ಸುಲಭವಾಗಿ ಕೈಗೆಟಕುವಂತಹ ಧರ್ಮದ ನಿರೀಕ್ಷೆಯಲ್ಲಿ ಆ ಕಾಲದ ಜನರಿದ್ದರು. ಇಂತಹ ಒಂದು ಅನುಕೂಲಕರ ವಾತಾವರಣದ ಸಮಯದಲ್ಲಿ ಜನರ ಮೆಚ್ಚುಗೆಗೆ ಅರ್ಹವಾಗುವಂತಹ 2 ಧರ್ಮಗಳು ಉದಯವಾದುವು. ಅವೇ ಜೈನಧರ್ಮ ಮತ್ತು ಬೌದ್ಧ ಧರ್ಮ.

ನಮ್ಮ ಈ ಅಧ್ಯಯನದ ಉದ್ದೇಶದಲ್ಲಿ ಬೌದ್ಧ ಧರ್ಮ ಮತ್ತು ಗೌತಮಬುದ್ದ ಮುಖ್ಯವಾಗಿರುವುದರಿಂದ ಇಲ್ಲಿ ಗೌತಮ ಬುದ್ದ ಮತ್ತು ಬೌದ್ಧ ಧರ್ಮವನ್ನು ಕುರಿತು ವಿವೇಚಿಸಲಾಗುತ್ತದೆ. (ಜೈನ ಧರ್ಮದ ವಿವೇಚನೆ ನಮಗೆ ಇಲ್ಲಿ ಅಪ್ರಸ್ತುತ)

ಬುದ್ದನ ಮೂಲ ಹೆಸರು ಸಿದ್ಧಾರ್ಥ ಇಲ್ಲವೆ ಗೋತಮ. ಈತನು ಗೌತಮ ಗೋತ್ರದವನು. ನೇಪಾಳ ತರಾಯಿಯಲ್ಲಿನ ಕಪಿಲ ವಸ್ತುವಿನ ಶಾಕ್ಯ ಕುಲಕ್ಕೆ ಸೇರಿದವನಾಗಿದ್ದನು. ಕಪಿಲ ವಸ್ತುವಿನ ರಾಜನಾಗಿದ್ದ ಶುದ್ಧೋದನ ಮತ್ತು ಮಾಯಾದೇವಿ ಈತನ ತಂದೆ ತಾಯಿ. ಸಿದ್ಧಾರ್ಥನು ಕ್ರಿ.ಪೂ. 565ರಲ್ಲಿ ಕಪಿಲ ವಸ್ತುವಿನ ಬಳಿ ಲುಂಬಿನಿ ವನ (ಗ್ರಾಮ)ದಲ್ಲಿ ಜನಿಸಿದನು. ಈತನು ಹುಟ್ಟಿದ 7ನೆಯ ದಿನದಂದು ಈತ ತಾಯಿ ಮಾಯಾದೇವಿ ಮಡಿದಳು. ಶುದ್ಧೋದನ ಮತ್ತು ಮಾಯಾದೇವಿಯ ಸೋದರಿ ಮಹಾಪ್ರಜಾಪತಿ ಗೌತಮಿ ಸಿದ್ಧಾರ್ಥನನ್ನು ಬಹು ಅಕ್ಕರೆಯಿಂದ ಜೋಪಾನ ಮಾಡಿದರು. ಈತನ ಘನವಂತಿಕೆಯ ಲಕ್ಷಣಗಳನ್ನು ಕಂಡ ಜ್ಯೋತಿಷಿಗಳು ಈ ಮಗು ಮುಂದೆ ಮಹಾ ಸಾಮ್ರಾಟ ಇಲ್ಲವೇ ವಿಖ್ಯಾತ ಧರ್ಮಗುರು ಆಗುವನೆಂದು ಭವಿಷ್ಯ ನುಡಿದರು. ತನ್ನ ಮಗನು ಸನ್ಯಾಸಿಯಾಗದಿರಲೆಂದು ಬಯಸಿದ ರಾಜ ಶುದ್ಧೋದನನು ಈತನ ಮೇಲೆ ದುಃಖ ದುಮ್ಮಾನಗಳ

ನೆರಳು ಕೂಡ ಬೀಳದಂತೆ ಎಚ್ಚರಿಕೆ ವಹಿಸಿದನು. ಸಿದ್ಧಾರ್ಥನಿಗೆ ತಕ್ಕ ಶಿಕ್ಷಣವನ್ನು ಮತ್ತು ಸಕಲ ಸುಖ ಭೋಗಗಳನ್ನು ಒದಗಿಸಿದನು. ಆದರೆ ಅಂತರ ಮುಖಿಯಾಗಿ ಆತ್ಮಚಿಂತನೆಗೈಯುವ ಸ್ವಭಾವದ ಸಿದ್ಧಾರ್ಥನು ಲೌಕಿಕ ಭೋಗ ಭಾಗ್ಯಗಳಿಂದ ಸಂತೃಪ್ತನಾಗಿರಲಿಲ್ಲ. ಐಹಿಕ ಸುಖದಲ್ಲೇ ಸಿದ್ಧಾರ್ಥನು ತೊಡಗಿರಬೇಕೆಂದು ಬಯಸಿದ ಶುದ್ಧೋದನನು ಆತನಿಗೆ ಹದಿನಾರನೆಯ ವರ್ಷದಲ್ಲಿ ಯಶೋಧರಾ (ಬಿಂಬಾ, ಗೋಪ, ಸುಭದ್ರಕ ಎಂದು ಕರೆಯುತ್ತಿದ್ದ) ಎಂಬ ಸುಂದರ ಕ್ಷತ್ರಿಯ ಕನ್ಯೆಯೊಡನೆ ವಿವಾಹ ಮಾಡಿದನು.

ಸಿದ್ಧಾರ್ಥನು ತನ್ನ 29ನೇ ವಯಸ್ಸಿನವರೆಗೆ ಅರಮನೆಯ ಸಕಲ ಸೌಕರ್ಯಗಳ ವಾತಾವರಣದಲ್ಲಿ ಜೀವನ ನಡೆಸಿದನು. ಆದರೆ ವಿಚಾರ ಪರನಾಗಿದ್ದ ಈತನು ಐಹಿಕ ಭೋಗ–ಭಾಗ್ಯಗಳಿಗೆ ಮಾರುಹೋಗಿರಲಿಲ್ಲ. ಚಿಕ್ಕಂದಿನಿಂದಲೂ ಸಿದ್ಧಾರ್ಥನು ಆಗಾಗ ಧ್ಯಾನಮಗ್ನನಾಗುತ್ತಿದ್ದನು. 29ನೇ ವಯಸ್ಸಿನಲ್ಲಿ ಒಂದು ದಿನ ಈತನು ಕಪಿಲ ವಸ್ತು ನಗರದಲ್ಲಿ ಹೋದಾಗ ಒಬ್ಬ ವೃದ್ಧ, ಒಬ್ಬ ರೋಗಿ, ಒಂದು ಶವ ಮತ್ತು ಒಬ್ಬ ಸನ್ಯಾಸಿಯನ್ನು ಕಂಡನು. ಈ ದೃಶ್ಯಗಳು ಈತನ ಮನಸ್ಸಿನ ಮೇಲೆ ಗಾಢವಾದ ಪರಿಣಾಮವನ್ನು ಬೀರಿದವು. ಮಾನವ ಜೀವನದ ಕಷ್ಟ ನಷ್ಟಗಳನ್ನು ಕಂಡು ಸಿದ್ಧಾರ್ಥನ ಮನಸ್ಸು ತಲ್ಲಣಿಸಿತು. ಇಂತಹ ಸ್ಥಿತಿಯಲ್ಲಿರುವಾಗ ಈತನ ಹೆಂಡತಿ ಯಶೋಧರಾ ಗಂಡು ಮಗುವಿಗೆ ಜನ್ಮವಿತ್ತಳು. ಪುತ್ರ ಜನನದ ವಾರ್ತೆಯಿಂದ ಸಿದ್ಧಾರ್ಥನಿಗೆ ಸಂತಸವಾಗಲಿಲ್ಲ. ಪುತ್ರ ಜನ್ಮವು ತನಗೆ ಬಂಧನವೆಂದು ಭಾವಿಸಿ ಮಗನಿಗೆ "ರಾಹುಲ"(ತೊಡರು) ಎಂದು ಹೆಸರಿಟ್ಟನು. ಐಹಿಕ ಸುಖ ಭೋಗಗಳು ಕ್ಷಣಿಕ ಹಾಗೂ ನಿರರ್ಥಕೆಂಬುದು ಈತನಿಗೆ ಮನದಟ್ಟಾಯಿತು. ಒಂದು ದಿನ ರಾತ್ರಿ ನರ್ತಕಿಯರು ಮತ್ತು ಗಾಯಕಿಯರು ರಾಜಕುಮಾರ ಸಿದ್ಧಾರ್ಥನನ್ನು ರಂಜಿಸಲು ತುಂಬಾ ಶ್ರಮಿಸಿದರು. ಆದರೆ ರಾಜಕುಮಾರನು ಮನರಂಜನಾ ಕಾರ್ಯಕ್ರಮಗಳಲ್ಲಿ ಆಸಕ್ತಿ ತೋರದೆ ನಿದ್ರಿಸಲಾರಂಭಿಸಿದನು. ನರ್ತಕಿಯರು ಹಾಗೂ ಗಾಯಕಿಯರು ಕೂಡ ಮಲಗಿಬಿಟ್ಟರು ನಡು ರಾತ್ರಿಯಲ್ಲಿ ಎಚ್ಚೆತ್ತ ಸಿದ್ಧಾರ್ಥನು ಅಸ್ತವ್ಯವಸ್ತವಾಗಿ ಮಲಗಿ, ಆಕಳಿಸುತ್ತಿದ್ದ ಮತ್ತು ಹೊರಳಾಡುತ್ತಿದ್ದ ಆ ಸ್ತ್ರೀಯರ ಅಸಹ್ಯ ದೃಶ್ಯವನ್ನು ಕಂಡನು. ಇದರಿಂದಾಗಿ ಆತನಲ್ಲಿ ವಿರಕ್ತ ಭಾವನೆ ಉತ್ಕಟವಾಯಿತು. ಮಾನವ ಜೀವನದ ಎಲ್ಲಾ ದುಃಖಗಳಿಗೆ ಶಾಶ್ವತ ಪರಿಹಾರ ಕಂಡುಹಿಡಿಯಲು ಯತ್ನಿಸಬೇಕೆಂದು ನಿಶ್ಚಯಿಸಿದನು. ಆ ಮಧ್ಯರಾತ್ರಿಯಲ್ಲಿ ಸಿದ್ಧಾರ್ಥನು ತನ್ನ ಹೆಂಡತಿ, ಮಗ, ತಂದೆ, ಬಾಂಧವರು ಮತ್ತು ಅರಮನೆಯ ಭೋಗ ಭಾಗ್ಯಗಳನ್ನು ತೊರೆದು ತನ್ನ ನೆಚ್ಚಿನ ಕುದುರೆಯಾದ ಕಂಥಕವನ್ನು ಏರಿ ಅನೋಮ ನದಿ ತೀರಕ್ಕೆ ಬಂದನು. ಅಲ್ಲಿ ಸರ್ವವನ್ನು ತ್ಯಜಿಸಿ ಪರಿವ್ರಾಜಕ ಸನ್ಯಾಸಿಯ ಜೀವನವನ್ನು ಸ್ವೀಕರಿಸಿದನು.

ತನ್ನ 29ನೇ ವಯಸ್ಸಿನಲ್ಲಿ ಸಂಸಾರವನ್ನು ತ್ಯಜಿಸಿ ಸನ್ಯಾಸಿಯಾದ ಸಿದ್ದಾರ್ಥನು ಮೊದಲು ರಾಜಗೃಹದಲ್ಲಿ ಆಲಾರ ಕಾಲಾಮ ಮತ್ತು ಉದ್ರಿಕ ರಾಮಪುತ್ರ ಎಂಬ ಗುರುಗಳ ಶಿಷ್ಯನಾಗಿ ತತ್ವಜ್ಞಾನ ಕಲಿತನು. ಅನಂತರ ಬೋಧಿಸತ್ವನು (ಸಿದ್ದಾರ್ಥನು) ಗಯಾ ಬಳಿಯ ಉರುವೇಲಕ್ಕೆ ಹೋಗಿ ಅಲ್ಲಿ ಕಠೋರವಾದ ತಪಸ್ಸನನು ಆಚರಿಸಿದನು. ಉಪವಾಸ ನಿರಾಹಾರಾಧಿಗಳಿಂದ ಈತನ ದೇಹವು ತೀರಾ ದುರ್ಬಲವಾಯಿತು. ಒಂದು ದಿನ ಎಚ್ಚರ ತಪ್ಪಿ ಬಿದ್ದನು. ಎಚ್ಚೆತ್ತ ನಂತರ ದೇಹದಂಡನೆಯ ಮಾರ್ಗವು ನಿರರ್ಥವೆಂದು ಬಗೆದು ಮತ್ತೆ ಆಹಾರವನ್ನು ಸೇವಿಸಲಾರಂಭಿಸಿದನು. ಈತನು ಪೂರ್ತಿಯಾಗಿ ಧ್ಯಾನಮಾರ್ಗವನ್ನು ಆಶ್ರಯಿಸಿದನು.

ವೈಶಾಖ ಪೌರ್ಣಮೆಯ ರಾತ್ರಿ ಸಿದ್ದಾರ್ಥನಿಗೆ ಜ್ಞಾನ ಪ್ರಾಪ್ತಿಯಾಯಿತು. ಆ ದಿನ ಮಧ್ಯಾಹ್ನ ಆತನು ಉರುವೇಲನದ ಸುಜಾತ ಎಂಬ ಕುಲೀನ ಸ್ತ್ರೀಯಿಂದ ಅಕ್ಕಿ ಪಾಯಸದ ಭಿಕ್ಷೆಯನ್ನು ಸ್ವೀಕರಿಸಿದನು. ಆ ದಿನ ರಾತ್ರಿ ಅರಳಿ ಮರದ ಕೆಳಗೆ ಧ್ಯಾನಸ್ತನಾಗಿ ಕುಳಿತಿರುವಾಗ ಗೌತಮನಿಗೆ ಜ್ಞಾನೋದಯವಾಯಿತು. ಬೋಧಿಸತ್ವನಾಗಿದ್ದ ಗೌತಮನು ಆಗ ಬುದ್ಧ (ಜ್ಞಾನಿ) ಆದನು. ಆಗ ಆತನ ವಯಸ್ಸು ಸುಮಾರು ಮೂವತ್ತಾರು. ಬುದ್ದನಿಗೆ ಆಗ ಹೊಳೆದ ಜ್ಞಾನವೆಂದರೆ ನಾಲ್ಕು ಆರ್ಯಸತ್ವಗಳು ಮತ್ತು ಅಷ್ಟಾಂಗ ಮಾರ್ಗ. ತತ್ವಬೋಧವಾದ ನಂತರ ಬುದ್ದನು ಅದೇ ಬೋಧಿ ವೃಕ್ಷದ ಕೆಳಗೆ ಕುಳಿತು 7 ದಿನಗಳವರೆಗೆ ಮುಕ್ತಿ ಸುಖವನ್ನು ಸವಿದನು. ಬುದ್ದನು ಧ್ಯಾನಸ್ತನಾಗಿ ಜ್ಞಾನ ಪಡೆದ ಸ್ಥಳವನ್ನು ಬುದ್ದಗಯಾ ಎಂದು, ಆ ವೃಕ್ಷವನ್ನು ಬೋಧಿವೃಕ್ಷ ಎಂದು ಕರೆಯಲಾಗಿದೆ.

ಬುದ್ದನು ತನ್ನ ಮುಂದಿನ ನಲವತ್ತೈದು ವರ್ಷಗಳನ್ನು ತನ್ನ ಧರ್ಮಬೋಧನೆಯ ಮಹತಾಕಾರ್ಯದಲ್ಲಿ ಕಳೆದನು. ಈತನು ವಾರಣಾಸಿ ಬಳಿಯ ಸಾರನಾಥದಲ್ಲಿನ ಮೃಗವನದಲ್ಲಿ ಐವರು ಬ್ರಾಹ್ಮಣ ಶಿಷ್ಯರಿಗೆ ತನ್ನ ಪ್ರಥಮ ಧರ್ಮ ಸಂದೇಶವನ್ನು ಇತ್ತನು. ಈ ಉಪದೇಶವನ್ನು 'ಧರ್ಮ ಚಕ್ರ ಪ್ರವರ್ತನ' ಎಂದು ಕರೆಯಲಾಗಿದೆ. ಸಾರನಾಥದಲ್ಲಿ ಬುದ್ದನ ಐವರು ಶಿಷ್ಯರನ್ನು ಒಳಗೊಂಡ ಪ್ರಥಮ ಬೌದ್ಧ ಭಿಕ್ಷು ಸಂಘ ಏರ್ಪಟ್ಟಿತು. ಮುಂದೆ ಅಲ್ಪಾವಧಿಯಲ್ಲೇ ಭಿಕ್ಷು ಸಂಘದ ಸದಸ್ಯರ ಸಂಖ್ಯೆ ಬೆಳೆಯಿತು. ಬುದ್ದನು ತನ್ನ ಸನ್ಯಾಸಿ ಶಿಷ್ಯರನ್ನು ಬಹುಜನ ಹಿತಕ್ಕಾಗಿ ಧರ್ಮ ಪ್ರಚಾರ ಕಾರ್ಯದಲ್ಲಿ ತೊಡಗಿಸಿದನು. ಲೋಕ ಕಲ್ಯಾಣಕ್ಕಾಗಿ ಕಟಿಬದ್ದನಾಗಿದ್ದ ಮಹಾತ್ಮ ಬುದ್ಧನು ಮಗದ ರಾಜ್ಯ ಮತ್ತು ಅವರ ನೆರೆಯ ಪ್ರದೇಶಗಳಲ್ಲಿ ಸಂಚರಿಸಿ ತಾನು ಕಂಡುಕೊಂಡಿದ್ದ ನೂತನ ಧರ್ಮ ಮಾರ್ಗವನ್ನು ಜನತೆಗೆ ಬೋಧಿಸಿದನು.

ಈತನು ಸಂದರ್ಶಿಸಿದ ಪ್ರಮುಖ ಸ್ಥಳಗಳೆಂದರೆ, ವಾರಣಾಸಿ, ರಾಜಗೃಹ, ಕಪಿಲವಸ್ತು, ವೈಶಾಲಿ, ಶ್ರಾವಸ್ಥಿ ಮತ್ತು ಪಾಟಲಿ ಪುತ್ರ. ಮಗದದ ಮಹಾರಾಜ ಬಿಂಬಸಾರ ಮತ್ತು ಆತನ ಮಗ

ಅಜಾತ ಶತ್ರು, ಅವಂತಿ ಮತ್ತು ಕೌಸಾಂಬಿಯ ರಾಜರು, ಅಸಂಖ್ಯಾತ ಜನಸಾಮಾನ್ಯರು, ಸ್ತ್ರೀಯರು, ಬಡವರು, ಶ್ರೀಮಂತರು ಬುದ್ಧನ ಅನುಯಾಯಿಗಳಾದರು. ಈತನ ತಂದೆ ಶುದ್ಧೋದನ, ಪತ್ನಿ ಯಶೋಧರಾ ಮತ್ತು ಮಗ ರಾಹುಲ ಬೌದ್ಧ ಮತಾವಲಂಬಿಗಳಾದರು. ಬುದ್ಧನು ಜನಭಾಷೆಯಾಗಿದ್ದ ಪಾಲಿ ಭಾಷೆಯಲ್ಲಿ ಧರ್ಮಬೋಧೆ ಮಾಡಿದ್ದರಿಂದ ಜನಸಾಮಾನ್ಯರು ಅದನ್ನು ತಿಳಿದುಕೊಳ್ಳುವುದು ಸಾಧ್ಯವಾಗಿತ್ತು. ಈತನು ತನ್ನ ಪರಿಶುದ್ಧವಾದ ಚಾರಿತ್ರ್ಯ, ನಿಸ್ವಾರ್ಥತೆ, ದೃಷ್ಟಿ ವೈಶಾಲ್ಯ, ದೀನ ದಲಿತರು ಮತ್ತು ದುಃಖಿತರ ಬಗ್ಗೆ ತೋರುತ್ತಿದ್ದ ಅಪಾರ ಕರುಣೆ ಹಾಗೂ ಕಳಕಳಿ, ಸರ್ವರಲ್ಲಿ ಸಮಭಾವನೆ ಮತ್ತು ವಾಗ್ಮಿತೆ ಇವುಗಳಿಂದ ಜನರ ಹೃದಯವನ್ನು ಗೆದ್ದುಕೊಂಡನು. ತನ್ನ ತತ್ವಗಳನ್ನು ನೀತಿ ಕಥೆಗಳ ರೂಪಕ ಕಥೆಗಳ ಮತ್ತು ಉಪಮೆಗಳ ಮೂಲಕ ಜನ ಸಾಮಾನ್ಯರಿಗೆ ರುಚಿಸುವ ರೀತಿಯಲ್ಲಿ ಬೋಧಿಸಿದನು. ಸಾರಿಪುತ್ರ, ಮೊಗ್ಗಲ್ಲನ, ಆನಂದ ಮತ್ತು ಅನಿರುದ್ಧ ಇವರು ಬುದ್ಧನ ಶ್ರೇಷ್ಠ ಶಿಷ್ಯರಾಗಿದ್ದರು.

ಬುದ್ಧನು ಕ್ರಿ.ಪೂ. 486ರಲ್ಲಿ ಮಲ್ಲರ ರಾಜದಾನಿಯಾಗಿದ್ದು ಕುಶಿ ನಗರದಲ್ಲಿ (ಈಗಿನ ಗೊರಖಪುರ ಜಿಲ್ಲೆಯಲ್ಲಿ) ವೈಶಾಖ ಪೌರ್ಣಿಮೆಯಂದು ಪರಿನಿರ್ವಾಣ ಹೊಂದಿದನು. ಆಗ ಈತನ ವಯಸ್ಸು ಎಂಬತ್ತು. ಬುದ್ಧನ ದೇಹದ ಅವಶೇಷಗಳನ್ನು ಆತನ ಜೀವನಕ್ಕೆ ಸಂಬಂಧಿಸಿದ ಎಲ್ಲಾ ಸ್ಥಳಗಳಿಗೆ ವಿತರಿಸಲಾಯಿತು. ಈತನ ಅನುಯಾಯಿಗಳು ಅವಶೇಷಗಳನ್ನು ಒಳಗೊಂಡ ಸ್ತೂಪಗಳನ್ನು ನಿರ್ಮಿಸಿದರು.

ಹೀಗೆ ಗೌತಮಬುದ್ಧನು ರಾಜವಂಶದಲ್ಲಿ ಹುಟ್ಟಿ, ಬೆಳೆದು, ರಾಜ ವೈಭೋಗವನ್ನು ಅನುಭವಿಸಿಯೂ ಜನಸಾಮಾನ್ಯರ ಕಷ್ಟಗಳನ್ನು ನೋಡಿ ಆ ಕಷ್ಟಗಳಿಗೆ ಶಾಶ್ವತ ಪರಿಹಾರವನ್ನು ಹುಡುಕುವ ದಿಸೆಯಲ್ಲಿ ಭವ ಬಂಧನಗಳನ್ನು ತ್ಯಜಿಸಿ ಕಠಿಣ ಪರಿಶ್ರಮದಿಂದ ಬುದ್ಧತ್ವವನ್ನು ಪಡೆದು ಬೌದ್ಧ ಧರ್ಮ ತತ್ವಗಳ ಮುಖಾಂತರ ಸಾಮಾನ್ಯರ ಮನಸ್ಸಿಗೆ ಅಮೃತದ ಸುಧೆಯನ್ನು ನೀಡಿದನು. ಈ ಎಲ್ಲಾ ದೃಷ್ಟಿಯಿಂದ ಗೌತಮಬುದ್ಧ ಇತಿಹಾಸದಲ್ಲಿ ಚಿರಸ್ಥಾಯಿಯಾದ ಸ್ಥಾನವನ್ನು ಪಡೆದಿದ್ದಾನೆ.

ಅಧ್ಯಾಯ – 4

ಕನ್ನಡ ನಾಟಕಗಳು ಮತ್ತು ಬುದ್ಧ

ಹಲವಾರು ಸಂಶೋಧನೆಗಳಿಂದ ಕನ್ನಡ ಸಾಹಿತ್ಯ ಮತ್ತು ಕನ್ನಡ ಭಾಷೆ ಕ್ರಿ.ಪೂ.ದಲ್ಲಿ ಇದ್ದಿರಬಹುದೆಂದು ತಿಳಿಯುತ್ತದೆ. ಆದರೆ ಲಿಖಿತವಾಗಿ ನಮಗೆ ಕನ್ನಡದ ಪ್ರಾಚೀನತೆಯನ್ನು ತಿಳಿಯಲು ಸಿಗುವ ಆಧಾರ ಎಂದರೆ ಕ್ರಿ.ಶ. ಸುಮಾರು 450ರ ಹಲ್ಮಿಡಿ ಶಾಸನ. ಅನಂತರದಲ್ಲಿ ಕನ್ನಡದಲ್ಲಿ ದೊರೆಯುವ ಗ್ರಂಥವೆಂದರೆ ಕ್ರಿ.ಶ. ಸುಮಾರು 820ರಲ್ಲಿ ರಚನೆಯಾಗಿರಬಹುದಾದ ಕವಿರಾಜಮಾರ್ಗ. ಕವಿರಾಜಮಾರ್ಗದಿಂದೀಚೆಗೆ ದೊರೆಯುವ ಗ್ರಂಥಗಳೆಲ್ಲವೂ ಜೈನಕವಿಗಳಿಂದ ರಚಿತವಾಗಿರುವಂಥಹವು. ಆ ವೇಳೆಗೆ ಕರ್ನಾಟಕದಲ್ಲಿ ಜೈನಧರ್ಮ ಪ್ರಾಬಲ್ಯವನ್ನು ಹೊಂದಿದ್ದು, ಜೈನ ಧರ್ಮದ ಪ್ರಸಾರವನ್ನು ಅಂದಿನ ಕವಿಗಳು ಸಾಹಿತ್ಯದ ಮೂಲಕ ಮಾಡುತ್ತಿದ್ದರು. ಜೈನ ಧರ್ಮ ತೀರ್ಥಂಕರರ ಚರಿತ್ರೆ ಅಂದಿನ ಕಾವ್ಯಗಳಲ್ಲಿ ಕಂಡು ಬರುತ್ತಿತ್ತು. ಜೈನ ಕವಿಗಳು ತಮ್ಮ ಮತ ಧರ್ಮದ ಪ್ರಸಾರವನ್ನು ಸಾಹಿತ್ಯದ ಮುಖಾಂತರ ಕೈಗೊಂಡಿದ್ದರಿಂದ ಕನ್ನಡದಲ್ಲಿ ವಿಫುಲವಾದ ಸಾಹಿತ್ಯ ಬೆಳೆಯಲು ಕಾರಣವಾಯಿತು.

ಕ್ರಿ.ಶ. 9ನೇ ಶತಮಾನದಿಂದೀಚೆಗೆ ಕರ್ನಾಟಕದಲ್ಲಿ ಜೈನ ಧರ್ಮದ ಪ್ರಾಬಲ್ಯ ಮತ್ತು ಕನ್ನಡ ಸಾಹಿತ್ಯದಲ್ಲಿ ಜೈನ ಕವಿಗಳ ಪ್ರಾಬಲ್ಯವನ್ನು ಕಾಣುತ್ತೇವೆ. ಈ ಅವಧಿಯಲ್ಲಿ ಎಲ್ಲಿಯೂ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಸಾಹಿತ್ಯವನ್ನು ಕಾಣುವುದಿಲ್ಲ. ಆದರೆ ಕ್ರಿ.ಶ. 9ನೇ ಶತಮಾನಕ್ಕಿಂತ ಮೊದಲು ಕನ್ನಡದಲ್ಲಿ ಬೌದ್ಧ ಧರ್ಮ ಮತ್ತು ಬೌದ್ಧ ಸಾಹಿತ್ಯ ವಿಪುಲವಾಗಿ ಬೆಳೆದಿದ್ದಿರಬಹುದು. ಏಕೆಂದರೆ ಜೈನ ಕೃತಿಗಳನ್ನು ಅಧ್ಯಯನ ಮಾಡಿದರೆ ಒಂದು ಪಾಂಡಿತ್ಯಪೂರ್ಣ ಸಾಹಿತ್ಯದ ಬೆಳವಣಿಗೆ ಕಂಡುಬರುತ್ತದೆ. ಅಂದರೆ ಏಕಾಏಕಿ ಸಾಹಿತ್ಯ ಈ ಮಟ್ಟದ ಪ್ರೌಢಿಮೆಯನ್ನು ಗಳಿಸಲು ಸಾಧ್ಯವಿಲ್ಲ. ಹಾಗಾಗಿ ಇದಕ್ಕಿಂತ ಮೊದಲು ಕನ್ನಡದಲ್ಲಿ ಸಾಹಿತ್ಯ ಕೃಷಿ ನಡೆದಿರುವ ಸಂಭವವಿದೆ. ಹಾಗಾದರೆ ಸಾಹಿತ್ಯದ ಕೃಷಿ ನಡೆದಿದೆ ಎಂದು ತಿಳಿಯುವುದೇ ಆದರೆ ಆ ಅವಧಿಯಲ್ಲಿ ಬೌದ್ಧ ಸಾಹಿತ್ಯ ರಚನೆಯಾಗಿರಬಹುದು. ಅನಂತರದ ಕಾಲದಲ್ಲಿ ಪ್ರಾಬಲ್ಯಕ್ಕೆ ಬಂದ ಜೈನಧರ್ಮ ಮತ್ತು ಜೈನ ಕವಿಗಳು ತಮ್ಮ ಮತದ ಪ್ರಸಾರಕ್ಕಾಗಿ ತಮ್ಮ ಹಿಂದೆ ಇದ್ದ ಸಾಹಿತ್ಯ ರಾಶಿಯನ್ನು ನಾಶಗೊಳಿಸಿರಬಹುದು ಎಂಬುದಾಗಿ ಟಿ.ಎಸ್. ವೆಂಕಣ್ಣಯ್ಯನವರು ಅಭಿಪ್ರಾಯ ಪಡುತ್ತಾರೆ.

ಅದೇನೆ ಇರಲಿ ಸಾಹಿತ್ಯದ ಆರಂಭದಲ್ಲಿ ಕಾಲದಲ್ಲಿ ಬುದ್ದನ ಕುರಿತ ಸಾಹಿತ್ಯ ಕಂಡುಬರುವುದಿಲ್ಲ. ಆದರೆ ಹೊಸಗನ್ನಡದ ಕಾಲದಲ್ಲಿ ಬುದ್ದನನ್ನು ಕುರಿತ ಹಲವಾರು ಗ್ರಂಥಗಳು

ರಚನೆಯಾಗಿವೆ. ಇತಿಹಾಸದ ಹಲವಾರು ವ್ಯಕ್ತಿಗಳು ತಾವಿದ್ದ ಅವಧಿಯಲ್ಲಿ ಗಳಿಸಿದ ಅಪಾರ ಜನ ಮನ್ನಣೆಯಿಂದ ಅವರು ಕೇವಲ ಆ ಕಾಲಕ್ಕೆ ಮಾತ್ರ ಸೀಮಿತವಾಗಿ ಉಳಿಯದೆ ಸದಾ ಕಾಲವೂ ಜನರ ಮನಸ್ಸಿನಲ್ಲಿ ಅಚ್ಚಳಿಯದೇ ನೆಲಯೂರಿರುತ್ತಾರೆ. ಇಂತಹ ಮಹಾನ್ ವ್ಯಕ್ತಿಗಳು ಸಮಾಜದ ಒಳಿತಿಗಾಗಿ ತಮ್ಮ ಐಹಿಕ ಸುಖ ಭೋಗಗಳನ್ನು ತ್ಯಜಿಸಿ ಸಾಮಾನ್ಯರ ಕಷ್ಟ ಸುಖಗಳಿಗೆ ಸ್ಪಂದಿಸಿರುತ್ತಾರೆ. ಹಾಗಾಗಿ ಅಂತಹ ಮಹಾನ್‌ವ್ಯಕ್ತಿಗಳು ಯಾವಾಗಲೂ ಜನರ ಮನಸ್ಸನ್ನು ಕಾಡುತ್ತಿರುತ್ತಾರೆ. ಈ ರೀತಿ ಹೆಚ್ಚು ಹೆಚ್ಚು ಕಾಡುವ ವ್ಯಕ್ತಿಗಳೆಂದರೆ ಗೌತಮಬುದ್ಧ ಮತ್ತು ಬಸವಣ್ಣ, ತುಘಲಕ್ ಕ್ರಿ.ಪೂ. 6ನೇ ಶತಮಾನದ ಗೌತಮಬುದ್ಧ ಮತ್ತು ಕ್ರಿ.ಶ. 12ನೇ ಶತಮಾನದ ಬಸವಣ್ಣ ಇವರು ಕನ್ನಡ ಸಾಹಿತ್ಯದಲ್ಲಿ ಅತಿ ಹೆಚ್ಚು ಚರ್ಚೆಗೆ ಒಳಗಾದಂತಹವರು.

ಗೌತಮಬುದ್ಧನನ್ನು ಕುರಿತು ಕನ್ನಡ ಸಾಹಿತ್ಯದಲ್ಲಿ ಕಥೆ, ಕವನ, ನಾಟಕ, ಮಹಾಕಾವ್ಯಗಳನ್ನು ರಚಿಸಿದ್ದಾರೆ. ಪ್ರಸ್ತುತ ಅದ್ಯಯನದ ದೃಷ್ಟಿಯಿಂದ ನಮಗೆ ನಾಟಕ ಪ್ರಕಾರ ಮುಖ್ಯವಾಗಿ ಕಂಡು ಬರುತ್ತದೆ. ಕನ್ನಡದಲ್ಲಿ ಬುದ್ಧನನ್ನು ಕುರಿತು ಸುಮಾರು 20 ರಿಂದ 25 ನಾಟಕಗಳು ರಚನೆಯಾಗಿವೆ. ಆದರೆ ವ್ಯಾಪ್ತಿಯಲ್ಲಿ ತಿಳಿಸಿರುವ ಹಾಗೆ ಎಲ್ಲಾ ನಾಟಕಗಳನ್ನು ವಿವೇಚನೆಗೆ ಒಳಪಡಿಸಲು ಇಲ್ಲಿ ಸಾಧ್ಯವಿಲ್ಲ. ಹಾಗಾಗಿ ಕೆಲವೇ ನಾಟಕಕಾರರ ನಾಟಕಗಳನ್ನು ವಿವೇಚಿಸಬಹುದು. ಅದರಲ್ಲಿಯೂ ಬುದ್ಧನನ್ನು ಕುರಿತು ನಾಟಕಕಾರರು ರಚಿಸಿರುವ ನಾಟಕಗಳ ಸಂಖ್ಯೆಯನ್ನು ಅನುಸರಿಸಿ ಅನುಕ್ರಮವಾಗಿ ಪ್ರಭುಶಂಕರರ ಅಂಗುಲಿಮಾಲ ಅಮ್ರಪಾಲಿ, ಸುಜಾತ ಮತ್ತು ಗಾಳಿಯೆಂಬ ಕುದುರೆ ಏರಿ, ಶಿವರಾಮಕಾರಂತರ ಕಿಸಾಗೋತಮಿ ಮತ್ತು ಬುದ್ಧೋದಯ ಕುವೆಂಪುರವರ ಮಹಾರಾತ್ರಿ, ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರ ಯಶೋಧರಾಮತ್ತು ಮನ ಜವರಯ್ಯ ಅವರ ಜಲ ನಾಟಕಗಳನ್ನು ವಿವೇಚಿಸಬಹುದು.

ಅ) ಪ್ರಭುಶಂಕರರ 'ಅಂಗುಲಿಮಾಲ'

ಪ್ರಭುಶಂಕರರ ಅಂಗುಲಿಮಾಲ ನಾಟಕವು ದೃಷ್ಟಿ ವ್ಯಕ್ತಿಯ ಮನಃಪರಿವರ್ತನೆಯನ್ನು ಕುರಿತದ್ದಾಗಿದೆ. ಗೌತಮಬುದ್ಧ ಈಗಾಗಲೇ ಬುದ್ಧತ್ವವನ್ನು ಪಡೆದು ಅಪ್ರತಿಮ ಜ್ಞಾನಿಯಾಗಿದ್ದಾನೆ. ಜೊತೆಗೆ ಸರ್ವಜನರ ಯೋಗಕ್ಷೇಮ ಮತ್ತು ಅಭ್ಯುದಯವನ್ನು ಕುರಿತು ಸದಾ ಆಲೋಚಿಸಿರುತ್ತಾರೆ. ಈತನ ಪ್ರಕಾರ ಅಖಂಡ ಬ್ರಹ್ಮಾಂಡದಲ್ಲಿರುವ ಜೀವಿಗಳೆಲ್ಲವೂ ಸಮ. ಪ್ರತಿಯೊಂದು ಜೀವಿಗೂ ತನ್ನದೇ ಆದ ಅಸ್ತಿತ್ವವಿದೆ ಎಂದು ತಿಳಿದು ಯಾವುದೆ ಕಾರಣಕ್ಕೂ ಒಂದು ಜೀವಿ ಮತ್ತೊಂದು ಜೀವಿಯ ಮೇಲೆ ಆಕ್ರಮಣ ಮಾಡುವುದನ್ನು ಒಪ್ಪುವುದಿಲ್ಲ. ಬುದ್ಧನ ಆಭಿಪ್ರಾಯದ ಈ ಹಿನ್ನೆಲೆಯಲ್ಲಿ ಪ್ರಭುಶಂಕರರ ಅಂಗುಲಿಮಾಲ ನಾಟಕವನ್ನು ಪರಿಶೀಲಿಸಬಹುದು.

ಯಾವಾಗಲೂ ದುಷ್ಟ ಮಾರ್ಗದಲ್ಲೇ ನಡೆಯುತ್ತಿರುವ ವ್ಯಕ್ತಿಯನ್ನು ಕೂಡ ಹಿತವಾದ ನುಡಿಗಳಿಂದ ಮತ್ತು ಅಕ್ಕರೆಯಿಂದ ಸರಿದಾರಿಗೆ ತರಬಹುದೆಂದು ಈ ನಾಟಕದ ಅಭಿಪ್ರಾಯ. ನಾಟಕದ ಆರಂಭದಲ್ಲೇ ಪ್ರಭುಶಂಕರರು ಭಗವದ್‌ಗೀತೆಯ ಎರಡು ಶ್ಲೋಕಗಳನ್ನು ಉಲ್ಲೇಖಿಸಿದ್ದಾರೆ. ಅವುಗಳ ಅರ್ಥ ಹೀಗಿದೆ – "ಎಂತಹ ಮೂಢಾಚಾರಿಯೇ ಆಗಿರಲಿ ಅನನ್ಯ ಶರಣನಾಗಿ ನನ್ನನೇ ಭಜಿಸಿದದಾರೆ ಅಂಥಹವರನ್ನು ಸಾಧುವೆಂದೇ ಬಗೆಯಬೇಕು. ಏಕೆಂದರೆ ಆತ ಋಜುವಾದ ನಿರ್ಣಯವನ್ನೇ ಕೈಗೊಂಡಿದ್ದಾನೆ. ಅಂಥಹವನು ಕ್ಷಿಪ್ರವಾಗಿಯೇ ಧರ್ಮಾತ್ಮನಾಗುತ್ತಾನೆ. ಶಾಶ್ವತವಾದ ಶಾಂತಿಯನ್ನು ಪಡೆಯುತ್ತಾನೆ. ತಿಳಿ ಅರ್ಜುನ, ನನ್ನ ಭಕ್ತನಿಗೆ ಎಂದೆಂದೂ ನಾಶವಿಲ್ಲ" ಭಗವತ್‌ಗೀತೆಯ ಈ ಸಾಲುಗಳ ಅಂಗುಲಿಮಾಲ ನಾಟಕದ ಪೂರ್ವ ಪೀಠಿಕೆಯಂತಿದೆ. ದುರಾಚಾರಿಯಾದಂತಹ ವ್ಯಕ್ತಿ ಭಗವಂತನನ್ನು ನಿಷ್ಠೆಯಿಂದ ಭಜಿಸಿದುದಾದರೆ ಅಂಥಹವನಿಗೂ ಸದಾ ಮುಕ್ತಿ ದೊರೆಯುತ್ತದೆ. ಅಂಗುಲಿಮಾಲ ನಾಟಕದಲ್ಲಿಯೂ ಕೂಡ ಇದೇ ವಿಷಯವನ್ನು ಕಾಣಬಹುದು.

ಅಂಗುಲಿಮಾಲ ಒಬ್ಬ ದುಷ್ಟ ವ್ಯಕ್ತಿ. ಈತ ಮನುಷ್ಯರ ಕೊರಳನ್ನು ಕತ್ತರಿಸಿ ಅವರ ಬೆರಳನ್ನು ಮಾಲೆಯಾಗಿ ಧರಿಸಿರುವಂತಹವನು. ಮಹಾ ಕ್ರೂರಿ ನರಕವೇ ಮೈದಳೆದಂತಹ ರೂಪನ್ನ ಹೊಂದಿರುವಂತಹವನು. ಈ ಮೊದಲೇ ಹಲವಾರು ರಾಜ್ಯಗಳ ಮೇಲೆ ದಂಡೆತ್ತಿ ಅಲ್ಲಿಯ ಸೈನಿಕರನ್ನ, ರಾಜರನ್ನ ಸಂಹರಿಸಿರುವವನು. ಇವನ ಹೆಸರನ್ನ ಕೇಳಿದರೆ ಭೂಮಿಯೇ ನಡುಗುತ್ತಿತ್ತು. ಇಂತಹ ಅಂಗುಲಿಮಾಲ ಶ್ರಾವಸ್ಥಿ ನಗರವನ್ನು ಗುರಿಯಾಗಿಟ್ಟುಕೊಂಡು, ಅವರ ಮೇಲೆ ಬಿದ್ದು ನಾಶಮಾಡಲು ಹವಣಿಸುತ್ತಿರುವನು. ಈತನ ಪರಾಕ್ರಮದ ಮಾತುಗಳನ್ನು ಅವರಾಡುವ ಈ ಮಾತುಗಳಿಂದ ತಿಳಿಯಬಹುದು

"ನಾನಲೆ ಚಕ್ರವರ್ತಿ. ಇಹ ಲೋಕ ಸಾರ್ವಭೌಮ!

ನರರೆದೆಯು ಮುಗಿಯುವುದು ರಾಜರಿಗೆ, ರಾಜರೋ

ನಾ ಬರುವ ಶುಭ ವಾರ್ತೆಯನ್ನು ಕೇಳಿ.

ನಡ ನಡುಗಿ,

ಕಪ್ಪ ಕಾಣಿಕೆ ಹಿಡಿದು, ಕೈ ಬೆರಳುಗಳ ಮರೆಸಿ,

ನಿದ್ದೆ, ಭೋಜನ ಉಳಿದ ಮೃತ್ಯು ಸೂಕ್ತವ ಪಠಿಸಿ,

ತೆರೆದಕಣ್ ತೆರೆದಂತೆ ಅರೆಸತ್ತು ನಿಲ್ಲುವರು

ನಾನವರ ಬಳಿಸಾರಿ ನಿಂತೊಡನೆ ಮೃತ್ಯುವನೇ

ಕಂಡಂತೆ ಬೇರುವರು"[1]

ಈ ಮಾತುಗಳನ್ನು ಗಮನಿಸಿದಾಗ ಜನಸಾಮಾನ್ಯರನ್ನು ರಕ್ಷಿಸುವ ಹೊಣೆ ಹೊತ್ತಿರುವ ರಾಜರೂ ಕೂಡ ಅಂಗುಲಿಮಾಲನ ಬರುವಿಕೆಯನ್ನು ಕೇಳಿ ಕತ್ತರಿಸಿ ನಡುಗುವರು ಎಂಬುದು ತಿಳಿಯುತ್ತದೆ. ಇಷ್ಟು ಪ್ರಮಾಣದ ಕ್ರೂರಿ ಈ ಅಂಗುಲಿಮಾಲ.

ಈತನು ತನ್ನ ಇಷ್ಟ ದೇವತೆ ಕಾಳಿಯನ್ನು ತೃಪ್ತಿಪಡಿಸುವ ಕಾಯಕವನ್ನು ಕೈಗೊಂಡಿದ್ದಾನೆ. ತನ್ನ ಇಷ್ಟದೇವತೆಯ ತೃಪ್ತಿಗೆ ಈತ ಈ ವಿಧವಾದ ಕ್ರೂರತ್ವದ ಕೆಲಸವನ್ನು ಕೈಗೊಂಡಿದ್ದಾನೆ. ಈತನ ಮುಖ್ಯ ಗುರಿ ಇಷ್ಟದೇವತೆಯ ತೃಪ್ತಿ ಮತ್ತು ಜನರಿಗೆ ತನ್ನ ಬಗ್ಗೆ ಭಯವನ್ನುಂಟುಮಾಡುವುದು. ಹಾಗಾಗಿಯೇ ಆತ ನಗರಗಳಿಗೆ ನುಗ್ಗಿ ಜನಸಾಮಾನ್ಯರನ್ನು, ರಾಜ ಮಹಾರಾಜರನ್ನು ಕತ್ತರಿಸಿ ಅವರ ತಲೆಗಳನ್ನು ದೇವಿಗೆ ಅರ್ಪಿಸಿ, ಕೈ ಬೆರಳ ಮಾಲೆಯನ್ನು ಮಾತ್ರ ಈತ ಧರಿಸುತ್ತಾನೆ. ಬೆರಳ ಮಾಲೆಯನ್ನು ಧರಿಸುವ ಉದ್ದೇಶವಾದರೂ ಇಷ್ಟೇ; ಈತ ನರರನ್ನು ಕತ್ತರಿಸು ಕ್ರೂರಿ ಎಂಬುದು ಸರ್ವರಿಗೂ ತಿಳಿಯಬೇಕು ಮತ್ತು ಸರ್ವರಲ್ಲೂ ಭಯ ಉಂಟಾಗಬೇಕು ಎಂಬುದು. ಈತನ ಮಾತುಗಳಲ್ಲಿ ನೋಡುವುದಾದರೆ,

"ಸಲಿಪೆನೌ, ಮಾತಾಯಿ,

ಅಂಗುಲೀಮಾಲ ನೀ ಧಮನಿ ಧಮನಿಗಳಲಿ

ವೀರ ತೇಜದ ರಕ್ತ ಹರಿಯುತ್ತಿರುವನ್ನೆಗಂ,

[1] ಬುದ್ಧ ನಾಟಕ ಚಕ್ರ – ಪ್ರಭುಶಂಕರ, ಪುಟಸಂಖ್ಯೆ 31, 2001, ಡಿವಿಕೆ ಮೂರ್ತಿ ಪ್ರಕಾಶನ.

ಆ ನಿನ್ನ ಬಯಕೆಯನು! ಅರಸರರಸಾಗಿಯೂ
ರಾಜ್ಯವನು ಕೋಶವನು ಪದವಿ ವೈಭವಗಳನ್ನು
ಅನಿತೇಕೆ, ತೃಣಕಣವನೊಂದನೂ ಒಲ್ಲನಾ.
ಒಂದೇ ಬಯಕೆಯು ನನಗೆ, ನರಶಿರವ, ಚೆಂಡಾಡಿ
ನಿನ್ನಡಿಯಲಿಡಾಡಿ ನೋಡಿ ಸುಖಿಸುವ ಬಯಕೆ,
ಓ ದೇವಿ, ಪ್ರಸಾದವೋ ಎಂಬಂತೆ ಕೈ ಬೆರಳ
ಪಾಲೆನಗೆ!....[1]

ಈ ಮಟ್ಟಿನ ಕ್ರೂರಿಯಾದ ಅಂಗುಲಿಮಾಲನು ಏಕಾಕ್ಷ ಮತ್ತು ಬಲಿದಾಸ ಎಂಬ ಅನುಚರರೊಡನೆ ಶ್ರಾವಸ್ಥಿ ನಗರದ ಪಕ್ಕದ ಗುಡ್ಡದ ಗುಹೆಯಲ್ಲಿ ನೆಲೆಸಿರುತ್ತಾನೆ. ಈ ವಿಷಯವನ್ನು ತಿಳಿದ ಶ್ರಾವಸ್ಥಿಯ ರಾಜ ಅಂಗುಲಿಮಾಲನಿಂದ ರಕ್ಷಣೆಯನ್ನು ಪಡೆಯಲು ನಗರದ ಸುತ್ತಲೂ ಸೈನಿಕರನ್ನು ಕಾವಲಿಟ್ಟಿರುತ್ತಾನೆ. ಇದೇ ವೇಳೆಗೆ ಗೌತಮಬುದ್ದ ತನ್ನ ಧರ್ಮದ ಪ್ರಚಾರ ಹಾಗೂ ಧರ್ಮದ ಸೂಕ್ಷ್ಮ ವಿಚಾರಗಳನ್ನು ಸಾಮಾನ್ಯ ಜನರಿಗೆ ತಿಳಿಸಿ ಅವರಲ್ಲಿ ಅಡಗಿರಬಹುದಾದ ಮೌಢ್ಯತೆಯನ್ನು ಹೋಗಲಾಡಿಸಲು ಹಾಗೂ ಸುಖಕರ ಜೀವನ ನಡೆಸಲು ಅನುವಾಗುವಂತೆ ತಿಳಿ ಹೇಳಲು ಶ್ರಾವಸ್ಥಿ ನಗರದ ಉಪವನಕ್ಕೆ ಬಂದಿರುತ್ತಾನೆ.

ಗೌತಮಬುದ್ದ ತನ್ನ ಹಿಂದಿನ ಕಾಯಕದಂತೆ ಹಸಿವನ್ನು ನಿವಾರಿಸಿಕೊಳ್ಳಲು ಭಿಕ್ಷೆಯನ್ನು ಬೇಡಿ ಆಹಾರವನ್ನು ಪಡೆಯಲು ತನ್ನ ಶಿಷ್ಯರ ಜೊತೆ ನಗರವನ್ನು ಪ್ರವೇಶಿಸುತ್ತಾನೆ. ಆತ ನಗರವನ್ನು ಪ್ರವೇಶಿಸುವಾಗ ಆತನ ಶಿಷ್ಯರು.

"ಜ್ವಾಲೆ ಮೇಲುದ ಹೊದೆದು
ಅಗ್ನಿದೇವನೆ ನಡೆದು
ಕರ್ಮ ಕಾನನವನ್ನು ದಹಿಸಲೆಂದು – ನಡೆದು ಬರುವನಿಂದು"[2]

ಅಂದರೆ ಜಗತ್ತು ಅಂಧಕಾರದಲ್ಲಿ ಮುಳುಗಿ ಕರ್ಮಾರಣ್ಯದಂತೆ ಬೆಳಕಿಲ್ಲದೆ ಪರಿತಪಿಸುತ್ತಿದೆ. ಅಂತಹ ಕರ್ಮ ಕಾನನವನ್ನು ಜ್ವಾಲೆಯನ್ನೇ ಮೈಯ ಹೊದಿಕೆಯ ರೀತಿ ಹೊದ್ದಿರುವ, ಅಗ್ನಿದೇವನ

---

[1] ಅದೇ.
[2] ಬುದ್ಧ ನಾಟಕ ಚಕ್ರ – ಪ್ರಭುಶಂಕರ, ಪುಟ ಸಂಖ್ಯೆ 17, 2001, ಡಿ.ವಿ.ಕೆ ಮೂರ್ತಿ ಪ್ರಕಾಶನ.

ರೀತಿ ಇರುವ ಬುದ್ದನು ನಿವಾರಿಸುತ್ತಾನೆ ಎಂಬುದಾಗಿದೆ. ಜಗತ್ತು ನಿಜವಾಗಿಯೂ ಆ ಕಾಲದಲ್ಲಿ ಮೌಢ್ಯಾಂಧಕಾರದಲ್ಲಿ ಮುಳುಗಿತ್ತು. ಆ ಸಂದರ್ಭದಲ್ಲಿ ಜ್ಯೋತಿಯ ರೀತಿ ಬೆಳಕಾದವನು ಗೌತಮಬುದ್ದ.

ಈ ರೀತಿ ಭಿಕ್ಷೆಯನ್ನು ಬೇಡಲು ಬಂದ ಗೌತಮನಿಗೆ ಸೈನಿಕರು ಶಸ್ತ್ರಾಸ್ತ್ರಗಳನ್ನು ಹಿಡಿದು ನಿಂತಿರುವ ದೃಶ್ಯ ಕಾಣುತ್ತದೆ. ಕೌತುಕದಿಂದ ಅದಕ್ಕೆ ಕಾರಣವನ್ನು ತನ್ನ ನೆಚ್ಚಿನ ಶಿಷ್ಯ ಆನಂದನನ್ನು ಕೇಳುತ್ತಾನೆ. ಆನಂದ ಅದಕ್ಕೆ ಸಂಬಂಧಿಸಿದ ಕಾರಣವನ್ನು ತಿಳಿಸುತ್ತಾ, ಅಂಗುಲಿಮಾಲನೆಂಬುವವನು ಹೊರ ವಲಯದ ಗುಡ್ಡದ ಗುಹೆಯಲ್ಲಿದ್ದು

"ಇದ್ದ ಕ್ಕಿದ್ದಂತೆಯೇ ಗಿರಿಯ ಗುಹೆಯಿಂ ಚಿಮ್ಮಿ
ಯಾವುದೋ ನಿರ್ಭಾಗ್ಯ ನಗರಿಯನ್ನು ಮುತ್ತುವನು
ಹಿಂದೆ ಕತ್ತಿಯ ಝಳಪಿ ಕಾಲ ಭೈರವನಂತೆ
....
ನಾಳೆ ಈ ಸಾವತ್ತಿಗೈತರುವ ಸುದ್ದಿಯಿದೆ
ಅದರಿಂದಲೇ ದೇವ ನಗರಕಿಂದೀ ರಕ್ಷೆ

ಎಂಬ ವಿಷಯವನ್ನು ಕೇಳಿದ ಕೂಡಲೆ ಆತ ಅಂಥಹ ಕ್ರೂರಿಗೆ ಎಂದು ಹೇಳಿ ಆತನ ಮನಸ್ಸಿನಿಲ್ಲಿರುವ ಪೈಶಾಚಿಕ ಗುಣಗಳನ್ನು ಹೋಗಲಾಡಿಸಿ ಸದ್ ವ್ಯಕ್ತಿಯನ್ನಾಗಿ ಮಾಡುತ್ತೇನೆ ಎಂದು ಆತನ ಬಳಿಗೆ ಹೊರಡುತ್ತಾನೆ. ಅಂಗುಲಿಮಾಲ ಮಹಾನ್‌ಕ್ರೂರಿ ಎಂದು ಗೊತ್ತಿದ್ದರೂ ಯಾವುದೇ ಆಯುಧಗಳಿಲ್ಲದ ಬುದ್ದ ಆತನನ್ನು ಎದುರಿಸಲು, ಮಾನವ ಪ್ರೇಮವನ್ನು ತುಂಬಲು ಮಾನವತೆಯ ಸಾಕಾರ ಮೂರ್ತಿಯಾದ ಇವನು ಹೊರಡುತ್ತಾನೆ. "ಕ್ರೂರಿ ಅಂಗುಲಿಮಾಲನ ಹೆಸರು ಕೇಳಿದರೆ ತತ್ತರ ಗೊಳ್ಳುತ್ತಿದ್ದ ಸಂದರ್ಭಲ್ಲಿ ಬುದ್ದನು ಏಕಾಏಕಿಯಾಗಿ ನಿರಾಯುಧನಾಗಿ ಅವನನ್ನು ಭೇಟಿಯಾಗುತ್ತಾನೆ. ಈ ಸರಳ ಕಾರುಣ್ಯಕ್ಕೆ ಅಂಗುಲಿಮಾಲನೇ ಗಾಬರಿಯಾಗುತ್ತಾನೆ. ಬುದ್ದನ ಕೃಪಾದೃಷ್ಟಿಯನ್ನು ಎದುರಿಸಲಾರದೆ "ನಿನ್ನ ಕರುಣಾಗಂಗೆ ಕಣ್ಣಿನಿಂ ಧುಮುಕುತಿರೆ, ಮುಡಿಯೊಡ್ಡಿ ತಡೆವ ಬಲವಿನಿತಿಲ್ಲವೈ, ತಂದೆ" ಎಂದು ಶರಣಾಗುತ್ತಾನೆ.[1]

ಅಂಗುಲಿಮಾಲನ ಬಳಿಗೆ ಬಂದ ಬುದ್ದ ಮೌಢ್ಯಾಂಧಕಾರದಲ್ಲಿ ಮೆರೆಯುತ್ತಿರುವ ಆತನನ್ನು ನೋಡಿ ಕನಿಕರ ಪಡುತ್ತಾನೆ. ಎಲ್ಲವನ್ನೂ ಸಾಧಿಸಿದ್ದೇನೆ ಎಂದು ಬೀಗುತ್ತಿರುವ ಅಂಗುಲಿಮಾಲನಿಗೆ

---

[1] ಆಧುನಿಕ ಕನ್ನಡ ನಾಟಕ – ಡಾ.ಕೆ. ಮರುಳ ಸಿದ್ದಪ್ಪ, ಪುಟಸಂಖ್ಯೆ 156, ಅಂಕಿತ ಪುಸ್ತಕ ಪ್ರದರ್ಶನ, 1983.

ನೀನು ಏನನ್ನು ಸಾಧಿಸಿಲ್ಲ ಎಂಬುದನ್ನು ತೋರಿಸಿಕೊಡಲು ಗೌತಮಬುದ್ಧ ಪ್ರಶ್ನಿಸುತ್ತಾನೆ. ಅಂದರೆ ಇದುವರೆಗೂ ಸಾಧಿಸಿರುವುದೆಲ್ಲವೂ ಕೂಡ ಅಲ್ಪ. ಅದು ನಿನ್ನ ಭವಿಷ್ಯದ ದೃಷ್ಟಿಯಿಂದ ಉತ್ತಮವಾದುದಲ್ಲ. ಜೊತೆಗೆ ಸನ್ಮಾರ್ಗದತ್ತ ಕೊಂಡೊಯ್ಯುವ ದಾರಿದೀಪವೂ ಅಲ್ಲ. ಅದಕ್ಕಾಗಿ

"ಇದುವರೆಗೆ ಗೆದ್ದಿರುವ ರಾಜ್ಯವೆಲ್ಲವ ಮೀರಿ–
ಮೊಂದು ರಾಜ್ಯವ ನೀನು ಗೆಲ್ಲಬೇಕಾಗಿಹುದು
ಅದನು ತೋರಿಸಲೆಂದೆ ನಾ ಬಂದೆ."[1]

ಎನ್ನುತ್ತಾನೆ. ತನ್ನ ಬಳಿಗೆ ಬರಲು ಎಲ್ಲರೂ ಹೆದರುತ್ತಿರುವಾಗ ಈತ ಧೈರ್ಯವಾಗಿ ಬಂದು ಈ ರೀತಿ ಉಪದೇಶಿಸುವುದನ್ನ ಕಂಡ ಅಂಗುಲಿಮಾಲ ಆತನ ವಾಕ್‌ಚಾತುರ್ಯಕ್ಕೆ ಮಾರು ಹೋಗಿ "ಕಂದ ಕಂದ ! ಹೊಸತೆನಗೆ ಈ ಮಾತಿನಿಂದ" ಎಂದು ಬೆರಗಾಗುತ್ತಾನೆ. ಬುದ್ಧನ ವಾಕ್‌ಚಾತುರ್ಯಕ್ಕೆ ಮರುಳಾಗಿ ತನ್ನ ಅಧರ್ಮ ಮಾರ್ಗವನ್ನ ಬಿಟ್ಟು ಬುದ್ಧನ ಸನ್ಮಾರ್ಗದತ್ತ ತೆರಳಲು ಸಿದ್ದನಾಗುತ್ತಾನೆ. ಮಹಾನ್ ಕ್ರೂರಿಯಾದ ಅಂಗುಲಿಮಾಲ ಬುದ್ಧನ ಸರಳ ಸಜ್ಜನಿಕೆಯ ವ್ಯಕ್ತಿತ್ವಕ್ಕೆ ಆತನ ಹಿತ ನುಡಿಗಳಿಗೆ ಮಾರು ಹೋಗುತ್ತಾನೆ.

ಬುದ್ಧನ ಜೊತೆ ಬಂದ ಅಂಗುಲಿಮಾಲ ಬೌದ್ಧ ಧರ್ಮವನ್ನು ಸ್ವೀಕರಿಸಿ ಭಿಕ್ಷಾಟನೆಗೆ ಹೊರಡುತ್ತಾನೆ. ಇದುವರೆಗೂ ಕಾಣದಿದ್ದ ಹೊಸತೊಂದು ಕಾಯಕವನ್ನು ಕೈಗೊಂಡ ಆತನ ಮನಸ್ಸಿನಲ್ಲಿ ನಿರಮ್ಮಳತೆ ಕಾಣುತ್ತದೆ. ಹಾಗಾಗಿ ಬುದ್ಧನ ಬಳಿಯೇ ಇರುವ ಇಚ್ಛೆಯನ್ನು ವ್ಯಕ್ತಪಡಿಸುತ್ತಾನೆ. ಆದರೆ ನಿಯಮದಂತೆ ಉಳಿಯಲು ಅವಕಾಶವಿಲ್ಲದ ಕಾರಣ ಮತ್ತೊಮ್ಮೆ ಭೇಟಿಯಾಗುತ್ತೇನೆ ಎಂದು ಹೇಳಿ ಹೊರಡುತ್ತಾನೆ. ಅದೇ ರೀತಿ ಮತ್ತೆ ಭೇಟಿಯಾದಾಗ ಅಂಗುಲಿಮಾಲನ ಮೈಯಲ್ಲಿ ಗಾಯ, ರಕ್ತ ಕಂಡುಬರುತ್ತದೆ. ಇದನ್ನು ನೋಡಿದ ಬುದ್ಧ ಕಾರಣವನ್ನು ಕೇಳಿ ತಿಳಿದಾಗ ಹಿಂದಿನ ಅಂಗುಲಿಮಾಲನ ಭೀಭತ್ಸ ಅವತಾರವನ್ನು ನೋಡಿದ್ದ ಜನರು, ಇಂದಿನ ಶಾಂತ ಅವತಾರವನ್ನು ನೋಡಿಯೂ ಪರಿವರ್ತನೆಯನ್ನು ಸಹಿಸದೆಯೂ ಆಕ್ರಮಣ ಮಾಡಿರುತ್ತಾರೆ. ಇವರಿಂದ ಹೇಗೋ ಜೀವ ಉಳಿಸಿಕೊಂಡು ಬಂದ ಅಂಗುಲಿಮಾಲ ಬುದ್ಧನ ಬಳಿ ಸಾವನ್ನಪ್ಪುತ್ತಾನೆ. ಒಂದುಕಡೆ ಸದಾ ಕ್ರೂರಿಯಾಗಿದ್ದ ಅಂಗುಲಿಮಾಲನನ್ನು ಮನಃ ಪರಿವರ್ತನೆಯ ಮುಖಾಂತರ ಬುದ್ಧ ಸರಿದಾರಿಗೆ ತಂದರೆ, ಮತ್ತೊಂದು ಕಡೆ ಜನರು ಕ್ರೂರತ್ವದಿಂದಲೇ ವರ್ತಿಸಿ ಅಂಗುಲಿಮಾಲನ ಸಾವಿಗೆ ಕಾರಣರಾಗುತ್ತಾರೆ. "ಬುದ್ಧ ಅಂಗುಲಿಮಾಲರ ಮುಖಾ ಮುಖಿ ಈ ನಾಟಕದ ಶಿಖರವಾಗಿದ್ದು ಅಲ್ಲಿಂದ ಮುಂದಿನ ಘಟನೆಗಳೆಲ್ಲ ಈ ಸಂದರ್ಭದ ವ್ಯಾಖ್ಯಾನದಂತಿದೆ. ಸನ್ನಿವೇಶ ಪರಿಕಲ್ಪನೆಯಲ್ಲಿ

---

[1] ಬುದ್ಧ ನಾಟಕ ಚಕ್ರ – ಪ್ರಭುಶಂಕರ ಪುಟ ಸಂಖ್ಯೆ 36, 2001, ಡಿ.ವಿ.ಕೆ. ಮೂರ್ತಿ ಪ್ರಕಾಶನ.

ಪ್ರಭುಶಂಕರರು ತೋರಿಸುವ ಪರಿಣತಿ ಈ ನಾಟಕದ ಒಂದು ವೈಶಿಷ್ಟ್ಯ. ಬುದ್ಧನ ಪಾತ್ರ ರಚನೆಯಲ್ಲಿ ಆದರ್ಶ ಪರತೆಯಿದ್ದು ಅಂಗುಲೀಮಾಲನ ಸಾವಿನ ಸಂದರ್ಭದಲ್ಲಿ ಆತ ತೋರಿಸುವ ನಿರ್ಭಾವುಕತೆ ಅಸಹಜವೆನ್ನಿಸುತ್ತದೆ. ನಾಟಕದ ಪದ್ಯ ಮಾಧ್ಯಮವು ಸಹಜ ವಾತಾವರಣ ಸೃಷ್ಟಿಗೂ ತುಸು ಅಡ್ಡಿಯಾಗಿದೆ"[1] ಎಂಬ ಕೆ. ಮರುಳಸಿದ್ದಪ್ಪನವರ ಮಾತುಗಳನ್ನು ನಾವು ಇಲ್ಲಿ ನೋಡಬಹುದು. ಒಟ್ಟಾರೆ ದುಷ್ಟ ವ್ಯಕ್ತಿಯೊಬ್ಬನನ್ನು ಮನಃಪರಿವರ್ತನೆಯ ಮುಖಾಂತರ ಸರಿದಾರಿಗೆ ತರುವುದು ಈ ನಾಟಕದಲ್ಲಿ ಕಂಡು ಬರುತ್ತದೆ.

'ಆಮ್ರಪಾಲಿ'

'ಆಮ್ರಪಾಲಿ' ಪ್ರಭುಶಂಕರರ ಎರಡನೇ ನಾಟಕ. ಈ ನಾಟಕದ ಮುಖ್ಯ ಉದ್ದೇಶವೆಂದರೆ ಬುದ್ಧನ ತತ್ವಗಳನ್ನು ಕೇಳಿದರೆ ಸಾಕು ತಪ್ಪು ಮಾರ್ಗದಲ್ಲಿ ನಡೆಯುತ್ತಿರುವವರು ಸರಿ ದಾರಿಗೆ ತಡೆ ಹೊರಳುತ್ತಾರೆ ಎಂಬುದು. ಅಂದರೆ ಕೆಟ್ಟ ಮಾರ್ಗದಲ್ಲಿ ನಡೆಯುತ್ತಿರುವವರನ್ನು ಸರಿದಾರಿಗೆ ತರಲು ಸಾಕ್ಷಾತ್ ಬುದ್ಧನೇ ಬರಬೇಕಾಗಿಲ್ಲ. ಬದಲಾಗಿ ಆತನ ತತ್ತೋಪದೇಶವನ್ನು ಕೇಳಿದರೆ ಸಾಕು ಎಂತಹವರು ಬದಲಾಗುತ್ತಾರೆ ಎಂಬುದು ಮುಖ್ಯವಾಗಿ ಕಂಡುಬರುತ್ತದೆ.

ಪ್ರಭುಶಂಕರರ 'ಅಂಗುಲಿಮಾಲ' ಮತ್ತು 'ಆಮ್ರಪಾಲಿ' ಎರಡೂ ನಾಟಕಗಳು ಮನಃಪರಿವರ್ತನೆಯ ನೆಲೆಯಲ್ಲಿ ರಚನೆಗೊಂಡಿವೆ. "ಪ್ರಭುಶಂಕರರ 'ಆಮ್ರಪಾಲಿ' ಮತ್ತು 'ಅಂಗುಲಿಮಾಲ' ವಸ್ತು ಕಲ್ಪನೆಯ ದೃಷ್ಟಿಯಿಂದ ವಿನೂತನ ಪ್ರಯತ್ನಗಳಾಗಿವೆ. ಬುದ್ಧನ ಪ್ರಭಾವದಿಂದ ಮಾರ್ಪಟ್ಟ ಇಬ್ಬರು ವ್ಯಕ್ತಿಗಳ ಕತೆಯನ್ನು ಆಧರಿಸಿರುವ ಈ ಎರಡು ನಾಟಕಗಳು ಭಿನ್ನ ನೆಲೆಯಲ್ಲಿ ಬುದ್ಧನ ವ್ಯಕ್ತಿತ್ವ ಮತ್ತು ಉಪದೇಶವನ್ನು ವಿಶ್ಲೇಷಿಸುತ್ತಿವೆ"[2] ಎಂಬ ಮರುಳ ಸಿದ್ದಪ್ಪನವರ ಮಾತುಗಳನ್ನು ಇಲ್ಲಿ ನೆನಯಬಹುದು.

ನಾಟಕದಲ್ಲಿ ಆಮ್ರಪಾಲಿ ಮುಖ್ಯ ಪಾತ್ರಧಾರಿಯಾಗಿದ್ದಾಳೆ. ಈಕೆಯನ್ನು ಅನುಸರಿಸಿ ಮೋಹಿನಿ, ದೀಪಿಕಾ, ಲಾವಣ್ಯ, ಮಾಲಿನಿ, ಹರಿಣಿ ಮುಂತಾದ ಸ್ತ್ರೀ ಪಾತ್ರಗಳು ಬರುತ್ತವೆ ಮತ್ತೊಂದು ಕಡೆ ಬುದ್ಧ ಪ್ರಮುಖವಾಗಿ ಆತನನ್ನು ಅನುಸರಿಸಿ ಆತನ ಶಿಷ್ಯರು ಕಂಡು ಬರುತ್ತಾರೆ. ನಾಟಕದ ಆರಂಭದಲ್ಲೇ ನಾಟಕಕಾರರು ದ್ವಂದ್ವ ಮನಸ್ಸಿನ ವ್ಯಕ್ತಿ ಬೌದ್ಧ ಧರ್ಮವನ್ನು ಅನುಸರಿಸಲು ಶಕ್ತನಲ್ಲ ಎಂಬುದನ್ನು ಸಾಧಿಸಿ ತೋರಿಸಿದ್ದಾರೆ. ಬುದ್ಧನ ಅನುಯಾಯಿಯಾಗಿ ಬೌದ್ದ ಧರ್ಮವನ್ನು ಅನುಸರಿಸಬೇಕು ಎಂದರೆ ಮಾನಸಿಕ ಸ್ಥಿರತೆ ಕಠಿಣ ಪರಿಶ್ರಮ, ಐಹಿಕ ಸುಖ ಭೋಗಗಳನ್ನು

---

[1] ಆಧುನಿಕ ಕನ್ನಡ ನಾಟಕ – ಡಾ. ಕೆ. ಮರುಳಸಿದ್ದಪ್ಪ, ಪುಟ ಸಂಖ್ಯೆ 36, 1983 ಅಂಕಿತ ಪುಸ್ತಕ ಪ್ರಕಾಶನ, ಪುಟ 156.

[2] ಆಧುನಿಕ ಕನ್ನಡ ನಾಟಕ - ಕೆ.ಮರುಳ ಸಿದ್ದಪ್ಪ, ಪು. ಸಂ. 156, 1983, ಅಂಕಿತ ಪುಸ್ತಕ ಪ್ರಕಾಶನ.

ತ್ಯಜಿಸುವ ಶಕ್ತಿ ಇವೇ ಮುಂತಾದವು ಇರಬೇಕು. ಇವಿಲ್ಲದೆ ಕೇವಲ ಡಾಂಭಿಕತೆಯನ್ನು ಪ್ರದರ್ಶಿಸಲು ಮೇಲ್ಮಟ್ಟದ ಭಿಕ್ಷುವಾದರೆ ಅಲ್ಲಿನ ನಿಯಮಗಳನ್ನು ಪಾಲಿಸಲಾರದೆ ಪರಿತಪಿಸಬೇಕಾದ ಸ್ಥಿತಿ ಒದಗುತ್ತದೆ ಎಂಬುದು ಎಚ್ಚರಿಕೆಯ ರೀತಿಯಲ್ಲಿ ಪ್ರಭುಶಂಕರರು ತಿಳಿಸಿದ್ದಾರೆ.

ಸುವರ್ಣದತ್ತ ಅಪಾರ ಐಶ್ವರ್ಯವಂತನಾಗಿದ್ದು ಯಾವಾಗಲೂ ಐಹಿಕ ಸುಖ ಭೋಗದಲ್ಲಿಯೇ ತೇಲುತ್ತಿದ್ದಂತಹ ವ್ಯಕ್ತಿ. ಈತ ತನ್ನ ಸಂಪತ್ತಿನ ಎಷ್ಟೋ ಭಾಗವನ್ನು ವೇಶ್ಯಾ ಗೃಹದಲ್ಲಿ ವಿನಿಯೋಗಿಸಿದ್ದ. ಇಂತಹ ಸುಖ ಲೋಲುಪನಾದ ಸುವರ್ಣದತ್ತ ಬುದ್ದನ ಹಿತೋಪದೇಶ ಕೇಳಿ ಜಗತ್ತಿನಲ್ಲಿ ಶಾಶ್ವತ ಸುಖ ಇದಿಷ್ಟೇ ಅಲ್ಲ ಬದಲಾಗಿ ಇದನ್ನು ಮೀರಿದ್ದು ಇನ್ನು ಇದೆ ಎಂದು ತಿಳಿದು ಸಂಪತ್ತೆಲ್ಲವನ್ನು ದಾನ ಮಾಡಿ ಬುದ್ದನ ಅನುಯಾಯಿಯಾಗಿರುತ್ತಾನೆ. ಭಿಕ್ಷುವಾಗಿ ನಿಯಮದಂತೆ ತಲೆ ಬೋಳಿಸಿ ಕಾವಿತೊಟ್ಟು ಸನ್ಯಾಸಿಯಾಗಿರುತ್ತಾನೆ. ಜೊತೆಗೆ "ಬೆಳಗ್ಗೆ ಗುರುವಿನ ಸೇವೆ, ಮಧ್ಯಾಹ್ನ ಹತ್ತು ಸಲ ಮಾತ್ರ ಭಿಕ್ಷೆಕೇಳುವುದು ಸಿಕ್ಕಿದಷ್ಟನ್ನೂ ಇತರರಿಗೂ ಹಂಚಿ ಸ್ವೀಕರಿಸುವುದು. ಅಪರಾಹ್ನ ಅಧ್ಯಯನ, ರೋಗಿಗಳ ಶೂಶ್ರೂಷೆ. ಸಂಜೆ ಗುರುವಿನ ಪ್ರವಚನ ಕೇಳುವುದು"[1] ಮಾಡುತ್ತಿರುತ್ತಾನೆ. ಈ ರೀತಿ ಬೌದ್ದ ವ್ರತಾಚರಣೆಯಲ್ಲಿರುವ ಸಂದರ್ಭದಲ್ಲಿ ಬುದ್ದ ಮತ್ತು ಆತನ ಅನುಚರರ ಜೊತೆ ಬೌದ್ದ ಧರ್ಮದ ತತ್ವಗಳನ್ನು ಜನಸಾಮಾನ್ಯರಿಗೆ ಉಪದೇಶ ಮಾಡುವ ಉದ್ದೇಶದಿಂದ ಶ್ರಾವಸ್ಥಿ ನಗರದ ಉಪವನಕ್ಕೆ ಬಂದಿರುತ್ತಾರೆ. ನಿತ್ಯ ಕಾಯಕದಂತೆ ಭಿಕ್ಷೆ ಬೇಡಲು ಶ್ರಾವಸ್ಥಿ ನಗರವನ್ನು ಸುವರ್ಣದತ್ತ ಪ್ರವೇಶಿಸಿ ಆಮ್ರಪಾಲಿಯ ಮನೆಯ ಬಳಿಗೆ ಬರುತ್ತಾನೆ. ಅಲ್ಲಿ ಮೋಹಿನಿಯನ್ನು ನೋಡಿ ಆತನ ಹಿಂದಿನ ವಿಷಯಾಸಕ್ತ ಮನಸ್ಸು ಎಚ್ಚರಗೊಳ್ಳುತ್ತದೆ. ಆದರೂ ಮೇಲ್ನೋಟಕ್ಕೆ ಏನೂ ಇಲ್ಲದವನಂತೆ ವರ್ತಿಸಿ ಭಿಕ್ಷೆ ಪಡೆದು ವಾಪಸ್ಸು ಬರುತ್ತಾನೆ. ಆದರೆ ಅದಾಗಲೆ ಆತನ ಮನಸ್ಸು ಚಂಚಲತೆಗೆ ಒಳಗಾಗಿರುತ್ತದೆ. ಬೌದ್ದ ಭಿಕ್ಷುವಾಗಿ ಈ ರೀತಿ ಚಿತ್ತ ಚಾಂಚಲ್ಯಕ್ಕೆ ಒಳಗಾಗುವುದು ಅಪರಾಧವೇನೋ ಎಂದು ಬುದ್ದನ ನೆಚ್ಚಿನ ಶಿಷ್ಯ ಆನಂದನನ್ನು ಕೇಳುತ್ತಾನೆ. ಅದಕ್ಕೆ ಆನಂದ ಈ ರೀತಿಯ ಸಮಸ್ಯೆ ಸರ್ವರಲ್ಲೂ ಕಂಡುಬರುತ್ತದೆ. ಆ ಸಂದರ್ಭದಲ್ಲಿ ಬುದ್ದಿಯನ್ನು ಮನಸ್ಸಿನ ಕೈಗೆ ಕೊಡದೆ ಮಾನಸಿಕ ಸ್ಥಿರತೆಯನ್ನು ಮಾತ್ರ ಕಾಪಾಡಿಕೊಳ್ಳಬೇಕು. ಇಲ್ಲದಿದ್ದಲ್ಲಿ ಧರ್ಮವನ್ನು ತ್ಯಜಿಸಿ ಐಹಿಕ ಸುಖದತ್ತ ವಾಲಬೇಕು ಅದರಲ್ಲಿ ಯಾವುದೇ ವಿಧವಾದ ತಪ್ಪಿಲ್ಲ ಎಂದು ತಿಳಿಸುತ್ತಾನೆ. ಇದರಿಂದ ನಿರಮ್ಮಳ ಮನಸ್ಸಿನವನಾದ ಸುವರ್ಣದತ್ತ ವಾಪಸ್ಸು ಬರುತ್ತಾನೆ.

ಆಮ್ರಪಾಲಿಯು ಒಬ್ಬ ಸುಂದರ ಸ್ತ್ರೀಯಾಗಿದ್ದು ಆಕೆಗೆ ತನ್ನ ಸೌಂದರ್ಯವೇ ಮಾರಕವಾಗಿರುತ್ತದೆ. ಈಕೆ ತಂದೆ ತಾಯಿ ಇಲ್ಲದ ತಬ್ಬಲಿಯಾಗಿದ್ದು ಬಾಲ್ಯದಲ್ಲಿ ವಿಶ್ವವಸುವಿನ

---

[1] ಬುದ್ಧ ನಾಟಕ ಚಕ್ರ – ಪ್ರಭುಶಂಕರ, ಪುಟ ಸಂ. 68, 2001, ಡಿ.ವಿ.ಕೆ. ಮೂರ್ತಿ ಪ್ರಕಾಶನ.

ಆಶ್ರಯದಲ್ಲಿ ಬೆಳೆಯುತ್ತಾಳೆ. ವಿಶ್ವವಸು ಈಕೆಗೆ ಸಂಗೀತ ಮತ್ತು ನೃತ್ಯ ಕಲೆಗಳನ್ನು ತಿಳಿಸಿಕೊಟ್ಟು ಪರಿಪೂರ್ಣ ಕಲಾವಿದೆಯಾಗಿ ಮಾಡಿರುತ್ತಾನೆ. ಹಾಗಾಗಿ ಈಕೆಯ ಈ ಕಲೆಯನ್ನು ಜಗತ್ತಿಗೆ ತೋರಿಸಬೇಕು ಎಂಬುದನ್ನು ಈಕೆ ತಪ್ಪಾಗಿ ಅರ್ಥೈಸಿಕೊಂಡು ರಾತ್ರೋರಾತ್ರಿ ಮನೆಬಿಟ್ಟು ಬಂದಿರುತ್ತಾಳೆ" ನಾನು ಮನೆಬಿಟ್ಟ ರಾತ್ರಿ ನೀವು ನಿಮ್ಮ ಮಲಗುವ ಕೋಣೆಯಲ್ಲಿ ಆಡಿದ ಮಾತು ಪಕ್ಕದ ಕೋಣೆಯಲ್ಲಿ ಮಂಗಕ್ರಿಯ ಪಕ್ಕದಲ್ಲಿ ಮಲಗಿದ್ದ ನನ್ನ ಕಿವಿಯ ಮೇಲೆ ತಾನಾಗಿಯೇ ಬಿತ್ತು. ಗುರುಗಳೇ ನೀವು ಹೇಳಿದಿರಿ: ಇನ್ನು ಐದೇ ವರ್ಷ ಆಮ್ರಪಾಲಿಯನ್ನು ದೇಶಾದ್ಯಂತ ಮೆರೆಸುತ್ತೇನೆ. ಊರು ಊರುಗಳಲ್ಲೂ ಅವಳ ನೃತ್ಯ ಗಾಯನದ ಪ್ರದರ್ಶನ. ಅವಳ ಚೆಲುವು, ಅವಳ ಕಲೆ ಹೇಗೆ ಐಶ್ವರ್ಯವನ್ನು ತಂದು ತುಂಬುತ್ತದೆ ನೋಡುತ್ತಿರು.... ನನ್ನ ನಗರದಲ್ಲೂ ಮಂಜು ಹಾಯಿಸಿದಂತಾಯಿತು. ಎದ್ದೆ, ಹೊರಬಾಗಿಲು ತೆರೆದು ಹೊರಟೇಬಿಟ್ಟೆ" ಗುರುಗಳಾಡಿದ ಮಾತನ್ನು ಕೇಳಿಸಿಕೊಂಡ ಈಕೆ ತನ್ನ ಚೆಲುವು ಅತಿಯಾಗಿರುವುದರಿಂದ ದೇಶಾದ್ಯಂತ ತನ್ನ ಚೆಲುವನ್ನು ಮಾರಲು ಬಯಸಿದ್ದಾರೆ ಎಂದು ತಪ್ಪಾಗಿ ತಿಳಿದು ಆಕೆ ಅಲ್ಲಿಂದ ಹೊರಬಂದಿರುತ್ತಾಳೆ. ಆದರೆ ದುರಾದೃಷ್ಟವಶಾತ್ 'ಕುದಿಯುವ ಬಾಣಲೆಯಿಂದ ಬೆಂಕಿಗೆ ಬಿದ್ದಂತಾಯಿತು' ಅವಳ ಬದುಕು. ವೇಶ್ಯಾವಾಟಿಕೆಗೆ ನೂಕಬಹುದು ಎಂಬ ಭಯದಿಂದ ಹೊರಬಂದ ಆಕೆ ಸಮಾಜದ ಕ್ರೂರ ದೃಷ್ಟಿಗೆ ಒಳಗಾಗಿ ಅದೇ ಮಾರ್ಗವನ್ನ ಅನುಸರಿಸಿ ಬದುಕಬೇಕಾಯಿತು.

ಆಮ್ರಪಾಲಿ ವೇಶ್ಯಾವೃತ್ತಿಯನ್ನು ಇಚ್ಛೆಪಟ್ಟು ಆರಿಸಿಕೊಂಡದ್ದಲ್ಲ ಬದಲಾಗಿ ಪರಿಸ್ಥಿತಿಯ ವಿಕೋಪಕ್ಕೆ ಸಿಲುಕಿ ಈ ಮಾರ್ಗವನ್ನು ಅನುಸರಿಸುತ್ತಾಳೆ. 'ನೀರಿಗೆ ಮುಳುಗಿದ ಮೇಲೆ ಚಳಿಯಾದರೇನು, ಮಳೆಯಾದರೇನು, ಎಂಬಂತೆ ಇಚ್ಛೆ ಇದ್ದೋ ಇಲ್ಲವೋ ಆ ವೃತಿಯನ್ನು ಕೈಗೊಂಡ ಮೇಲೆ ಅದರಲ್ಲೇ ಮುಂದುವರಿಯಬೇಕಾಯಿತು. ಆಕೆ ಅಪ್ರತಿಮ ಸುಂದರಿಯಾದುದರಿಂದ ಅವಳ ಮನೆಯ ಮುಂದೆ ರಾಜ ಮಹಾರಾಜರೂ, ವರ್ತಕರೂ, ಸಿರಿವಂತರೂ ಎಲ್ಲರೂ ಸಾಲುಗಟ್ಟಿ ನಿಂತರು. ಸಾಮಾನ್ಯ ಸ್ತ್ರೀಯಾಗಿದ್ದ ಈಕೆ ತನ್ನ ಸೌಂದರ್ಯದಿಂದ ಪ್ರಸಿದ್ಧಿಯನ್ನು ಗಳಿಸಿ ಅಪಾರ ಸಂಪತ್ತನ್ನು ಗಳಿಸಿದ್ದಳು. ಆಕೆಯ ವರ್ಚಸ್ಸು ಎಷ್ಟರಮಟ್ಟಿಗೆ ಇದ್ದಿತೆಂದರೆ ರಾಜಕುಮಾರನೊಬ್ಬ ಆಕೆಯನ್ನು ರಾಜ್ಯದ ಮಹಾರಾಣಿ ಮಾಡಿಕೊಳ್ಳಲು ಇಚ್ಛೆಯನ್ನು ವ್ಯಕ್ತಪಡಿಸುವಷ್ಟು. ಇಷ್ಟೆಲ್ಲಾ ಸಂಪತ್ತು ಖ್ಯಾತಿಯನ್ನು ಗಳಿಸಿದ್ದ ಆಕೆ ಶ್ರಾವಸ್ಥಿ ನಗರದ ಉಪವನದಲ್ಲಿ ಬೀಡು ಬಿಟ್ಟಿದ್ದ ಬುದ್ಧನ ಪ್ರವಚನವನ್ನು ಕೇಳಿ ಸಂಪೂರ್ಣವಾಗಿ ಪರಿವರ್ತನೆಯಾಗುತ್ತಾಳೆ. ಜಗತ್ತೇ ಶೂನ್ಯ, ಎಲ್ಲವೂ ನಶ್ವರ ಎಂಬುದನ್ನು ತಿಳಿದ ಆಕೆ ಬುದ್ಧನ ಅನುಯಾಯಿಯಾಗಲು ನಿರ್ಧರಿಸುತ್ತಾಳೆ. ಇದೇ ಕಾರಣದಿಂದ ತನ್ನ ಜೊತೆಗಿದ್ದ ಇತರ ಸ್ತ್ರೀಯರಿಗೂ ಕೂಡ ಬುದ್ಧನ ತತ್ವೋಪದೇಶವನ್ನು ತಿಳಿಸಿ ಅವರು ಕೂಡ ಬುದ್ಧನತ್ತ ವಾಲುವಂತೆ ಮಾಡುತ್ತಾಳೆ. ಹೀಗಾಗಿ ಬುದ್ಧನ ಅನುಯಾಯಿಯಾಗಲು ನಿರ್ಧರಿಸಲು ಆಮ್ರಪಾಲಿ

ತನ್ನನ್ನು ಅರಸಿ ಬಂದ ಪಿಟ ಪುರಷರನ್ನು ಧಿಕ್ಕರಿಸುತ್ತಾಳೆ. ತದ ನಂತರ ಬುದ್ದನನ್ನು ಕಾಣುವ ತವಕದಲ್ಲಿ ಇರುವಾಗ ಈ ವೇಳೆಗೆ ಆಮ್ರಪಾಲಿಯ ವಿಚಾರವನ್ನು ಕೇಳಿ ತಿಳಿದಿದ್ದ ಗೌತಮಬುದ್ದ ತನ್ನ ದರ್ಶನಕ್ಕೆ ಆಕೆಗೆ ಅನುಮತಿ ನೀಡುತ್ತಾನೆ. ಒಬ್ಬ ವೇಶ್ಯಾ ಸ್ತ್ರೀಯಾಗಿದ್ದ ತನಗೆ ಸಾಕ್ಷಾತ್ ಗೌತಮಬುದ್ದರ ಭೇಟಿಗೆ ಅವಕಾಶ ಸಿಕ್ಕಾಗ ಹಿಂಜರಿಕೆಯಿಂದ, ಅತ್ಯುತ್ಸಾಹದಿಂದ ಬುದ್ದನನ್ನು ಭೇಟಿಯಾಗಿ ತಾನು ಇದುವರೆಗೂ ಕೈಗೊಂಡಿದ್ದ ವೃತ್ತಿಯನ್ನು ತ್ಯಜಿಸಿ ತನ್ನ ಅನುಯಾಯಿಯಾಗುವುದಾಗಿಯೂ ಮತ್ತು ತಮ್ಮ ಮನೆಗೆ ಶಿಷ್ಯರೊಂದಿಗೆ ಭಿಕ್ಷೆಗೆ ಬಂದು ಭಿಕ್ಷೆ ಸ್ವೀಕರಿಸಬೇಕೆಂದು ಕೋರಿಕೊಳ್ಳುತ್ತಾಳೆ.

ಬುದ್ದನ ದೃಷ್ಟಿಯಲ್ಲಿ ಸರ್ವರೂ ಸಮಾನರು. ಯಾವುದೇ ಮೇಲು ಕೀಳು ಬೇಧ ಭಾವ ಸಲ್ಲದು. ಸಾಮಾನ್ಯ ವೇಶ್ಯಯಾಗಿದ್ದ ಆಮ್ರಪಾಲಿಯು ಒಬ್ಬ ಮನುಷ್ಯಳೇ. ಹಾಗಾಗಿ ಅವಳ ಮನೆಯಲ್ಲಿ ಭಿಕ್ಷೆಯನ್ನು ಸ್ವೀಕರಿಸಲು ಒಪ್ಪುತ್ತಾನೆ. ಈ ವಿಷಯ ನಾಡಿನಲ್ಲೆಲ್ಲಾ ಹರಡಿ ಬುದ್ದನ ಅಂತರಂಗವನ್ನರಿಯದ ಕುಹಕಿಗಳು ಇಲ್ಲ ಸಲ್ಲದ ಮಾತಾಡುತ್ತಾರೆ. ಅವರ ಪ್ರಕಾರ ಆಮ್ರಪಾಲಿ ಒಬ್ಬ ವೇಶ್ಯ. ಆಕೆಯನ್ನು ಕೇವಲ ಒಂದು ಭೋಗದ ವಸ್ತು ಎಂದು ಪರಿಗಣಿಸಿದ್ದರು. ಜೊತೆಗೆ ಸಮಾಜ ಆಕೆಯನ್ನು ವಕ್ರ ದೃಷ್ಟಿಯಲ್ಲಿ ನೋಡುತ್ತಿತ್ತು. ಆಕೆಯನ್ನ ಯಾರೂ ಕೂಡ ಹತ್ತಿರ ಸೇರಿಸುವುದಾಗಲಿ ಅಥವಾ ಅವಳ ಮನೆಗೆ ಹೋಗುವುದಾಗಲಿ ಮಾಡುತ್ತಿರಲಿಲ್ಲ. ಅಪ್ಪಿ ತಪ್ಪಿ ಅವಳ ಮನೆಗೆ ಹೋದರೆ ಅದು ಬೇರೆಯೇ ಉದ್ದೇಶವಾಗಿರುತ್ತಿತ್ತು. ಇಂತಹ ಪರಿಸ್ಥಿತಿಯಲ್ಲಿ ಬುದ್ದ ಆಕೆಯ ಮನೆಯಲ್ಲಿ ಭಿಕ್ಷೆಯನ್ನು ಸ್ವೀಕರಿಸಲು ಹೊರಟಾಗ ಆತನ ಬೌದ್ಧ ಸಂಘದ ಭಿಕ್ಷುಗಳೇ ಅಪಸ್ವರವನ್ನು ನುಡಿಯಲು ಆರಂಭಿಸಿದರು. “ಇದೇನಯ್ಯಾ, ಮನೆಬಿಟ್ಟು, ಧರ್ಮಬಿಟ್ಟು ಸಂಪತ್ತು ಬಿಟ್ಟು ಉದ್ಧಾರಕ್ಕೆ ಎಂದು ಇವರನ್ನು ಆಶ್ರಯಿಸಿದರೆ ವೇಶ್ಯೆಯ ಮನೆಗೆ ಔತಣಕ್ಕೆ ಹೊರಟಿದ್ದಾರೆ” ಎನ್ನುತ್ತಾರೆ ಬುದ್ದ ನೆಚ್ಚಿನ ಶಿಷ್ಯರಾದ ಆನಂದ ಮತ್ತು ಮೊಗ್ಗಲಾಯನ ಇವರ ಮನಸ್ಸಿನಲ್ಲಿ ಕವಿದ ಕತ್ತಲೆಯನ್ನು ಹೋಗಲಾಡಿಸುತ್ತಾರೆ. ಹೀಗಾಗಿ ಎಲ್ಲರೂ ಕೂಡ ಆಮ್ರಪಾಲಿಯ ಮನೆಗೆ ತಲುಪಿ ಭಿಕ್ಷೆ ಸ್ವೀಕರಿಸುತ್ತಾರೆ. ಅನಂತರ ಆಮ್ರಪಾಲಿ ತನ್ನ ಸಂಪತ್ತೆಲ್ಲವನ್ನು ಬೌದ್ಧ ಸಂಘಕ್ಕೆ ಕೊಟ್ಟು ತಾನೂ ಭಿಕ್ಷುಣಿಯಾಗುವ ಇಂಗಿತವನ್ನು ವ್ಯಕ್ತಪಡಿಸುತ್ತಾಳೆ. ಅದಕ್ಕೆ ಬುದ್ದ ಸಂಪತ್ತಿನಿಂದ ಬೌದ್ಧ ಸಂಘವನ್ನು ಕಟ್ಟಿ ಹಾಕಬೇಡ, ಬದಲಾಗಿ ಮನಸ್ಸನ್ನು ಧರ್ಮದಲ್ಲಿ ಸ್ಥಿರಗೊಳಿಸಿ ಇರು ಎಂದು ತಿಳಿಸುತ್ತಾನೆ. ಅನಂತರ ಆಮ್ರಪಾಲಿಯು ನೀವು ತಂಗಿರುವ ಉಪವನ ನನ್ನದು ಅದನ್ನಾದರೂ ಒಪ್ಪಿಸಿಕೊಳ್ಳಿ ಎಂದು ತಿಳಿಸಿದಾಗ, ಆಗಲಿ ಸಾವಿರುವವರೆಗೆ ಅದು ನಮ್ಮದಾಗಿರುತ್ತದೆ ಎಂದು ತಿಳಿಸಿ ಹೊರಡುತ್ತಾನೆ. ಬೌದ್ಧ ಧರ್ಮದಲ್ಲಿ ಸಂಪತ್ತಿನ ಸಂಗ್ರಹಣೆಗೆ ಅವಕಾಶವಿಲ್ಲ. ಸರಳ ಜೀವನವೇ ಮುಖ್ಯ ಧ್ಯೇಯ. ಆಹಾರಕ್ಕಾಗಿ ಹತ್ತಾರು ಮನೆಗಳಲ್ಲಿ ಭಿಕ್ಷೆ ಮಾಡುವುದು, ಸಿಕ್ಕಿದಷ್ಟು ದಾನ ಮಾಡಿ ಉಳಿದದ್ದನ್ನು ತಿನ್ನುವುದು.

ರೋಗಿಗಳ ಶುಶ್ರೂಷೆ ಮಾಡುವುದು ಇವೇ ಆಗಿರುತ್ತವೆ. ಹಾಗಾಗಿ ಆಮ್ರಪಾಲಿಯು ನೀಡಲು ಹೊರಟಿದ್ದ ಸಂಪತ್ತನ್ನು ಗೌತಮ ತಿರಸ್ಕರಿಸುತ್ತಾನೆ.

ಒಟ್ಟಾರೆಯಾಗಿ ಸಮಾಜದ ವಿಕೃತವೃತ್ತಿಗೆ ಸಿಲುಕಿ ಸಾಮಾನ್ಯ ಜನರಿಗೆ ಇಷ್ಟವಿಲ್ಲದ ಬದುಕನ್ನು. ವೇಶ್ಯಾ ಬದುಕನ್ನು ಬದುಕುತ್ತಿದ್ದ ಆಮ್ರಪಾಲಿಯು ಬುದ್ಧನ ಮಾನವೀಯ ಮೌಲ್ಯಗಳ ತತ್ವಗಳನ್ನು ಕೇಳಿ ಪರಿವರ್ತನೆ ಹೊಂದಿ ಸನ್ಮಾರ್ಗದ ತಡೆ ಹೊರಳುವುದು ಪ್ರಸ್ತುತ ನಾಟಕದಲ್ಲಿ ಪ್ರಮುಖವಾಗಿ ಕಂಡು ಬರುತ್ತದೆ. ಸಹಜವಾಗಿ ನಾಟಕೀಯ ಸತ್ವದಿಂದ ಕೂಡಿದ ಸಂಭಾಷಣೆ ಈ ನಾಟಕಕ್ಕೆ ಮೆರುಗನ್ನು ನೀಡಿದೆ. ಲವಲವಿಕೆಗೆ ಕಾರಣವಾಗುವ ಚತುರ ಸಂಭಾಷಣೆಗೆ ಎರಡನೇ ಹಂತದ ಎರಡನೇ ದೃಶ್ಯದಲ್ಲಿ ಬರುವ ಸಂಶಯವಾದಿಗಳ ಮಾತುಕತೆ ಅತ್ಯುತ್ತಮ್ಮ ಉದಾಹರಣೆ ಉಪದೇಶ ಮತ್ತು ನೀತಿಪರ ಶೈಲಿ ಅನಿವಾರ್ಯವಾದೆಡೆಯಲ್ಲೂ ಸಂಭಾಷಣೆ ಸ್ವಲ್ಪವೂ ಕೃತಕವಾಗುವುದಿಲ್ಲ.

'ಸುಜಾತ'

ಪ್ರಭುಶಂಕರರ 'ಸುಜಾತ' ನಾಟಕವು ಒಬ್ಬ ಸ್ತ್ರೀಯ ಕನಸಿನ ವರ್ಣನೆಯನ್ನು ಹೇಳುತ್ತದೆ. ಕೊನೆಗೆ ಅವಳು ಕಂಡ ಕನಸು ನನಸಾಗುವುದನ್ನು ಈ ನಾಟಕದಲ್ಲಿ ಕಾಣಬಹುದು. ಒಬ್ಬ ಕನಸಿನ ಮಹಾನ್ ಸತ್ಪುರುಷನನ್ನು ನಿಜವಾಗಿ ಕಾಣಲು ಹಂಬಲಿಸುತ್ತಿರುತ್ತಾಳೆ. ಆ ಮಹಾನ್ ವ್ಯಕ್ತಿಯನ್ನು ಕಾಣುವವರೆಗೆ ಅವಳ ಜೀವನದಲ್ಲಿ ಶೂನ್ಯತೆ ಆವರಿಸಿಕೊಂಡಿರುತ್ತದೆ. ಆ ಮಹಾತ್ಮನಿಂದ ಜಗತ್ತಿನಲ್ಲೆಲ್ಲಾ ಜ್ಞಾನ ತುಂಬಬೇಕೆಂದು ಅವಳು ಆಸೆಯ ಗೋಪುರವನ್ನು ಕಟ್ಟಿರುತ್ತಾಳೆ.

ಇಲ್ಲಿ ಅರಳಿಮರವನ್ನು ಒಂದು ಸಾಂಕೇತಿಕವಾಗಿ ಬಳಸಲಾಗಿದೆ. ಆ ಮರವು ಸುಜಾತಳ ಮನಸ್ಸಿನಲ್ಲಿ ಬೇರು ಬಿಟ್ಟಿದೆ. ನೂರಾರು ರೆಂಬೆಗಳಾಗಿ ಮನಸ್ಸನ್ನು ತುಂಬಿ ಬೆಳೆದಿದೆ. ಏಕೆಂದರೆ ಅವಳು ಪೂಜೆ ಸಲ್ಲಿಸುತ್ತಿದ್ದ ಆ ಅರಳಿ ಮರದ ಕೆಳಗಡೆಯೇ ಆ ಮಹಾಯೋಗಿಯನ್ನು ತನ್ನ ಕನಸಿನಲ್ಲಿ ಕಂಡಿದ್ದು. ನಮ್ಮ ಭಾರತೀಯ ಸಂಸ್ಕೃತಿಯಲ್ಲಿ ಅರಳೀಮರವನ್ನು ದೇವರ ಆಸ್ಥಾನವೆಂದು ಭಾವಿಸಿ, ಪ್ರತಿಯೊಬ್ಬ ಹೆಣ್ಣುಮಕ್ಕಳು ಅದನ್ನು ಇಂದಿಗೂ ಪೂಜಿಸುತ್ತಾ ಬಂದಿದ್ದಾರೆ. ಮದುವೆ ಆಗಲೆಂದು, ಮಗು ಹುಟ್ಟಲೆಂದು ಹೀಗೆ ನಾನಾ ಕಾರಣಗಳಿಗಾಗಿ ಹರಕೆಯನ್ನು ಆ ವೃಕ್ಷರಾಜನಿಗೆ ಕಟ್ಟಿಕೊಳ್ಳುತ್ತಾರೆ. ಹಾಗೆಯೇ ಸುಜಾತ ಸಹ ಮನೆಗೆ ಬೆಳದಿಂಗಳನ್ನು ಕರೆಯಲು ಅಂದರೆ ಮಗುವನ್ನು ಪಡೆಯಲು ಮತ್ತು ಇಡೀ ಜಗತ್ತಿಗೆ ಜ್ಞಾನದ ಬೆಳಕು ಮೂಡಿಸಲು ಈ ವ್ರತವನ್ನು ಕೈಗೊಂಡಿದ್ದಳು. ಅದಕ್ಕಾಗಿ ದಿನವೂ ಒಂದು ಆ ವೃಕ್ಷರಾಜನಿಗೆ ಪೂಜೆಯನ್ನು ಸಲ್ಲಿಸುತ್ತಿದ್ದಳು. ಆ ಮರದಿಂದ ನಾನು ಕಂಡಂತಹ ಕನಸು ನಿಜವಾಗುತ್ತದೆ ಎಂದು ಭಾವಿಸಿದ್ದಳು. ಆ ಮರವನ್ನ ಒಂದು ದೈವ ಕಲ್ಪನೆಯಲ್ಲಿ ಭ್ರಮಿಸಿ ಹೀಗೆ ಆ ಮರದೊಂದಿಗೆ ಮಾತನಾಡುತ್ತಿದ್ದಾಳೆ, "ಹೇಳು ಮರವೇ, ನೀನು ವೃಕ್ಷರಾಜ ದಿನದಿನವೂ

ನಿನ್ನಲ್ಲಿಗೆ ನಡೆದು ಬಂದು ಪೂಜೆ ಸಲ್ಲಿಸುತ್ತಿದ್ದೇನೆ. ನನ್ನ ಪಾಲಿಗೆ ಬರಿಯ ಮರವಾಗಬೇಡ. ನಿನ್ನ ಗರ್ಭಗುಡಿ ಏಕೆ ಶೂನ್ಯವಾಗಿದೆ. ನಿನ್ನ ದೇವಮೂರ್ತಿ ಎಲ್ಲಿ? ನಿನ್ನ ನೆರಳಿನಲ್ಲಿ ಅರಳಬೇಕಾದ ಮಹಾಯೋಗಿ ಎಲ್ಲಿ?"[1] ಎಂದು ವಿಧವಿಧವಾಗಿ ಮರವನ್ನು ದೂರುತ್ತಿದ್ದಾಳೆ. ಮರ ಎತ್ತರವನ್ನು ಹೇಳಿದಷ್ಟು ನಿಷ್ಕರುಣಿಯಾಗಿದೆ.

ಸುಜಾತ ತನ್ನ ಕನಸಿಗೆ ಒಂದು ರೂಪವನ್ನ ತಂದು ಕೊಡಲು, ಕನಸನ್ನು ನನಸಾಗಿಸಲು, ಇಂದ್ರಿಯ ಸುಖಗಳ ಬಯಕೆಯನ್ನು ಸಹ ತ್ಯಜಿಸಿದಳು. ಕೊನೆಗೆ ಮನೆ, ಗಂಡ, ತಂದೆ, ತಾಯಿ, ಎಲ್ಲರೂ ಕತ್ತಲು ಎನಿಸುವಷ್ಟರ ಮಟ್ಟಿಗೆ, ತನ್ನ ಕನಸಿನಲ್ಲಿ ಹೊಳೆಯುತ್ತಿರುವ ಬೆಳಕಿನ ಕಡೆಗೆ ನೂಕುತ್ತಿರುವ ಆ ಕಾಣದ ವ್ಯಕ್ತಿಯ ಬಗ್ಗೆ ಪರಿತಪಿಸುತ್ತಿರುತ್ತಾಳೆ. ಅವಳಿಗೆ ತನ್ನ ಕನಸಿನ ಬೆಳಕನ್ನ ಕಾಣುವವರೆಗೆ ಅವಳ ಮನಸ್ಸಿಗೆ ಶಾಂತಿ ಎನ್ನುವಂಥಹದು ಲಭಿಸುವಂತೆ ಕಾಣುತ್ತಿಲ್ಲ.

ಸುಜಾತ ತನ್ನ ಕನಸು ನನಸಾಗಲು ಒಬ್ಬ ಮಹಾತ್ಮನನ್ನ ಕಾಣುವವರೆಗೆ ಅರಳೀಮರದ ಪೂಜೆಯ ವ್ರತವನ್ನು ಎಡೆಬಿಡದೆ ಯಾರಿಗೂ ಕಾಣದಂತೆ ಅಂದರೆ ಮುಂಜಾವಿನಲಿ ಮಾಡುತ್ತಿದ್ದಳು. ಒಂದು ದಿನ ಅವಳ ಆಪ್ತ ಸೇವಕಿ ಅವಳ ರಹಸ್ಯ ತಿಳಿಯಲು ಸುಜಾತಾಳ ಹಿಂದೆ ಬೆನ್ನತ್ತಿ ಬರುತ್ತಿದ್ದಳು. ಆಗ ಅವಳ ಆಪ್ತ ಸೇವಕಿ "ಇಂಥ ಪ್ರಾಯ ಬೇಕಾದಷ್ಟು ಸಂಪತ್ತೂ ಉಂಟು. ಒಲಿದ ಪತಿ ಪ್ರತಿಯ ಹೊಳೆಯನ್ನೇ ಹರಿಸುತ್ತಿದ್ದಾನೆ. ಎಲ್ಲಾ ಹೀಗಿದ್ದೂ ತಪಕೆ ದೀಕ್ಷೆ ಪಡೆದದ್ದು ಯಾಕೆ?"[2] ಎಂದು ಕೇಳುತ್ತಾಳೆ. ಆಗ ಸುಜಾತ ತನ್ನ ತಪಸ್ಸಿನ ವಿಚಾರವನ್ನು ಮುಚ್ಚಿಡುತ್ತಾಳೆ. ಅವಳು ಹೇಳಲೇಬೇಕೆಂಬ ಪಟ್ಟು ಹಿಡಿದು ಕುಳಿತಾಗ ಸುಜಾತ ಮನೆಗೆ, ಮನಸ್ಸಿಗೆ ಇಡೀ ಜಗತ್ತಿಗೆ ಬೆಳದಿಂಗಳನ್ನು ತರುವುದಕ್ಕೆ ಅಂದರೆ ಜ್ಞಾನ ಹರಡಲು ಎಂದು ಹೇಳುತ್ತಾಳೆ. ಹಾಗೆಯೇ ತನ್ನ ಕನಸಿನ ವರ್ಣನೆಯನ್ನು ಯಾರೊಂದಿಗೂ ತನ್ನ ಗಂಡನಿಗೂ ಹೇಳಿಕೊಂಡಿರಲಿಲ್ಲ. ಆದರೆ ಸುಜಾತ ತನ್ನ ಆಪ್ತ ಸೇವಕಿಯ ಹತ್ತಿರ ತನ್ನ ಕನಸಿನ ವಿಚಾರವನ್ನು ಹೇಳಿಕೊಳ್ಳುತ್ತಾಳೆ. ಆ ಕನಸಿನ ವರ್ಣನೆ ಹೀಗೆ ಇದೆ "ಮುದ್ದಾದ ಕಂದಮ್ಮನೊಂದು ಬಂದು ತಟ್ಟಿ ಎಳಿಸಿದಂತೆ. ಎಳಿಸಿ ಮಡಿಲಲ್ಲಿ ಕುಳಿತಂತೆ, ಕುಳಿತು ನನ್ನನ್ನು ತಟ್ಟಿ ಬಾಗಿಲ ಕಡೆಗೆ ಅಂಬೆಗಾಲಿಟ್ಟು ನಡೆದಂತೆ, ಮೈ ತುಂಬ ಹೊಸ ಶಕ್ತಿ ಹರಿದಂತೆ ಮನದ ತುಂಬ ಸಂತೋಷ ತುಂಬಿದಂತೆ, ಅನಿಸಿತು. ನಾನು ಬೆಳಕಿನ ಹಿಂದೆ ನಡೆದೆ, ಮತ್ತಳಂತೆ ಬಂದೆ, ಅದು ಚಲಿಸುತ್ತಾ ಬಂದೆ, ಕಡೆಗೊಮ್ಮೆ ಆ ಬೆಳಕು ಈ ಮರದ ತನಕ ಬಂತು. ಆ ಬೆಳಕು ಈ ಮರದಲ್ಲಿ ಲೀನವಾದದ್ದನ್ನು ಕಂಡೆ. ಆಗಲೇ ಮನೆಗೆ ಹೋಗಿ ಪೂಜೆಯ ವಸ್ತುಗಳನ್ನು ತಂದು ಈ ಮರಕ್ಕೆ ಪೂಜೆ ಸಲ್ಲಿಸಿದೆ. ಅಂದಿನಿಂದ ಈ ನಲವತ್ತು ದಿನಗಳು ಅನುದಿನವೂ ಮುಂಜಾನೆ ಈ ಮರಕ್ಕೆ

---

[1] ಬುದ್ಧ ನಾಟಕ ಚಕ್ರ – ಪ್ರಭುಶಂಕರ 2001, ಪುಟ ಸಂಖ್ಯೆ 116, ಡಿ.ವಿ.ಕೆ. ಮೂರ್ತಿ ಪ್ರಕಾಶನ.

[2] ಬುದ್ಧ ನಾಟಕ ಚಕ್ರ – ಪ್ರಭುಶಂಕರ 2001, ಪುಟ ಸಂಖ್ಯೆ 117, ಡಿ.ವಿ.ಕೆ. ಮೂರ್ತಿ ಪ್ರಕಾಶನ.

ಪೂಜೆ ಮಾಡುತ್ತಿದ್ದೇನೆ. ಧ್ಯಾನ ಮಾಡುತ್ತಿದ್ದೇನೆ"[1] ಎಂದು ತನ್ನ ಕನಸಿನ ವರ್ಣನೆಯನ್ನು ಹೇಳಿದಳು. ಅವಳು ಪ್ರತಿದಿನ ಮುಂಜಾನೆ ಪೂಜೆ ಮಾಡಲು ಕಾರಣವೆಂದರೆ ಅವಳ ಕನಸು ಮುಂಜಾನೆ ಕಂಡ ಕನಸಾಗಿತ್ತು. ಆ ಕನಸಿನಲ್ಲಿ ಮುದ್ದಾದ ಮಗುವೊಂದು ಕಾಣಿಸಿಕೊಂಡಿತ್ತು. ಏಕೆಂದರೆ ಅವಳ ಮನಸ್ಸು ಮಗುವಿನ ಜನನಕ್ಕಾಗಿ ಹಾತೊರೆಯುತ್ತಿತ್ತು. ಮತ್ತು ಒಬ್ಬ ಮಹಾತ್ಮನ ಮೂಲಕ ಜಗತ್ತಿಗೆ ಜ್ಞಾನದ ಬೆಳಕನ್ನು ಹರಿಸುವುದಾಗಿತ್ತು. ಬೇರೆಯವರಿಗೆ ಮಗುವನ್ನು ಪಡೆಯುವುದಕ್ಕಾಗಿ ಈ ವ್ರತಾಚರಣೆ ಎಂದು ತಿಳಿದರು. ಆದರೆ ಅವಳ ಮನದ ಇಂಗಿತ ಯಾರಿಗೂ ಅರ್ಥವಾಗುವಂತಿರಲಿಲ್ಲ.

ಬರಬರುತ್ತಾ ಸುಜಾತಾಳ ಕನಸಿನ ಅರ್ಥ ತಂದು ತೊಡಲು ಗೌತಮನೂ ಸಹ ತನ್ನ ಆರು ಜನ ಸಾಧಕರೊಂದಿಗೆ ಅರಳಿ ಮರದ ಬುಡಕ್ಕೆ ಬಂದು ಕುಳಿತುಕೊಂಡು ತಮ್ಮ ತಮ್ಮ ಸಾಧನೆಯ ಬಗ್ಗೆ ಮಾತನಾಡಿಕೊಳ್ಳುತ್ತಿದ್ದಾರೆ. ಆದರೆ ಉತ್ತಮ ಸಾಧನೆಗೆ ಮನಸ್ಸಿನ ಏಕಾಗ್ರತೆ ಮುಖ್ಯವಾದ ಅಂಶ. ಎಂಬ ಮನಸ್ಸಿನ ಏಕಾಗ್ರತೆಯನ್ನು ಯಾರೂ ಪೂರ್ಣವಾಗಿ ಸಾಧಿಸುತ್ತಾರೋ ಅವರು ಉತ್ತಮ ಸಾಧಕರಾಗುತ್ತಾರೆ ಎಂಬ ಚರ್ಚೆ ಬುದ್ದ ಮತ್ತು ಅವರ ಅನುಚರರಲ್ಲಿ ಕಂಡು ಬರುತ್ತದೆ. ಸಾಧನೆ ಎಂದರೆ ಮನಸ್ಸಿನ ಏಕಾಗ್ರತೆಯನ್ನು ಕುರಿತದ್ದು. ಎಲ್ಲಾ ಸಾಧಕರೂ ಸಹ ತಮ್ಮ ಧ್ಯಾನದ ಬಗ್ಗೆ ಮಾತಾಡಿಕೊಳ್ಳುವಾಗ ಎಲ್ಲರೂ ತಮ್ಮ ತಮ್ಮ ಧ್ಯಾನದಲ್ಲಿ ಅನ್ನ, ಪಾಯಸ, ಪಾನೀಯಗಳನ್ನು ಕಾಣುತ್ತಿರುತ್ತಾರೆ. ಅದಕ್ಕೆ ಗೌತಮನು "ಮಿತ್ರರೇ ಇದರಲ್ಲಿ ಆಶ್ಚರ್ಯವೇನೂ ಇಲ್ಲ ನಾಚಿಕೆ ಪಡಬೇಕಾದದ್ದು ಏನೂ ಇಲ್ಲ. ದೇಹದ ಉಳಿವಿಗೆ ಆಹಾರ ಅಗತ್ಯ ಅದನ್ನು ಬಿಟ್ಟು ನಾವು ಸಾಧನೆ ನಡೆಸುತ್ತಿದ್ದೇವೆ ಪರಿಣಾಮವಾಗಿ ನಮ್ಮ ಪ್ರಜ್ಞೆ ಮಂಕಾಗುತ್ತಿದೆ"[2] ಎಂದು ಹೇಳಿದನು. ಅಂದರೆ ಸಾಧನೆ ಮಾಡುತ್ತಿರುವ ವ್ಯಕ್ತಿ ದೇಹದಂಡನೆ ಮಾಡಿ ಸಾಧನೆ ಮಾಡಬಾರದು. ದೇಹಕ್ಕೆ ಆಹಾರವೂ ಸಹ ಮುಖ್ಯ. ದೇಹವನ್ನು ಅತಿಯಾದ ಹಿಂಸೆಗೆ ಗುರಿಪಡಿಸಬಾರದು. ಅದಕ್ಕೆ ಅತಿಯಾದ ಆರೈಕೆಯೂ ಕೂಡದು ಎಂದನು. ಇಂತಹ ಸಾಧನೆಯನ್ನು ಮಾಡಲು ಅವನ ಸಾಧಕರು ಸಿದ್ದರಿರಲಿಲ್ಲ. ಅವರು ಸತ್ಯದ ದಾರಿ ಹುಡುಕುವಷ್ಟು ಸಾವಧಾನ, ಇಂದ್ರಿಯ ನಿಗ್ರಹಗಳ ಶಕ್ತಿ ಇರಲಿಲ್ಲ. ಅದರಿಂದ ಗೌತಮನಿಂದ ದೂರ ಹೋಗುವ ಇಚ್ಛೆ ವ್ಯಕ್ತಪಡಿಸಿದರು. ಅದಕ್ಕೆ ಗೌತಮನು ಒಪ್ಪಿದನು. ಆದರೆ ಅವರಿಗೆ ಗೌತಮನ ಐದು ಅಷ್ಟಾಂಗ ಮಾರ್ಗವನ್ನು ತಿಳಿಯಬೇಕೆಂಬ ಆಸೆ ಉಂಟಾಗುತ್ತದೆ. ಅಂದರೆ ಗೌತಮನ ಸಾಧನೆಗಳು ಐದು ಅವನ್ನ ಅರಿಯಬೇಕೆಂಬ ಉದ್ದೇಶ ಅವರದಾಗಿರುತ್ತದೆ. ಆಗ ಗೌತಮನು ತನ್ನ ಕನಸಿನ ವರ್ಣನೆಯನ್ನು ಹೀಗೆ ಹೇಳುತ್ತಾನೆ"

---

[1] ಬುದ್ಧ ನಾಟಕ ಚಕ್ರ – ಪ್ರಭುಶಂಕರ 2001. ಪುಟ ಸಂಖ್ಯೆ 118. ಡಿ.ವಿ.ಕೆ. ಮೂರ್ತಿ ಪ್ರಕಾಶನ.

[2] ಬುದ್ಧ ನಾಟಕ ಚಕ್ರ – ಪ್ರಭುಶಂಕರ 2001. ಪುಟ ಸಂಖ್ಯೆ 121. ಡಿ.ವಿ.ಕೆ. ಮೂರ್ತಿ ಪ್ರಕಾಶನ.

1. ಇಡೀ ಜಗತ್ತು ಒಂದು ದೊಡ್ಡ ಮಂಚದಂತೆ. ಅಂದರೆ ಅದು ಗೌತಮನಿಗೆ ಬೋಧಿ ಪ್ರಾಪ್ತವಾಗುವಂತಹದು.
2. ಕೈಯಲ್ಲಿ ಒಂದು ಮರ ಹುಟ್ಟಿ ಅದು ಆಕಾಶವನ್ನು ಮುಟ್ಟುವಂತಹದು ಅಂದರೆ ಅದು ಅಷ್ಟಾಂಗ ಮಾರ್ಗದ ವಿವರಣೆ.
3. ಕಪ್ಪು ತಲೆಗಳುಳ್ಳ ಬಿಳಿಯ ಕ್ರಿಮಿಗಳು ನನ್ನ ಮಂಡಿಯವರೆಗೂ ಹರಿದು ಬಂದು ಅದನ್ನು ಮುಚ್ಚಿಬಿಡುವಂತಹದು. ಅಂದರೆ ಗೃಹಸ್ಥರು ಬಿಳಿಯ ಬಟ್ಟೆ ಧರಿಸಿ ಧರ್ಮ ಶ್ರವಣಕ್ಕಾಗಿ ಬರುವಂತಹದು.
4. ನಾಲ್ಕು ದಿಕ್ಕಿನಿಂದ ಬೇರೆ ಬೇರೆ ಬಣ್ಣದ ಹಕ್ಕಿಗಳು ಹಾರಿ ಬಂದು ನಾಲ್ಕು ಹಕ್ಕಿಗಳು ನನ್ನ ಕಾಲ ಬಳಿ ಬಿದ್ದವು. ಅಂದರೆ ನಾಲ್ಕು ವರ್ಣದವರೂ ಬೆಳಕಿನ ಒಂದೇ ವರ್ಣದವರಾಗಿರುತ್ತಾರೆ.
5. ಹೊಲಸಿನ ಬೆಟ್ಟದ ಮೇಲೆ ನಡೆಯುತ್ತಿದ್ದೇನೆ. ಆದರೆ ಅದರ ಅಶುದ್ಧಿ ನನ್ನನ್ನು ಮುಟ್ಟುತ್ತಿಲ್ಲ. ಅಂದರೆ ಜಗತ್ತಿನ ಪ್ರತಿಯೊಂದನ್ನೂ ಸ್ವೀಕರಿಸುತ್ತಿದ್ದೇನೆ. ಆದರೆ ಯಾವುದೂ ನನ್ನನ್ನು ಅಶುದ್ಧಿಗೊಳಿಸುವುದಿಲ್ಲ.

ಹೀಗೆ ಗೌತಮನು ತನ್ನ ಐದು ಕನಸಿನ ಕಲ್ಪನೆಗಳನ್ನು ಸಾಧಕರಿಗೆ ಹೇಳುತ್ತಾನೆ. ಆ ಕನಸುಗಳು ಗೌತಮನನ್ನು ಒಂದು ಜ್ಞಾನಿಯನ್ನಾಗಿ, ಮತ್ತು ಜಗತ್ತಿನ ಬೆಳಕಾಗುವಂತಹವನು ಎಂದು ಹೇಳುತ್ತದೆ. ಗೌತಮ ನಾನು ಜ್ಞಾನಿಯಾಗಿ ಜಗತ್ತಿಗೆ ಬೆಳಕು ತರುವ ವಿಷಯವನ್ನು ತನ್ನ ಸಾಧಕರಿಗೆ ಜ್ಞಾನಿಯಾಗುವ ಮೊದಲೇ ಸೂಚಿಸುತ್ತಾನೆ. ಅಂದಿನಿಂದ ಗೌತಮನು ಅರಳಿ ಮರದ ಕೆಳಗೆ ಸಾಧನೆಗೆ ತೊಡಗುತ್ತಾನೆ. ಅಲ್ಲಿಗೆ ಯಾರಾದರೂ ಆಹಾರ ತಂದರೆ ಸ್ವೀಕರಿಸುತ್ತೇನೆ. ಇಲ್ಲವಾದರೆ ಇಲ್ಲಿಯೇ ಸಾಯುತ್ತೇನೆ ಎಂದು ಇಂಗಿತವನ್ನು ವ್ಯಕ್ತಪಡಿಸುತ್ತಾನೆ.

ಸುಜಾತ ಕೈಗೊಂಡ ವ್ರತದಿಂದ ಒಂದು ಮಗುವನ್ನು ಪಡೆಯುತ್ತಾಳೆ. ಆದರೆ ಅವಳ ಮನಸ್ಸಿಗೆ ಸಂತೋಷವೇ ಕಾಣುತ್ತಿಲ್ಲ. ಏಕೆಂದರೆ ತನ್ನ ಕನಸಿನ ಮಹಾತ್ಮ ಎಂದು ಬರುವನೋ ಎಂದು ಹಲುಬುತ್ತಿದ್ದಾಳೆ. ಅವಳ ಈ ಹುಚ್ಚು ವರ್ತನೆಗೆ ಅವರ ಮನೆಯ ಸದಸ್ಯರೆಲ್ಲಾ ಚಿಂತಾಕ್ರಾಂತರಾಗಿದ್ದಾರೆ. ಆದರೆ ಅವಳಿಗೆ ಅವರೆಲ್ಲಾ ನೆಪಮಾತ್ರರಾಗಿರುತ್ತಾರೆ. ಅವಳ ಮನಸ್ಸು ಆ ಮಹಾತ್ಮನ ಆಗಮನದಲ್ಲಿರುತ್ತದೆ. ಅವಳ ಮಗುವಿನ ಹುಟ್ಟಿದ ಹಬ್ಬದ ದಿನ ವೃಕ್ಷರಾಜನಿಗೆ ಪಾಯಸ ಅರ್ಪಿಸುತ್ತೇನೆಂಬ ಹರಕೆಯನ್ನು ಸುಜಾತ ಹೊತ್ತಿದ್ದಳು. ಆ ದಿನವೇ ನಾನು ಆ ಮಹಾತ್ಮನ ದರ್ಶನವನ್ನು ಪಡೆಯುತ್ತೇನೆ ಎಂಬ ನಂಬಿಕೆ ಅವಳಿಗಿರಲಿಲ್ಲ. ಅವಳ ಮನದ ಆಸೆಯನ್ನು

ಈಡೇರಿಸಲು ಯಾರಿಂದಲೂ ಸಾಧ್ಯವಾಗಲಿಲ್ಲ. ಕೊನೆಗೆ ಗಂಡನಿಗೂ ಸಹ ಸಾಧ್ಯವಾಗಲಿಲ್ಲ. ಸುಜಾತ ತನ್ನ ಆಪ್ತ ಸೇವಕಿಯೊಂದಿಗೆ ವೃಕ್ಷರಾಜನಿಗೆ ಪೂಜೆ ಸಲ್ಲಿಸಲು ಹೋಗುತ್ತಾಳೆ. ಬುದ್ಧನ ಜೀವ ಸುಜಾತಳು ನೀಡಿದ ಆಹಾರದಿಂದ ಉಳಿಯಿತು ಎಂಬುದು ಒಂದು ಸೋಜಿಗ.

ಅರಳಿ ಮರದ ಕೆಳಗೆ ಸಿದ್ಧಾರ್ಥನನ್ನು ಕಂಡಾಗ ಅವಳು ಕ್ಷಣ ಮಾತ್ರ ಚಕಿತಳಾದಳು. ಏಕೆಂದರೆ ಅವಳ ಕನಸಿನ ಮಹಾತ್ಮ ಅವನಾಗಿದ್ದ. ಸುಜಾತಳ ಒಂದು ಬಹುದಿನದ ಕನಸು ಅವಳ ಮಗನ ಹುಟ್ಟಿದ ಹಬ್ಬದ ದಿನ ಈಡೇರಿತು. ಅವಳ ವ್ರತ ಅರಳೀ ಮರದ ಪೂಜೆಯಿಂದ ಈಡೇರಿತು ಎಂಬುದನ್ನು ಒಂದು ಧಾರ್ಮಿಕ ಅಂಶವಾಗಿ ಕಾಣಬಹುದು. ಸುಜಾತ ವೃಕ್ಷರಾಜನಿಗೆ ತಂದ ಪಾಯಸವನ್ನ ಸಿದ್ಧಾರ್ಥನಿಗೆ ನೀಡಿದಳು. ಅವಳ ಪಾಲಿಗೆ ಅವನೇ ನಿಜವಾದ ವೃಕ್ಷರಾಜ ಆಗಿದ್ದನು. ನಂತರ ಸುಜಾತ ತನ್ನ ಕನಸಿನ ವರ್ಣನೆಯನ್ನು ಸಿದ್ಧಾರ್ಥನಿಗೆ ತಿಳಿಸಿದಳು. "ಸ್ವಾಮಿ ತಾವು ಇಲ್ಲಿಗೆ ಬರುತ್ತೀರಿ ಈ ಮರದ ಬುಡದಲ್ಲಿ ಬೆಳಕನ್ನ ಕಾಣುತ್ತೀರಿ ಕಂಡ ಬೆಳಕನ್ನು ಜಗತ್ತಿನಾದ್ಯಂತ ಬೀರುತ್ತೀರಿ ಎಂದು ಕನಸುಕಂಡೆ"[1] ಎಂದು ಹೇಳಿದಳು. ಆ ಕಲ್ಪನೆ ಬುದ್ಧನಿಗೆ ಇರಲಿಲ್ಲ. ಮರುದಿನ ಗೌತಮನ ಮುಖದಲ್ಲಿ ಮಂದಹಾಸ, ಶಾಂತಿ ತುಂಬಿ ತುಳುಕುತ್ತಿದೆ. ಆಗ ಗೌತಮನಿಗೆ ಬೆಳಕಿನ ಅರ್ಥ ಸತ್ಯವಾಗಿ ಕಂಡಿತು. "ಇದೇ ದುಃಖ", "ಇದೇ ದುಃಖದ ಮೂಲ", "ಇದೇ ದುಃಖದ ನಿರೋಧ", "ಇದೇ ದುಃಖದ ನಿರೋಧದ ಮಾರ್ಗ" ಎಂಬುದು ಅರಿವಿಗೆ ಬಂತು. ಸಿದ್ಧಾರ್ಥನಿಗೆ ಅಂತಿಮವಾದ ತಪಸ್ಸಿಗೆ ಶಕ್ತಿಯನ್ನು ಕೊಟ್ಟಿದ್ದು ಸುಜಾತ ನೀಡಿದ ಪಾಯಸವಾಗಿತ್ತು.

'ಗಾಳಿ ಎಂಬ ಕುದುರೆ ಏರಿ'

ಪ್ರಭುಶಂಕರರ ಈ ನಾಟಕವು ವೈಚಾರಿಕ ತಳಹದಿಯ ಮೇಲೆ ರೂಪುಗೊಂಡಿದೆ. ಸಿದ್ಧಾರ್ಥ ಬುದ್ಧನಾಗುವ ದಿಸೆಯಲ್ಲಿ ಹುಟ್ಟಿಕೊಳ್ಳುವ ಹಲವಾರು ಅನುಮಾನ, ಪ್ರಶ್ನೆಗಳಿಗೆ ವಿಚಾರ ಪರವಾಧ, ತಾರ್ಕಿಕವಾದ ಉತ್ತರವನ್ನು ಈ ನಾಟಕದಲ್ಲಿ ಕಾಣಬಹುದು. ಪ್ರಭುಶಂಕರರು ಬುದ್ಧನನ್ನು ಕುರಿತು ನಾಲ್ಕು ನಾಟಕಗಳನ್ನು ರಚಿಸಿದ್ದಾರೆ. ಮೊದಲ ಮೂರು ನಾಟಕಗಳಲ್ಲಿ ಕಂಡು ಬರುವ ದೃಷ್ಟಿಕೋನವೇ ಬೇರೆಯಾಗಿದ್ದರೆ ಈ ನಾಟಕದಲ್ಲಿ ಕಂಡು ಬರುವ ದೃಷ್ಟಿಕೋನವೇ ಬೇರೆಯಾಗಿದೆ. ಬುದ್ಧ ನಾಟಕ ಚಕ್ರ (ಬುದ್ಧ ಎದ್ದು ಬರುವ ನಾಲ್ಕು ನಾಟಕಗಳು) ಎಂಬ ಕೃತಿಯಲ್ಲಿ ಬುದ್ಧನ ಕುರಿತ ನಾಲ್ಕು ನಾಟಕಗಳನ್ನು ಅನುಕ್ರಮವಾಗಿ ನೀಡಿದ್ದಾರೆ. ಈ ಪುಸ್ತಕದ ಅಂಕೆಯಲ್ಲಿ ಪ್ರಭುಶಂಕರರು "ಮೊದಲ ಮೂರು ನಾಟಕಗಳಲ್ಲಿ ಗೌತಮ ಬುದ್ಧನ ವಿಷಯದಲ್ಲಿ ನಾನು ತೋರಿಸುವ ಭಕ್ತಿ, ಗೌರವಗಳು ಅತಿ ಎಂದು ಅನೇಕರಿಗೆ ಅನ್ನಿಸಬಹುದು. ಅವನ ಜೀವ ದಯೆ ದೊಡ್ಡದು ಯಾವ ಪ್ರಶಂಸೆಯೂ ಅದಕ್ಕೆ

[1] ಬುದ್ಧನಾಟಕ ಚಕ್ರ – ಪ್ರಭುಶಂಕರ 2001, ಪುಟ ಸಂಖ್ಯೆ 123, ಡಿ.ವಿ.ಕೆ. ಮೂರ್ತಿ ಪ್ರಕಾಶನ.

ಅತಿ ಅಲ್ಲ. ಅವನ ಗೃಹತ್ಯಾಗದ ವಿಷಯ ಚರ್ಚಾಸ್ಪದವಾದದ್ದು. ಅದರ ವಿಷಯದಲ್ಲಿ ನನ್ನ ಭಾವನೆ ಏನು ಎಂಬುದು ನಾಲ್ಕನೆಯ ನಾಟಕದಿಂದ ತಿಳಿದು ಬರುತ್ತದೆ"[1] ಎಂದಿದ್ದಾರೆ.

ಈ ನಾಟಕದಲ್ಲಿ ಮುಖ್ಯವಾಗಿ ಎರಡು ಪಾತ್ರಗಳನ್ನು ಕಾಣಬಹುದು. ಒಂದು ಸಿದ್ಧಾರ್ಥ – ಈತ ಸತ್ಯವನ್ನು ಹುಡುಕಿಕೊಂಡು ಮನೆ ಬಿಟ್ಟು ಹೊರಟಿರುವವನು. ಎರಡು ಅಗ್ನಿಮಿತ್ರ – ಈತ ಸತ್ಯವನ್ನು ಹುಡುಕಿಕೊಂಡು ಮನೆ ಬಿಟ್ಟು ಹೋಗಿದ್ದು ಹಿಂದಕ್ಕೆ ಬಂದಿರುವವನು. ಇವರನ್ನ ಆಶ್ರಯಿಸಿ ಉಳಿದ ಪಾತ್ರಗಳು ಕಂಡು ಬರುತ್ತವೆ. ಸಿದ್ಧಾರ್ಥ ನಾಟಕದ ಆರಂಭದಲ್ಲೇ ಮನೆ ಬಿಟ್ಟು ಕಪಿಲ ವಸ್ತುವಿನ ಹೊರ ಉದ್ಯಾನಕ್ಕೆ ಬಂದಿರುತ್ತಾನೆ. ಅಲ್ಲಿಯೇ ಈಗಾಗಲೇ ಮನೆ ಬಿಟ್ಟು ಹೋಗಿದ್ದು, ಮತ್ತೆ ಮನೆಯ ಕಡೆ ಮುಖ ಮಾಡಿ ಬಂದಿರುವ ಅಗ್ನಿಮಿತ್ರನೂ ಇರುತ್ತಾನೆ. ಇವರಿಬ್ಬರ ನಡುವಿನ ಸಂಭಾಷಣೆಯ ಮುಖಾಂತರ ನಾಟಕ ಆರಂಭವಾಗುತ್ತದೆ.

ಸಿದ್ಧಾರ್ಥ ಗೃಹತ್ಯಾಗವನ್ನು ಮಾಡಿ ಬುದ್ಧನಾಗುವ ವಿಚಾರದಲ್ಲಿ ಹಲವಾರು ಪ್ರಶ್ನೆಗಳು ತೆರೆದುಕೊಳ್ಳುತ್ತವೆ. ಒಬ್ಬ ರಾಜನ ಮಗನಾಗಿದ್ದು, ಬೇಕಾದ ಐಶ್ವರ್ಯ, ಸಂಪತ್ತುಗಳೆಲ್ಲವೂ ಕೂಡ ಈತನಿಗೆ ಲಭ್ಯವಿದ್ದಿತು. ಈತ ಅಪಾರ ಸುಖ ಜೀವನವನ್ನು ನಡೆಸುತ್ತಿದ್ದವನು. ಜೊತೆಗೆ ಯಶೋಧರೆ ಎಂಬ ಸುಂದರಿ ಈತನಿಗೆ ಪತ್ನಿಯಾಗಿ ಆತನನ್ನು ಸುಖ ಸಾಗರದಲ್ಲಿ ತೇಲಿಸುತ್ತಿದ್ದನು. ಇವರಿಬ್ಬರಿಗೂ ಒಂದು ಗಂಡು ಮಗುವು ಜನಿಸಿತ್ತು. ಅಂತಹ ಸಂದರ್ಭದಲ್ಲಿ ಈತ ಈ ಎಲ್ಲಾ ಐಹಿಕ ಸುಖ ಭೋಗಗಳನ್ನು ತ್ಯಜಿಸಿ ಗೃಹತ್ಯಾಗ ಮಾಡಿರುತ್ತಾನೆ. ಆ ಸಂದರ್ಭದಲ್ಲಿ ಹುಟ್ಟಿಕೊಳ್ಳುವ ಪ್ರಶ್ನೆಗಳಿಗೆ ಉತ್ತರವೇನೋ ಎಂಬಂತೆ ಈ ನಾಟಕ ಕಂಡು ಬರುತ್ತದೆ.

ಕಪಿಲ ವಸ್ತುವಿನ ಉದ್ಯಾನದಲ್ಲಿ ಸಿದ್ಧಾರ್ಥ ಮತ್ತು ಅಗ್ನಿಮಿತ್ರರು ಪರಸ್ಪರ ಪರಿಚಯ ಮಾಡಿಕೊಳ್ಳುವಾಗ ಸಿದ್ಧಾರ್ಥ ತನ್ನ ಪರಿಚಯವನ್ನು ಈ ರೀತಿ ಮಾಡಿಕೊಳ್ಳುತ್ತಾನೆ.

"ಉಂಡ ನನಸುಗಳೆಲ್ಲಾ ಕಂಡ ಕನಸುಗಳಾಗಿ

ದಿಕ್ಕುದಿಕ್ಕಿಗೆ ಬೆದರಿ, ಚೆದುರಿ ಹೋಗಿ,

ಬಂದ ಭಾಗ್ಯಗಳಳಿದು ಮಂದ ಭಾಗ್ಯನೇ ಆಗಿ

ಇಂದು ಮುಂದಿಲ್ಲದೆಯೆ ನಿಂತ ದೀನ ನಾನು

ಈ ರಾಜ್ಯದ ರಾಜ ಶುದ್ಧೋದನನ ಮಗ ಸಿದ್ಧಾರ್ಥ ಎಂದು ಹೆಸರು. ಗೌತಮ ಎಂದು ಕರೆಯುತ್ತಾರೆ"[1] ಎನ್ನುತ್ತಾನೆ.

---

[1] ಬುದ್ಧ ನಾಟಕ ಚಕ್ರ – ಪ್ರಭುಶಂಕರ, ಪು. ಸಂ. 12. 2001. ಡಿ.ವಿ.ಕೆ. ಮೂರ್ತಿ ಪ್ರಕಾಶನ.

ಅಗ್ನಿಮಿತ್ರ ಈ ರೀತಿ ಪರಿಚಯ ಮಾಡಿಕೊಳ್ಳುತ್ತಾನೆ.

"ಕಂಡ ಕನಸುಗಳೆಲ್ಲ ಉಂಡ ನನಸುಗಳಾಗಿ,
ದಿಕ್ಕುದಿಕ್ಕುಗಳಿಂದ ಹರಿದು ಬಂದು
ಎದೆಯಾಳದಲ್ಲಿ ನೆಲಸಿ, ಎನಿತೋ ಬಗೆಯಲಿ ಕಲಸಿ
ಹಿಂದು ಮುಂದರಿಯದೆಯೆ ನಿಂದೆ ನಿಂದು

ನಾನು ಇದೇ ಊರಿನವನು. ದೇವಶರ್ಮ ಎನ್ನುವುದು ನನ್ನ ತಂದೆಯ ಹೆಸರು ನನ್ನನ್ನು ಅಗ್ನಿಮಿತ್ರ ಎಂದು ಕರೆಯುತ್ತಾರೆ" ಎನ್ನುತ್ತಾನೆ.[2]

ಇಬ್ಬರೂ ಪರಸ್ಪರ ಪರಿಚಯ ವೈರುದ್ಯಗಳು ಸ್ಪಷ್ಟವಾಗಿ ಗೋಚರವಾಗುತ್ತವೆ. ಅನಂತರ ಅಗ್ನಿಮಿತ್ರ ಸಿದ್ಧಾರ್ಥನನ್ನು ಕೇಳುವ ಪ್ರಶ್ನೆಗಳು ಸಿದ್ಧಾರ್ಥ ಗೃಹತ್ಯಾಗ ಮಾಡಿದುದರ ಬಗ್ಗೆ ಜನರಲ್ಲಿ ಇರಬಹುದಾದ ಪ್ರಶ್ನೆಗಳೇ ಆಗಿರುತ್ತವೆ. ಸಿದ್ಧಾರ್ಥ ಗೃಹತ್ಯಾಗವನ್ನು ಮಾಡಲು ಕಾರಣ ಜಿಗುಪ್ಸೆ. ಸಿದ್ಧಾರ್ಥ ಹುಟ್ಟಿದ ಕೂಡಲೇ ಆತನ ಜಾತಕವನ್ನು ನೋಡಿದ ಜ್ಯೋತಿಷಿಗಳು ಈತ ಮುಂದೆ ಅಪ್ರತಿಮ ರಾಜನಾಗುತ್ತಾನೆ, ಇಲ್ಲವೇ ವೃದ್ದ, ಕುಷ್ಠ ರೋಗಿ, ಶವ ಮತ್ತು ಸನ್ಯಾಸಿಯನ್ನು ಏಕಕಾಲದಲ್ಲಿ ನೋಡಿದಾಗ ಸನ್ಯಾಸಿಯಾಗುತ್ತಾನೆ ಎಂದು ಭವಿಷ್ಯ ನುಡಿದಿರುತ್ತಾನೆ. ಇದನ್ನು ನಂಬಿದ ಸಿದ್ಧಾರ್ಥನ ತಂದೆ ಶುದ್ಧೋದನ ಮಗ ಸನ್ಯಾಸಿಯಾಗದಿರಲೆಂದು ಆತನನ್ನು ಅರಮನೆಯಲ್ಲೇ ಇರಿಸಿ ಹೊರಜಗತ್ತಿನಿಂದ ದೂರವಾಗಿಸುತ್ತಾನೆ. ಅರಮನೆಯ ಸುಖ ವೈಭೋಗಗಳಲ್ಲಿ ಬೆಳೆದ ಸಿದ್ಧಾರ್ಥ ಹೊರಗಿನ ಕಷ್ಟ ಸುಖಗಳ ಅರಿವು ಆತನಿಗಿರುವುದಿಲ್ಲ. ವಯಸ್ಸಿಗೆ ಬಂದ ಕೂಡಲೇ ಹೊರಜಗತ್ತಿನ ಅರಿವಿಲ್ಲದೆಯೇ ಕಂಡು ಅಚ್ಚರಿಗೊಳ್ಳುತ್ತಾನೆ. ಇದರಿಂದ ಆತನಲ್ಲಿ ಜುಗುಪ್ಸೆ ಉಂಟಾಗಿರುತ್ತದೆ.

ಅಗ್ನಿಮಿತ್ರ ಮನೆಯನ್ನು ತ್ಯಜಿಸಿ ಬರಲು ಕಾರಣ ಕೇಳಿದಾಗ ತಾನು ಚೆನ್ನನೊಡನೆ ನಗರ ವೀಕ್ಷಣೆಗೆ ಹೋಗಿದ್ದಾಗ ಬಡ ವೃದ್ದ ಭಿಕ್ಷೆ ಬೇಡುವುದನ್ನು ಕಂಡು ಅತನನ್ನು ವಿಚಾರಿಸಲಾಗಿ ಹಸಿವಿನ ಬಗ್ಗೆ ತಿಳಿಯುತ್ತದೆ. ಹಾಗಾಗಿ ಹಸಿವಿನ ಸತ್ವವನ್ನು ತಿಳಿಯಲು ಗೃಹತ್ಯಾಗ ಮಾಡಿರುವುದಾಗಿ ತಿಳಿಸುತ್ತಾನೆ. ಅದಕ್ಕೆ ಅಗ್ನಿಮಿತ್ರ "ಒಂದೊಂದು ವಿಷಯಕ್ಕೂ ಒಂದೊಂದು ಶಾಸ್ತ್ರ ಇರುವುದು ನಿಮಗೆ ತಿಳಿಯದ ವಿಷಯವೇ ಸಿದ್ಧಾರ್ಥ. ಆರೋಗ್ಯದ ವಿಷಯವನ್ನು ತಿಳಿದು ಕೊಳ್ಳುವುದಕ್ಕೆ ಓದಬೇಕಾದದ್ದು ಆಯುರ್ವೇದ. ಅದು ಒಂದು ಶಾಸ್ತ್ರ ತಾನೆ? ಹಸಿವಾಗದೇ ಇರುವುದಕ್ಕೆ ಕಾರಣ

[1] ಬುದ್ಧ ನಾಟಕ ಚಕ್ರ– ಪ್ರಭುಶಂಕರ ಪು. ಸಂ. 140, 2001, ಡಿ.ವಿ.ಕೆ. ಮೂರ್ತಿ ಪ್ರಕಾಶನ.

[2] ಅದೇ.

ಏನು ಎಂಬುದನ್ನು ಅದರಲ್ಲಿ ಹುಡುಕಬೇಕು"[1] ಎಂದು ತಿಳಿಸಿ ಅದಕ್ಕಾಗಿ ಗೃಹತ್ಯಾಗ ಮಾಡಿ ಬರುವುದು ಸರಿಯಲ್ಲ ಎಂದು ಬುದ್ಧಿಮಾತನ್ನು ಹೇಳುತ್ತಾನೆ. ಇದು ಎಲ್ಲರಲ್ಲೂ ಮಾಡಬಹುದಾದ ಸಂದೇಹವಾಗಿದ್ದು ಅದನ್ನು ಅಗ್ನಿಮಿತ್ರನ ಮುಖಾಂತರ ನಾಟಕಕಾರರು ಪ್ರಶ್ನಿಸುವ ಪ್ರಯತ್ನ ಮಾಡಿದ್ದಾರೆ. ಬುದ್ಧ ಗೃಹತ್ಯಾಗ ಮಾಡಲು ಅದೊಂದೆ ಕಾರಣವಾಗಿರುವುದಿಲ್ಲ. ಮುಂದುವರೆದು ಆತ ಕುಷ್ಠರೋಗಿ ಮತ್ತು ಅದರ ನಿರ್ಮೂಲನೆಯ ಬಗ್ಗೆ ತಿಳಿಯಲು ಮನೆಯಿಂದ ಹೊರಬಂದಿರುತ್ತಾನೆ. ಇದಕ್ಕೆ ಅಗ್ನಿಮಿತ್ರನ ಉತ್ತರ ಈ ರೀತಿ ಇದೆ. "ನಾನು ಸುತ್ತದ ದೇಶ ಇಲ್ಲ. ಓದದ ಕೋಶ ಇಲ್ಲ. ಇಪ್ಪತ್ತು ವರ್ಷ ಎಷ್ಟು ಸುತ್ತಿದೆ, ಎಷ್ಟು ಓದಿದೆ, ಏನೆಲ್ಲಾ ನೋಡಿದೆ ಕುಷ್ಠ, ಕ್ಷಯ ಇನ್ನೂ ಎಂತೆಂತವೋ ರೋಗಗಳು ರೋಗವಿಲ್ಲದ ಜಾಗವನ್ನು ಮಾತ್ರ ನಾನು ಕಾಣಲಿಲ್ಲ. ಇಂತಹ ರೋಗಕ್ಕೆ ಇಂತಹ ಚಿಕಿತ್ಸೆ ಎಂದು ವೈದ್ಯದ ಪುಸ್ತಕದಲ್ಲಿ ಹೇಳಿದ್ದಾರೆ. ಅಂತಹ ಚಿಕಿತ್ಸೆ ಮಾಡುತ್ತಾರೆ. ಒಂದೊಂದು ಸಲವಾಸಿಯಾಗುತ್ತೆ. ಒಂದೊಂದು ಸಲ ಇಲ್ಲ, ನೀವು ಊರೂರು ಸುತ್ತಿ ಏನು ಮಾಡುತ್ತೀರಿ? ಇಲ್ಲೇ ಇದ್ದು ವೈದ್ಯ ಅಭ್ಯಾಸ ಮಾಡಿ, ನಾರು ಬೇರು ಹುಡುಕಿ, ಚಿಕಿತ್ಸೆ ಮಾಡುತ್ತಾ ಮಾಡುತ್ತಾ ಹೆಚ್ಚಿನ ಸಲ ರೋಗ ವಾಸಿ ಮಾಡಲು ಸಾಧ್ಯವಾಗಬಹುದು"[2] ಎಂದು ಹೇಳಿ ಅದಕ್ಕಾಗಿ ಗೃಹತ್ಯಾಗದ ಅವಶ್ಯಕತೆ ಇಲ್ಲ ಎಂದು ತಿಳಿಸಿಕೊಡುತ್ತಾನೆ.

ಸಿದ್ಧಾರ್ಥ ಗೃಹತ್ಯಾಗ ಮಾಡಲು, ಜಿಗುಪ್ಸೆ ಉಂಟಾಗಲು ಮತ್ತೊಂದು ಕಾರಣವನ್ನು ತಿಳಿಸುತ್ತಾನೆ. ನಗರ ಪ್ರದಕ್ಷಿಣೆ ಮಡುವ ಸಂದರ್ಭದಲ್ಲಿ ಹೆಣವೊಂದನ್ನು ನೋಡುತ್ತಾನೆ. ಹೆಣ ಎಂದರೇನು ಏಕೆ ಹೀಗಾಗುತ್ತದೆ ಎಂಬುದನ್ನು ಚೆನ್ನನನ್ನು ಕೇಳಿದಾಗ ಸಮರ್ಪಕ ಉತ್ತರ ದೊರೆಯುವುದಿಲ್ಲ. ಹಾಗಾಗಿ ಸಾವಿನ ಸತ್ಯವನ್ನು ತಿಳಿಯಲು ಗೃಹತ್ಯಾಗ ಮಾಡುತ್ತಿರುವುದಾಗಿ ತಿಳಿಸುತ್ತಾನೆ. ಈ ವಿಚಾರ ಮಾತನಾಡುವ ಸಂದರ್ಭದಲ್ಲಿ ತನಗೊಂದು ಮಗುವಾಗಿರುವ ವಿಚಾರವನ್ನು ಅಗ್ನಿಮಿತ್ರರಿಗೆ ಮಗುವನ್ನು ನೋಡಿ ಹೆಂಡತಿ ಮತ್ತು ತಂದೆಯ ಒಪ್ಪಿಗೆಯನ್ನು ಪಡೆದು ಅನಂತರ ಹೋಗಬಹುದಲ್ಲ ಎಂದಾಗ ಸಿದ್ಧಾರ್ಥನು

"ನಾನು ಹೋಗಬೇಕು, ಹೋಗಲೇ ಬೇಕು.
ಈ ದಿನವೇ ಹೋಗಬೇಕು, ಈಗಲೇ ಹೋಗಬೇಕು
ರೋಗ ಎಂದರೆ ಏನು ಎಂದು ತಿಳಿಯಲೇ ಬೇಕು
ಸಾವು ಎಂದರೆ ಏನು ಎಂದು ತಿಳಿಯ ಬೇಕು

[1] ಬುದ್ಧ ನಾಟಕ ಚಕ್ರ – ಪ್ರಭುಶಂಕರ ಪು. ಸಂ. 143, 2001, ಡಿ.ವಿ.ಕೆ. ಮೂರ್ತಿ ಪ್ರಕಾಶನ.
[2] ಬುದ್ಧ ನಾಟಕ ಚಕ್ರ – ಪ್ರಭುಶಂಕರ ಪು. ಸಂ. 145, 2001, ಡಿ.ವಿ.ಕೆ. ಮೂರ್ತಿ ಪ್ರಕಾಶನ.

ಸಾವಿನಾಚೆಗೆ ಏನು ಎಂದು ತಿಳಿಯಲೇ ಬೇಕು

ಸಾಯದೆ ಇರುವುದು ಹೇಗೆ ಎಂಬುದನ್ನು ತಿಳಿಯಲೇ ಬೇಕು"[1]

ಆದರೆ ಅಗ್ನಿಮಿತ್ರನು ಸಾವು ಎಂದರೆ ಏನು ಎಂಬುದನ್ನು ಇದುವರೆಗೂ ಯಾರೂ ತಿಳಿದಿಲ್ಲ. ಹಾಗಾಗಿ ಅದನ್ನು ಹುಡುಕುವುದು ವ್ಯರ್ಥ ಪ್ರಯತ್ನ ಎಂದು ಸಿದ್ಧಾರ್ಥನಿಗೆ ತಿಳಿಸುತ್ತಾನೆ. ಅನಂತರ ಮನೆಗೆ ಹೋಗಿ ಮನೆಯವರ ಒಪ್ಪಿಗೆಯನ್ನು ಪಡೆದು ಬಾ ಇದೇ ಸ್ಥಳದಲ್ಲಿ ನಾಳೆ ಭೇಟಿಯಾಗೋಣ ಎಂದು ಹೇಳಿ ಅಗ್ನಿಮಿತ್ರ ತೆರಳುತ್ತಾನೆ.

ಸಿದ್ಧಾರ್ಥ ಯಶೋಧರೆಯ ಬಳಿ ತಾನು ಗೃಹತ್ಯಾಗ ಮಾಡುತ್ತಿರುವ ವಿಚಾರವನ್ನು ತಿಳಿಸಿ ಅದಕ್ಕೆ ತಂದೆಯ ಅನುಮತಿಯೂ ಇದೆ ಎಂದು ಹೇಳುತ್ತಾರೆ. ಈ ದೃಶ್ಯದಲ್ಲಿ ಚಿಕ್ಕಂದಿನಿಂದ ಹೊರ ಪ್ರಪಂಚದಲ್ಲಿ ಬೇರೆಯು ಬಿಟ್ಟಿದ್ದರೆ ಆತನಿಗೆ ಹೊರ ಪ್ರಪಂಚದ ವಿಷಯಗಳು ಕಾತುವಾಗಿ ಕಾಣುತ್ತಿರಲಿಲ್ಲ. ಬದಲಾಗಿ ಸಾಮಾನ್ಯ ಸಂಗತಿಗಳಾಗುತ್ತಿರುತ್ತಿದ್ದವು. ಆದರೆ ಹಾಗಾಗದೇ ಇದ್ದುದರಿಂದ ಇಂದು ಆತ ಸನ್ಯಾಸಿಯಾಗುವ ನಿರ್ಧಾರಕ್ಕೆ ಬಂದಿದ್ದಾನೆ ಎಂದು ಅನುಮತಿ ನೀಡುತ್ತಾರೆ. ಇತ್ತ ಅಗ್ನಿಮಿತ್ರ ಸತ್ಯವನ್ನು ಹುಡುಕುವ ಕಾಯಕವನ್ನು ಕೈಗೊಂಡು ಹೆಂಡತಿ ಮಕ್ಕಳಿಂದ ದೂರವಿದ್ದು ದೀರ್ಘಸಮಯದ ಅನಂತರ ಆ ಕಾಯಕದಲ್ಲಿ ವಿಫಲವಾಗಿ ವಾಪಸ್ಸಾಗಿ ಬಂದಾಗ ಆತನನ್ನು ಮಕ್ಕಳೇ ಗುರುತಿಸದಾಗುತ್ತಾರೆ. ಹೆಂಡತಿಯು, ಆತನನ್ನು ನೋಡಲು ಬಯಸುವುದಿಲ್ಲ. ಈ ಪ್ರಸಂಗ ಮುಂದೆ ಸಿದ್ಧಾರ್ಥನು ತನ್ನ ಕಾಯಕದಲ್ಲಿ ವಿಫಲನಾಗಿ ಬಂದರೆ ಆಗಬಹುದಾದ ಅನುಭವವನ್ನು ತಿಳಿಸುತ್ತದೆ. ಮನೆಯವರಿಂದ ತಿರಸ್ಕೃತನಾಗಿ ಅಗ್ನಿಮಿತ್ರ ಮತ್ತೆ ಕಾಡಿನ ಕಡೆ ಮುಖ ಮಾಡುವ ತೀರ್ಮಾನ ಕೈಗೊಳ್ಳುತ್ತಾನೆ. ಇದು ಬುದ್ಧನಿಗೂ ಮಾರ್ಗದರ್ಶನದಂತಿದೆ.

ಒಟ್ಟಾರೆಯಾಗಿ ಸಿದ್ಧಾರ್ಥ ಬುದ್ಧನಾಗುವ ಹಂಬಲದಲ್ಲಿ ತಂದೆ, ಹೆಂಡತಿ, ಮಗ, ಐಶ್ವರ್ಯ, ಸುಖ, ಭೋಗ ಇವೆಲ್ಲವನ್ನು ತ್ಯಜಿಸಿ ಹೊರ ಬಂದಾಗ ಉಂಟಾಗಬಹುದಾದ ಹಲವಾರು ಪ್ರಶ್ನೆಗಳಿಗೆ ಉತ್ತರವನ್ನು ಬದಲಾಗಿ ಆತ ಏನು ಕಾಣಲು ಬಯಸಿದ್ದಾನೋ ಅದನ್ನು ಆತ ಅಲ್ಲೇ ಇದ್ದು ಸಾಧಿಸಬಹುದಿತ್ತು ಎಂಬ ಅಂಶಗಳನ್ನು ತಿಳಿಸುವ ಪ್ರಯತ್ನದ ರೀತಿ ನಾಟಕ ಮಾಡಿ ಬಂದಿದೆ. ಏನೇ ಆದರೂ ಸಂಸಾರ ಬಂಧನದಲ್ಲಿದ್ದುಕೊಂಡು ಸರ್ವವನ್ನು ಸಾಧಿಸಲು ಸಾಧ್ಯವಿಲ್ಲ ಎಂದು ಸತ್ಯವನ್ನು ಮನಗಂಡಿದ್ದ ಸಿದ್ಧಾರ್ಥ ಗೃಹ ತ್ಯಾಗ ಮಾಡಿದ ಎಂಬುದು ಅರಿವಾಗುತ್ತದೆ.

[1] ಅದೇ ಪು. ಸಂ. 147.

ಆ) ಶಿವರಾಮಕಾರಂತರ 'ಕಿಸಾಗೋತಮಿ'

ಕಾರಂತರು 'ಕಿಸಾಗೋತಮಿ'ಯ ನಾಟಕದ ಮೂಲಕ ಸಾವಿನ ರಹಸ್ಯವೇನೆಂಬುದನ್ನು ತಿಳಿಸಿದ್ದಾರೆ. "ಈ ನಾಟಕವನ್ನು ಐತಿಹಾಸಿಕ ಎನ್ನಬಹುದಾದರೂ ಪುರಾಣ ಕಥಾ ಪರಂಪರೆಗೆ ಸೇರಿಸುವುದು. ನ್ಯಾಯವಾಗುತ್ತದೆ. ಕಾರಂತರ ಪಾಲಿಗೆ ಪುರಾಣ ಕಥೆಗಳು ಭಾವನಾ ಲೋಕದ ಸತ್ಯಗಳು. ಎಲ್ಲ ಕಾಲದ ಮಾನವನ ಕನಸನ್ನು ಪ್ರತಿನಿಧಿಸುವ ಗುಣ ಈ ಪುರಾಣ ಕಥೆಗಳಿದೆ, ಪುರಾಣ ಕಥಾ ವಸ್ತುಗಳೆಲ್ಲ ಸಾವು ಬದುಕಿನ ಚಿರಂತನ ಸಮಸ್ಯೆಯನ್ನು ಕುರಿತಿವೆ. ಇಲ್ಲಿನ ಶೋಧನೆಯಲ್ಲಿ ಶುದ್ಧ ವೈಚಾರಿಕ ನಿಲುವಿದೆ. ಧಾರ್ಮಿಕ ಶ್ರದ್ಧೆ ಮತ್ತು ನಂಬಿಕೆಗಳಿಗೆ ಎಡೆ ಇಲ್ಲ" [1]

ಈ ನಾಟಕದಲ್ಲಿ ಕಿಸಾಗೋತಮಿ ಕಂದನನ್ನು ಕಳೆದುಕೊಂಡ ನತದೃಷ್ಟೆಯಾಗಿರುತ್ತಾಳೆ. ಅವಳು ಸಾವಿನ ಘೋರ ಸತ್ಯವನ್ನು ಕಂಡಿರಲಿಲ್ಲ ಎಂಬಂತಿದೆ ಈ ನಾಟಕ ಗೊತ್ತಿದ್ದರೂ, ಮತ್ತೆ ಕಂದನನ್ನು ಬದುಕಿಸುವ ಒಂದು ಶಕ್ತಿಯು ಇರಬಹುದೆಂದು ನಂಬಿರುತ್ತಾರೆ. ಹಾಗೆ ಅವಳು ಸತ್ತ ಕಂದನನ್ನು ಎದೆಗೆ ಅವುಚಿಕೊಂಡು ಗೋಳಾಡುತ್ತಿರುವಾಗ ಮರುಗುವ ಒಂದು ಧ್ವನಿಯು ಆನಂದನಿಗೆ ಕೇಳಿಸುತ್ತದೆ. ಆಗ ಆನಂದನು

"ಯಾರು ಮರುಗುವರಿಲ್ಲ...

ಈ ಶಾಂತವನದಲ್ಲಿ ಬೌದ್ಧನಿಹ ನೆಲೆಯಲ್ಲಿ!...

ತಿಳಿವಿನಾಗರದಲ್ಲಿ!" [2]

ಎಂದು ಕೇಳುತ್ತಾನೆ ಅಂದರೆ ಆನಂದನ ಪ್ರಕಾರ ಬುದ್ಧನು ನೆಲೆಸಿದ ನಾಡಿನಲ್ಲಿ ಯಾರೂ ದುಃಖಕ್ಕೆ ಒಳಗಾಗಬಾರದು. ಎಲ್ಲರೂ ಸಂತೃಪ್ತಿಯಿಂದ ಇರಬೇಕೆಂದು ಅವನ ಇಂಗಿತವಾಗಿತ್ತು. ಬುದ್ಧ ಸಂಪಾದಿಸಿದ ಜ್ಞಾನವು ಸಹ ದುಃಖದ ಮೂಲವನ್ನು ಕಂಡು ಹಿಡಿಯುವುದು. ಆ ಮೂಲಕ ಸತ್ಯವನ್ನು ಕಂಡುಹಿಡಿಯುವುದಾಗಿತ್ತು. ಅವನ ಮಾತಿಗೆ ಪ್ರತ್ಯುತ್ತರವಾಗಿ ಆ ಕಡೆಯಿಂದ ಕಂದನನ್ನು ಕಳೆದುಕೊಂಡಿರುವ ಗೊತಮಿಯ ರೋದನೆ ಕೇಳಿ ಬಂದಿತು.

"ಕಂಡಿಹಿರಾ ಕಂದನನು?

ಕೊಡಿಸುವಿರಾ ಬದುಕನ್ನು?

ಜೀವನದ ಬೆಳಕನ್ನು?" [1]

---

[1] ಆಧುನಿಕ ಕನ್ನಡ ನಾಟಕ ಡಾ॥ ಕೆ.ಮರುಳ ಸಿದ್ದಪ್ಪ ಪು.ಸಂ.299. 1983 ಅಂಕಿತ ಪುಸ್ತಕ ಪ್ರಕಾಶನ.

[2] ಗೀತನಾಟಕಗಳು ಶಿವರಾಮ ಕಾರಂತ ಪು.ಸಂ.3. 1981 ರಾಜಲಕ್ಷ್ಮಿ ಪ್ರಕಾಶನ.

ಎಂದು ಪರಿಪರಿಯಾಗಿ ಕೇಳಿಕೊಂಡು ರೋಧಿಸುತ್ತಿದ್ದಾಳೆ.

ಆಗ ಆನಂದನು. ಅವರವರ ಜೀವನದ ಬೆಳಕನ್ನು, ಅವರವರ ನೋವನ್ನ ಅವರೇ ಅನುಭವಿಸಬೇಕು. ಬೇರೆಯವರು ಅವರ ನೋವಿಗೆ ಹೊಣೆಯಾಗುವುದಿಲ್ಲ ಎಂದು ಹೇಳುತ್ತಾನೆ. ಆನಂದನು ಬುದ್ಧನ ಮೆಚ್ಚಿನ ಶಿಷ್ಯನಾಗಿರುತ್ತಾನೆ. ಅವನು ಬುದ್ಧನಿಗೆ ಪಡೆದ ಸತ್ಯವನ್ನು ಗೌತಮಿಗೆ ತಿಳಿಸುತ್ತಿದ್ದಾನೆ.

ಮೊದಲೇ ನೊಂದ ಜೀವನಾಗಿದ್ದ ಗೋತಮಿಗೆ ಅವನ ಸತ್ಯದ ಮಾತುಗಳನ್ನು ಕೇಳಿ ಅಣಕಿಸುವಂತೆ ಕಂಡಿತು. ಈ ರೀತಿ ಆನಂದನಿಗೆ ಹೇಳುತ್ತಿದ್ದಾಳೆ

"ಅಣಕಿಪೆಯಾ ...ನೀ...।
ಅಣಕಿಪೆಯಾ ...ನೀನ್... ಅಣಕಿಪೆಯಾ
ಕಂದನನು ಕಳೆದಿರುವ ಮಂದಭಾಗ್ಯಳ ಕಂಡು,
ಅಣಕಿಪೆಯಾ
ನಗುವು ತೋರದು ಕೂಸು
ದನಿಯನೆತ್ತದು ಕೂಸು ಎದೆಯ ತಬ್ಬದು ಕೂಸು...
ಅದಕಂಡು... ಅಣಕಿಪೆಯಾ?" [2]

ಎಂದು ಆನಂದನ ಬಗ್ಗೆ ಆಕ್ಷೇಪ ವ್ಯಕ್ತಪಡಿಸುತ್ತಿದ್ದಾಳೆ. ಆದರೆ ಆನಂದನಿಗೆ ಮಗು ಸತ್ತಿದೆ ಎಂಬ ಅಂಶ ಮೊದಲು ಗೊತ್ತಿರಲಿಲ್ಲ ಅವಳ ಮಾತಿನಿಂದ ಈಗ ಸತ್ತಿರುವ ಸಂಗತಿ ಆನಮ್ದನಿಗೆ ತಿಳಿಯಿತು. ಆಗ ಆನಂದನು ಗೋತಮಿಗೆ

"ಕಳೆದ ದಿನವೂ... ಮರಳಲುಂಟೆ? ತಾಯೆ
ಬಾಡಿದರಳು... ತೆರೆಯಲುಂಟೆ?
ತಾಯೇ
ಸಂದ ಬಾಳ್ವೆ... ಬರಲು ಉಂಟೆ?" [3]

---

[1] ಅದೇ

[2] ಗೀತ ನಾಟಕಗಳು ಶಿವರಾಮ ಕಾರಂತ 1981 ಪು.ಸಂ.4, ರಾಜಲಕ್ಷ್ಮಿ ಪ್ರಕಾಶನ

[3] ಅದೇ

ಅಂದರೆ ಕಳೆದ ದಿನಗಳು ಮತ್ತೆ ಬರುವುದಿಲ್ಲ, ಹಾಗೆಯೇ? ಸತ್ತಿರುವ ಮಗುವನ್ನು ಮತ್ತೆ ಬದುಕಿಸಲು ಸಾಧ್ಯವಿಲ್ಲ, ಎಂದು ಗೋತಮಿಗೆ ಸಮಾಧಾನ ಮಾಡುತ್ತಿದ್ದಾನೆ. ಆದರೆ ಗೋತಮಿಗೆ ಅವನು ಹೇಳಿದ ಸತ್ಯದ ಮಾತುಗಳು ರುಚಿಸುವುದಿಲ್ಲ. ಬದುಕಿಸು ಕಂದನನ್ನು ಎಂದು ಪರಿಪರಿಯಾಗಿ ಕೇಳಿಕೊಳ್ಳುವಾಗ ನಿನ್ನಂತೆ ನಾನು ಸಹ ಜೀವನದ ರಹಸ್ಯವನ್ನು ಅರಿಯದವನು. ಬಾ ಬುದ್ಧದೇವನೆ ಮಾತ್ರ ನಿನ್ನ ಪ್ರಶ್ನೆಗಳಿಗೆ ಉತ್ತರ ಹೇಳಲು ಸಾಧ್ಯ ಎಂದು ಬುದ್ಧದೇವನ ಹತ್ತಿರ ಕರೆದುಕೊಂಡು ಹೋಗುತ್ತಿದ್ದಾನೆ. ಏಕೆಂದರೆ ಬುದ್ಧ ಮಾತ್ರ ಜೀವನದ ಸತ್ಯಗಳನ್ನು ಸರಿಯಾಗಿ ತಿಳಿಸಿದವನು. ಆ ಗೋತಮಿಯ ಪ್ರಶ್ನೆಗೆ ಉತ್ತರ ಬುದ್ಧನಲ್ಲಿತ್ತು. ಆನಂದನಿಗೂ ಸಹಾ ಬುದ್ಧದೇವನಲ್ಲಿ ಮಾತ್ರ ಗೋತಮಿಯ ಪ್ರಶ್ನೆಗೆ ಉತ್ತರ ಇದೆ ಎಂದು ತಿಳಿದಿದ್ದನು ಬುದ್ಧ ಅಲ್ಲದೇ ಯಾರೇ ಬಂದರೂ ಅವಳನ್ನು ಸಮಾಧಾನ ಪಡಿಸುವಂತಿರಲಿಲ್ಲ.

ಆಗ ಗೋತಮಿಗೆ ಆನಂದವಾಯಿತು. ಈ ರೀತಿ ಕೇಳುತಿದ್ದಾಳೆ

"ಬದುಕಿಪನೇ ಈ ಕೂಸ?

ನಲಿಸುವನೇ ಈ ಕೂಸ

ನಗಿಸುವನೇ ಈ ಕೂಸ" [1]

ಆಗ ಆನಂದನು ನೀನು ಅಂದುಕೊಂಡಂತೆ ಸಂತೋಷವಾಗಿರುತ್ತೀಯ ಎಂದು ಹೇಳಿದನು, ಆನಂದನು ಗೋತಮಿಯನ್ನು ಸಂತೋಷಪಡಿಸುವುದು ಬುದ್ಧನಿಗೆ ಮಾತ್ರ ಸಾದ್ಯ ಎಂದು ಬಲವಾಗಿ ನಂಬಿದ್ದನು.

ಆನಂದನು ಬುದ್ದನ ಹತ್ತಿರ ಗೋತಮಿಯನ್ನು ಕರೆತರುತ್ತಾನೆ. ಆಗ ಬುದ್ಧನು, ಅವರ ಮುಖದಲ್ಲಾಗುತ್ತಿರುವ ಬದಲಾವಣೆಯನ್ನು ಗಮನಿಸಿ

"ಕಳೆಯ ಕಾಣದು ಮುಖದಿ

ದುಗುಡವೇನು?

ಸಂದೇಹ ಸಂತಾಪದೊಳು ಮುಳುಗಿದಂತಿಹುದು

ಹೊಸತು ಏನು?" ಎಂದು ಕೇಳುತ್ತಿದ್ದಾನೆ.

---

[1] ಗೀತನಾಟಕಗಳು ಶಿವರಾಮ ಕಾರಂತ. 1981 ಪು.ಸಂ. 5. ರಾಜಲಕ್ಷ್ಮಿ ಪ್ರಕಾಶನ.

ಆಗ ಆನಂದನು ಸಂತಾಪ ನನಗಿಲ್ಲ, ಈ ತಾಯಿ ಮಗುಡವನ್ನು ಹೊತ್ತು ಬಂದಿದ್ದನಲ್ಲ ಅದಕ್ಕಾಗಿ ನನ್ನ ಮುಖದಲ್ಲಿ ಚೈತನ್ಯವೇ ಇಲ್ಲ ಎಂದು ಹೇಳುತ್ತಿದ್ದಾನೆ. ಅವಳು ಸತ್ತ ಕಂದನನ್ನು ಬದುಕಿಸು ಎಂದು ಕೇಳಿದ್ದು, ಆನಂದನಿಗೆ ಆ ಸಮಸ್ಯೆ ಬಿಡಿಸಲು ಸಾಧ್ಯವಾಗಿರಲಿಲ್ಲ. ನಂತರ ಬುದ್ಧ ಗೋತಮಿಯ ಕಡೆ ತಿರುಗಿ ಏನುತಾಯಿ, ಕೈಯಲ್ಲಿ ಹಿಡಿದಿರುವುದು ಏನು? ನಿನ್ನ ಮನಸ್ಸಿನಲ್ಲಿ ಇರುವ ಸಂಶಯವೇನು? ಎಂದು ಕೇಳುತ್ತಾನೆ. ಆಗ ಗೋತಮಿ ನನ್ನ ಮನಸ್ಸಿನ ತಳಮಳಕ್ಕೆ ಕಾರಣವನ್ನು ನೀನು ಹೇಳುವುದಾದರೆ ಖಂಡಿತ ಹೇಳುತ್ತೇನೆ. ನನ್ನ ಪ್ರಶ್ನೆಗೆ ಉತ್ತರವನ್ನು ಎಲ್ಲರಲ್ಲೂ ಕೇಳಿದೆ. ಎಲ್ಲರನ್ನು ಬೇಡಿದೆ ಆದರೆ ಎತ್ತರ ನನಗೆ ಸಿಗಲಿಲ್ಲ.

ಕೊನೆಯಾದಾಗಿ ನಿನ್ನ ಹತ್ತಿರ ನನ್ನ ಸಮಸ್ಯೆಗೆ ಉತ್ತರ ಕಂಡುಕೊಳ್ಳಲು ಬಂದಿದ್ದೇನೆ. ನನ್ನ ಸಮಸ್ಯೆಗೆ ಪರಿಹಾರ ತಿಳಿಸು ಎಂದು ಕೇಳಿಕೊಳ್ಳುತ್ತಿದ್ದಾಳೆ.

ಗೋತಮಿಗೆ ತನ್ನ ಸಮಸ್ಯೆಗೆ ಪರಿಹಾರ ಬುದ್ಧನಿಂದಲೇ ದೊರಕುತ್ತದೆ ಎಂಬ ಸ್ಪಷ್ಟ ನಿರ್ಧಾರವಿತ್ತು, ಏಕೆಂದರೆ ಬುದ್ಧನ ಬಗ್ಗೆ ತಿಳಿದಿದ್ದಳು ಆಗ ಬುದ್ಧ ನಿನ್ನ ಸಮಸ್ಯೆ ಪರಿಹಾರ ಮಾಡುವ ಶಕ್ತಿ ಇದ್ದರೆ ಪರಿಹರಿಸುತ್ತೇನೆ. ಎಂದು ಹೇಳಿದನು. ಆಗ ಗೋತಮಿಯು

"ಕೊಡಿಸುವೆಯ ... ಕಂದನನ್ನು?

ನಲಿಸುವೆಯ ... ಚಂದಿರನ?

ಬೆಳಗುವೆಯ ... ಬಾಂದಳವ?

ಒಂದೇ ಕೂಸಿದು, ಚಿನ್ನ,

ಬಂದು ನಲಿಸಿತು ಎನ್ನ,

ನಕ್ಕು ನಗಿಸಿತು ಮನವ,

ಬೆರಗುಗೊಳಿಸಿತು ದಿನವ

ಈ ಬೆಳಗು ಕಡು ಕ್ರೂ...ರ ।

ನಿದ್ದೆ ಕವಿದಿದೆ, ಶಿಶುಗೆ ... ಪೊಗದದು ದೂರ

ಮೊಗಕೆ ಸೊಗವ ಬಾರ

ಎದೆಗೆ ... ಬೆಚ್ಚನೆ... ತೋರ...

ಕೊಡಿಸುವೆಯಾ ಕಂದನನ್ನು?

ನಲಿಸುವೆಯಾ ಚಂದಿರನ?" [1]

ಎಂದು ತನ್ನ ಸತ್ತಿರುವ ಮಗನನ್ನು ಬದುಕಿಸುವಂತೆ ಕೇಳಿಕೊಂಡಳು ಸಾವಿನ ಕ್ಷಣವನ್ನು ಇಲ್ಲಿ ಗೋತಮಿ ಎದುರಿಸಿದಂತೆ ಕಾಣುತ್ತಿಲ್ಲ ಎದುರಿಸಿದ್ದರೂ ಆ ನೋವಿನ ಪರಿಚಯ ಅವಳಿಗಿಲ್ಲ ಎಂಬಂತಿದೆ. ಆದರೆ ತನ್ನ ಮಗನ ಸಾವು ಅವಳಲ್ಲಿ ಅತೀವವಾದ ಯಾತನೆಯನ್ನು ತಂದಿದೆ. ಸಾವಿನ ನೋವು ಏನೆಂಬುದು ಅವಳ ಮಗನ ಸಾವಿನ ಮುಖಾಂತರ ಅವಳಿಗೆ ಮನವರಿಕೆಯಾದಂತಿದೆ. ಇದನ್ನು ಮನಗಂಡ ಬುದ್ಧ ಸಾವಿನ ಅನಿವಾರ್ಯತೆಯನ್ನು ಸಾಸಿವೆಯ ಮುಖಾಂತರ ಗೋತಮಿಗೆ ತಿಳಿಸುತ್ತಾನೆ. ಆಗ ಬುದ್ಧ ನಾನು ಹೇಳುವ ಮದ್ದನ್ನು ತೆಗೆದುಕೊಂಡು ಬಾ ಎಂದಾಗ ಗೋತಮಿ ಸುಲಭವಾಗಿ ಒಪ್ಪಿಸಿಕೊಂಡಳು. ಆಗ ಬುದ್ಧನು

"ಸಾವು ಕಾಣದ ಮನೆಯ ಸಾಸಿವೆಯ ತಾರವ್ವ," [2]

ಆಗ ಗೋತಮಿಯು

"ಮಂಕಿನೊಳಗಾಡಿದ್ದೆ, ಕೂಸು ನನ್ನದು ಎಂದೆ
ಯಾರೋ ಕೊಟ್ಟರು ಅದನು
ಯಾರೋ ಕಿತ್ತರು ಅದನು ಅದಕೇಕೆ ಆಹಿಗ್ಗು, ಈಗೀತೆ ಈ ಕುಗ್ಗು?
ಕನಸಿಗಾಗಳಲಾರೆ, ಶವವ ಮರೆಮಾಡಂತಲ್ಲ
ಕನಸ ಮರೆಯುವೆ ತಂದೆ" [3]

ಎಂದು ಸಾವು ಎನ್ನುವುದು ಏನು ಎಂಬುದನ್ನು ಸಾಸಿವೆಯ ಮುಖಾಂತರ ಮನಗಂಡಳು.

ಆಗ ಬುದ್ಧನು ತಿಳಿವಿನಿಂದ ಜ್ಞಾನದಿಂದ ನೀ ಬದುಕು ಮುಂದೆ, ಎಂದು ಗೋತಮಿಯನ್ನು ಹರಸಿ ಸಾವಿನ್ನು ಅರ್ಥಮಾಡಿಸಿ; ಮನಸ್ಸಿಗೆ ಶಾಂತಿ ಕಲ್ಪಿಸಿ ಕಳುಹಿಸುತ್ತಾನೆ.

"ಕಿಸಾಗೋತಮಿಯು ಸಾವಿನ ಘೋರ ಸತ್ಯವನ್ನು ಮನಗಾಣಿಸುವ ಸುಂದರ ಕಲ್ಪನೆ ಬುದ್ಧನ ಬದುಕಿಗೆ ಸಂಬಂಧಿಸಿದಂತೆ ಪ್ರಚಾರದಲ್ಲಿರುವ ಈ ಕಥೆಯನ್ನು ಗೀತ ರೂಪಕ್ಕೆ ಅಳವಡಿಸುವ ಕಾರಂತರು ಹಿಮ್ಮೇಳ ಗಾನವಾನ್ನಳವಡಿಸದೆ ನಿರೂಪಿಸಿದ್ದಾರೆ. ಈ ನಾಟಕದ ಪ್ರಶ್ನೆ ಉತ್ತರಗಳ

---

[1] ಗೀತನಾಟಕಗಳು ಶಿವರಾಮಕಾರಂತ, 1981 ಪು.ಸಂ.7, ರಾಜಲಕ್ಷ್ಮಿ ಪ್ರಕಾಶನ.

[2] ಗೀತನಾಟಕಗಳು ಶಿವರಾಮಕಾರಂತ, 1981 ಪು.ಸಂ.8, ರಾಜಲಕ್ಷ್ಮಿ ಪ್ರಕಾಶನ.

[3] ಗೀತನಾಟಕಗಳು ಶಿವರಾಮ ಕಾರಂತ ಪು.ಸಂ.11, 1981, ರಾಜಲಕ್ಷ್ಮಿ ಪ್ರಕಾಶನ

ಸಂಭಾಷಣಾ ತಂತ್ರಕ್ಕೆ ತಾತ್ವಿಕ ಮಹತ್ವವಿದೆ. ಸಾವಿನ ರಹಸ್ಯ ಪ್ರಶ್ನಾತೀತವಾದುದೆಂಬುದನ್ನು ಈ ವಾಗ್ವಾದದ ಮೂಲಕ ಮನವರಿಕೆ ಮಾಡಿಕೊಡುವ ತಂತ್ರವಿದು. ಸಾವಿಲ್ಲದ ಮನೆಯ ಸಾಸಿವೆ ತಂದುಕೊಟ್ಟರೆ, ತನ್ನ ಮಗನನ್ನು ಬದುಕಿಸಲು ಸಾಧ್ಯವೆಂದು ಬುದ್ಧನಿಂದ ಆಣತಿ ಪಡೆದು ಹೊರಟಿದ್ದ ಗೋತಮಿ ನಿರಾಳಳಾಗಿ ಹಿಂದಿರುಗುತ್ತಾಳೆ. ಸ್ವಾನುಭವದ ಮೂಲಕವೇ ಸಾವಿನ ಅನಿವಾರ್ಯತೆಯ ಅರಿವು ಅವಳಿಗಾಗುತ್ತದೆ. ಬುದ್ಧವಾಣಿಯ ಸತ್ಯಗೋಚರವಾಗಲು ತಕ್ಕ ದೃಷ್ಟಾಂತವನ್ನು ಈ ಕಥೆ ಒದಗಿಸುತ್ತದೆ" [1] ಎಂದಾಗ ಗೋತಮಿ ಇಷ್ಟು ಸುಲಭದ ಮದ್ದೆ ಎಂದು ಒಪ್ಪಿಕೊಂಡಳು.

ನಂತರ ಗೋತಮಿಯು, ಸಾವಿಲ್ಲದ ಮನೆಯ ಸಾಸಿವೆಗಾಗಿ ಬೀದಿ ಬೀದಿಯಲ್ಲಿ ಅಲೆದಾಡುತ್ತಾಳೆ ಮತ್ತು ಎರಡು ಮನೆಗಳಲ್ಲಿ ಭಿಕ್ಷೆಬೇಡಲು ಹೋಗುತ್ತಾಳೆ.

ಕ್ರಮವಾಗಿ ಆ ಮನೆಗಳಲ್ಲಿ ಕಿರಿತಂಗಿ ಮತ್ತೊಂದು ಮನೆಯಲ್ಲಿ ತಂದೆ ಗಂಡ ಎಲ್ಲರನ್ನೂ ಕಳೆದುಕೊಂಡು ಆ ಮನೆಯ ಸದಸ್ಯರೆಲ್ಲರೂ ಕೊರಗುತ್ತಿರುತ್ತಾರೆ. ಈ ದೃಶ್ಯವನ್ನು ಗೋತಮಿ ಮನಗಾಣುತ್ತಾಳೆ.

ಆಗ ಅವಳಿಗೆ ಮನವರಿಕೆಯಾಗುತ್ತದೆ

"ಏನು ಗತಿ ಇದು ಬಂತು।
ಎಲ್ಲಿ ನೋಡಿದಡಲ್ಲಿ ಒಂದೆ ನೋವಿನ ಶೂಲ
ಅದುವೆ ಸಾವಿನ ಜಾಲ
ಸಾಸಿವೆಯು ಇನ್ನೆಲ್ಲಿ!
ಸಾಸಿವೆಯು ಇನ್ನೆಲ್ಲಿ." [2]

ಎಂದು ಸಾವು ಎಲ್ಲರಿಗೂ ಬರುತ್ತದೆ, ಪ್ರತಿಯೊಂದು ಮನೆಯೂ ದುಃಖದ ಕಡಲಲ್ಲಿ ತೇಲಾಡುತ್ತಿದೆ. ಎಂದು ಅರಿತು ಬುದ್ಧನಿರುವಲ್ಲಿಗೆ ಬರುತ್ತಾಳೆ. ಆಗ ಬುದ್ಧನು ಸಾವು ಕಾಣದ ಮನೆಯ ಸಾಸಿವೆಯ ಕಾಳನ್ನು ತಂದೆಯೇನು? ಎಂದು ಕೇಳುತ್ತಾನೆ, ಆಗ ಗೋತಮಿ

"ಸಾಸಿವೆಯ ಕಾಳಿಲ್ಲ,
ಸಾವಿಲ್ಲದೆಡೆಯಿಲ್ಲ

[1] ಆಧುನಿಕ ಕನ್ನಡ ನಾಟಕ ಡಾ॥ ಕೆ.ಮರುಳಸಿದ್ದಪ್ಪ ಪ್ರ.ಸಂ.300, 1983, ಅಂಕಿತ ಪುಸ್ತಕ ಪ್ರಕಾಶನ

[2] ಗೀತನಾಟಕಗಳು, ಶಿವರಾಮ ಕಾರಂತ ಪು.ಸಂ.10, 1981 ರಾಜಲಕ್ಷ್ಮಿ ಪ್ರಕಾಶನ

ಬದುಕಿಸುವ ಗತಿಯಿಲ್ಲ."[1]

ಸಾವು ಎಲ್ಲರ ಮನೆಯಲ್ಲೂ ಘಟಿಸುತ್ತದೆ ಎಂದು ಹೇಳಿದಳು. ಎಲ್ಲಾ ಮೂಲೆಯಲ್ಲಿಯೂ ಸಾವಿನಾಟ ಒಂದೇ ಎಂದು ಹೇಳುತ್ತಾಳೆ.

ಆಗ ಬುದ್ಧನು ಸಾವು ಇಲದ ಜಗತ್ತಿಲ್ಲ ನೋವು ಇಲ್ಲದ ಜಾಗವಿಲ್ಲ. ಸಾವು ಜೀವಕೆ ನಂಟು ಅದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಅದಕ್ಕಾಗಿ ಜೀವನದಲ್ಲಿ ಸಾವಿನಿಂದ ಮರುಗಬಾರದು, ಜೀವವಿದ್ದಾಗ ಹಿಗ್ಗಬಾರದು ಈ ಸಾವಿನಾಟ ಎಂಬುದು ಸುಳ್ಳಿನ ಆಟ ಅದಕ್ಕಾಗಿ ಕೊರಗಬಾರದು ಎಂದು ಹೇಳುತ್ತಾನೆ.

ಬುದ್ಧೋದಯ

ಶಿವರಾಮ ಕಾರಂತರು, ಸಿದ್ಧಾರ್ಥನು ಬುದ್ಧನಾದ ಪರಿಯನ್ನು ಚಿತ್ರಿಸುವ ಬುದ್ಧೋದಯವೂ ಪ್ರಚಾರದಲ್ಲಿರುವ ಪುರಾಣ ಐತಿಹ್ಯಗಳನ್ನಾಧರಿಸಿ ವಸ್ತುವನ್ನು ಕಲ್ಪಿಸಿಕೊಂಡಿದೆ. ಇತಿಹಾಸದ ಬುದ್ಧನು ರಾಹುಲನು ಹುಟ್ಟಿದ ದಿನವೇ ಎಲ್ಲವನ್ನು ತ್ಯಜಿಸಿ ಹೊರಬರುತ್ತಾನೆ. ಆದರೆ ಶಿವರಾಮ ಕಾರಂತರ ದೃಷ್ಠಿಯಲ್ಲಿ ಬುದ್ಧೋದಯವು ಅಂದರೆ ಬುದ್ಧನಿಗೆ ಜ್ಞಾನದ ಅರಿವು ಮೂಡಿದ್ದು ರಾಹುಲನ ಬಾಲ ಸಹಜ ಮಾತೆಂಬುದು ಇಲ್ಲಿನ ಹೊಸ ಕಲ್ಪನೆಯಾಗಿದೆ.

ಕಾರಂತರು ಚಿತ್ರಿಸಿರುವ ಬುದ್ಧನು ತನ್ನ ಪರಿವಾರದೊಂದಿಗೆ ಸಂತೋಷದಿಂದ ಕಾಲಕಳೆಯುತ್ತಿರುತ್ತಾನೆ. ಒಂದು ದಿನ ಸಿದ್ಧಾರ್ಥನು ಯಶೋಧ ಮತ್ತು ರಾಹುಲನೊಂದಿಗೆ ಪ್ರಾತಃ ಕಾಲದ ಆಸ್ವಾದನೆಯನ್ನು ಸವಿಯುತ್ತಿರುತ್ತಾನೆ. ಆಗ ರಾಹುಲನು ಯಶೋಧರಾಗೆ

"ತಾಯೇ ಚಲುವು ದೋರಿದೆ ।

ರವಿಯ ಬಿಂಬ ಮೂಡಿದೆ

ಬೆಳಕು ತುಂಬ ಹಾಸಿದೆ

ಎನಿತು ಶೋಭೆಯು

ಈ ಬೆಳಗು ಎನಿತು ಶೋಭೆಯು ।" [2]

ಎಂದು ಮುಂಜಾವಿನ ಆಕರ್ಷಣೆಗೆ ಒಳಗಾಗಿ ಯಶೋಧರೆಗೆ ಮುಂಜಾವಿನ ವರ್ಣನೆಯನ್ನು ಮಾಡುತ್ತಿದ್ದಾನೆ. ಆದಿನ ಅವನ ಮನಸ್ಸಿನ ಒಂದು ಹರ್ಷವನ್ನು ತಂದಿದೆ. ದಿನ ಕಳೆದಂತೆ ಹಳೆಯದು

---

[1] ಗೀತನಾಟಕಗಳು, ಶಿವರಾಮ ಕಾರಂತ ಪು.ಸಂ.10, 1981 ರಾಜಲಕ್ಷ್ಮಿ ಪ್ರಕಾಶನ.

[2] ಗೀತನಾಟಕಗಳು, ಶಿವರಾಮ ಕಾರಂತ ಪ್ರ.ಸಂ.146, 1981 ರಾಜಲಕ್ಷ್ಮಿ ಪ್ರಕಾಶನ.

ಕಳಚಿ ಹೊಸದು ಉದಯಿಸುತ್ತಿದೆ ಎಂದು ಹೇಳುತ್ತಿದ್ದಾನೆ. ಆಗ ಯಶೋಧರಾ ಚಳಿಗಾಲವು ಬಂದಿದೆ, ಈ ಕಾಲದಲ್ಲಿ ಮರಗಿಡಗಳು ಹಸಿರಿನಿಂದ ಕಂಗೊಳಿಸುತ್ತವೆ. ಎಲ್ಲ ಹಕ್ಕಿಗಳು ಸಂಭ್ರಮದಿಂದ ಹಾಡುತ್ತವೆ. ಎಲ್ಲವೂ ಹರ್ಷದಾಯಕವಾಗಿರುತ್ತದೆ. ಎಂದು ಹೇಳುತ್ತಾಳೆ. ಆಗ ರಾಹುಲನು

"ಬಾ ಬಾ ನಲಿಯುವ
ನೋಡೀ ತಣಿಯುವ
ಬಯಲಾ ದಾಟುವ
ಜಗವಾ ಸುತ್ತುವ"[1]

ಎಂದು ಯಶೋಧರಾಗೆ ಹೇಳುತ್ತಾನೆ. ಆಗ ಸಿದ್ಧಾರ್ಥನಿಗೆ ಈ ಮಾತುಗಳಲ್ಲಿ ಏನೋ ಅರ್ಥ ಇದೆ ಎಂದು ಅರಿವಾಗುತ್ತದೆ. ಯಾವುದೋ ಒಂದು ಹೊಸ ಲೋಕದ ಕಲ್ಪನೆ ಇವನ ಮನಸ್ಸಿನಲ್ಲಿ ಚಿಗುರೊಡೆಯುತ್ತಿದೆ. ಇವರ ಈ ಮುಂಜಾವಿನ ವರ್ಣನೆಗಳು ಸಿದ್ಧಾರ್ಥನು ಜ್ಞಾನದ ಕಡೆ ಕರೆದುಕೊಂಡು ಹೋಗುವಂತಿದೆ. ಅಂದಿನಿಂದ ಸಿದ್ಧಾರ್ಥನ ಮನಸ್ಸು ಕಾಣದ ಲೋಕವನ್ನು ಕಾಣಬೇಕೆಂಬ ಬಯಕೆ ಉಂಟಾಗುತ್ತದೆ.

ಅವನ ಮನಸ್ಸಿನಲ್ಲಿ 'ಬಯಲು ದಾಟುವ ಜಗವಾ ಸುತ್ತುವ' ಎಂಬ ಮಾತುಗಳು ಜಗತ್ತನ್ನ ಕಾಣುವ ಅರ್ಥಮಾಡಿಕೊಳ್ಳುವ ಅದರ ಹೊರಗೇನಿದೆ ಎಂದು ತಿಳಿದುಕೊಳ್ಳುವ, ಕುತೂಹಲವನ್ನ ತಂದುಕೊಡೂತ್ತದೆ.

ಇತಿಹಾಸದ ಬುದ್ಧ ರಾಹುಲ ಹುಟ್ಟಿದ ಮೊದಲ ವೈರಾಗ್ಯ ಹೊಂದಿ ಹುಟ್ಟಿದ ದಿನ ಎಲ್ಲವನ್ನು ತ್ಯಾಗಮಾಡಿ ಹೊರಡುತ್ತಾನೆ. ಆದರೆ ಕಾರಂತರು ಚಿತ್ರಿಸಿರುವ ಸಿದ್ಧಾರ್ಥನಿಗೆ ಮಗನಿಂದಲೇ ವೈರಾಗ್ಯ ಉಂಟಾಯಿತೆಂದು ತಿಳಿಯುತ್ತದೆ. ಮಗನ ಮುಖಾಂತರ ಜ್ಞಾನಪಡೆದು ಬುದ್ಧನಾಗುವ ಬಗೆಯನ್ನು ಚಿತ್ರಿಸಿದ್ದಾರೆ.

ಸಂತೋಷದಿಂದ ಇದ್ದ ಸಿದ್ಧಾರ್ಥ ಕ್ಷಣಮಾತ್ರದಲ್ಲಿ ಬದಲಾವಣೆಯಾಗಿದ್ದನ್ನು ಯಶೋಧರಾ ಗುರುತಿಸುತ್ತಾಳೆ. ಆದರೆ ಅವನ ಮನದ ಇಂಗಿತವನ್ನು ಕ್ಷಣದಲ್ಲಿ ಗುರುತಿಸಲಾರದೆ ಹೋದಳು. ಅಲ್ಲಿಗೆ ಬಂದ ಚೆನ್ನನು ಬುದ್ಧನು ಹಾಡುತ್ತಿದ್ದ ಈ ಸಾಲುಗಳನ್ನು ಕೇಳಿಸಿಕೊಳ್ಳುತ್ತಾನೆ. ಚೆನ್ನನ ಪ್ರವೇಶ ಸಿದ್ಧಾರ್ಥನಿಗೆ ಅರಿವಾಗಿರುವುದಿಲ್ಲ. ಅಷ್ಟು ಭಾವತಲ್ಲೀನತೆಯಲ್ಲಿ ಇರುತ್ತಾನೆ.

[1] ಗೀತನಾಟಕಗಳು, ಶಿವರಾಮ ಕಾರಂತ ಪ್ರ.ಸಂ.147, 1981 ರಾಜಲಕ್ಷ್ಮಿ ಪ್ರಕಾಶನ

ಇಲ್ಲಿ ಚನ್ನ ಎನ್ನುವಂತಹ ಪಾತ್ರ ಪೌರಾಣಿಕ ಮತ್ತು ಐತಿಹಾಸಿಕ ನಾಟಕಗಳಲ್ಲಿ ಕಾಣುತ್ತೇವೆ. ಕಾರಂತರು ಚಿತ್ರಿಸಿರುವ ಚನ್ನನ ಪಾತ್ರ ತುಂಬಾ ವಿಶಿಷ್ಟವಾಗಿದೆ. ಇಲ್ಲಿ ಚನ್ನನು ನಗರ ಸಂಚಾರದಲ್ಲಿ ತೊಡಗಿದ್ದಾಗ ಕುಷ್ಟರೋಗಿ, ವೃದ್ಧ, ಹೆಣಗಳು ಎದುರಾದಾಗ, ವಸ್ತುಸ್ಥಿತಿ ಚೆನ್ನನಿಗೆ ಅರಿವಾಗಿದ್ದರೂ ಸಿದ್ಧಾರ್ಥನಿಗೆ ವಿವರಿಸುತ್ತಾನೆ. ಅವನ ವೈರಾಗ್ಯಕ್ಕೆ ಬೀಜವನ್ನು ಬಿತ್ತಿದವನು ಚೆನ್ನನೇ ಎಂಬುವನ್ನು ದೃಢಪಡಿಸುತ್ತದೆ.

ಸಿದ್ಧಾರ್ಥ ಆ ವಾಕ್ಯಗಳಲ್ಲಿ ಭಾವತಲ್ಲೀನನಾಗಿದ್ದು, ಅದರಿಂದ ಹೊರ ಬಂದಾಗಲೇ ಚೆನ್ನನ ಇರುವಿಕೆಯನ್ನು ಕಾಣುತ್ತಾನೆ. ಚನ್ನ ಸಿದ್ಧಾರ್ಥನ ಆಪ್ತ ಸೇವಕನಾಗಿರುತ್ತಾನೆ. ಎಲ್ಲ ಕಲ್ಪಿತ ನಾಟಕಕಾರರು ಸಹ ಚನ್ನ ಸಿದ್ಧಾರ್ಥನಿಗೆ ಹಲವು ಸಂದರ್ಭದಲ್ಲಿ ಸಹಾಯ ಮಾಡಿರುವುದನ್ನು, ನೆರವಿಗೆ ಬಂದಿರುವ ಪ್ರಸಂಗವನ್ನು ಚಿತ್ರಿಸಿದ್ದಾರೆ. ಆದರೆ ಕಾರಂತರ ಚೆನ್ನ ಸಿದ್ಧಾರ್ಥನ ನೆರವಿಗೆ ಬಂದರೂ ಅವನ ದೆಸೆಯಿಂದಲೇ ಸಿದ್ಧಾರ್ಥ ವೈರಾಗ್ಯಕ್ಕೆ ತುತ್ತಾಗಿದ್ದಾನೆ, ಎಂಬ ಅಂಶವನ್ನು ಎತ್ತಿ ಹಿಡಿದಿದ್ದಾರೆ.

ಸಿದ್ಧಾರ್ಥನಿಗೆ ತಾನು ಬಂಧನದಲ್ಲಿ ಸಿಕ್ಕಿಹಾಕಿಕೊಂಡಿರುವ ಭಾವನೆ ಅವನಲ್ಲಿ ಮೂಡಿತು. ಅದಕ್ಕೆ ಚೆನ್ನನಲ್ಲಿ

"ಪಿತನದೇತಕೆ ಯನ್ನ
ಸೊಗದ ಬಂಧನದಲ್ಲಿ
ಕಾವಲಿಟ್ಟಿಹ – ಚನ್ನ!" [1]

ಎಂದು ಕೇಳುತ್ತಾನೆ. ಅರಮನೆಯ ದಾಟಿ ಹೊರಗಿನ ಪ್ರಪಂಚವನ್ನು ಕಾಣಬೇಕೆಂಬ ಕುತೂಹಲ ಉಂಟಾಗುತ್ತಿದೆ. ಈ ಸೆರೆಯನ್ನು ಬಿಡಿಸಿ ಕರೆದುಕೊಂಡು ಹೋಗು ಎಂದು ಚೆನ್ನನಲ್ಲಿ ಕೇಳಿಕೊಳ್ಳುತ್ತಾನೆ.

ಆಗ ಚೆನ್ನನು ನಗರ ಸಂಚಾರಕ್ಕೆ ಏಕೆ ಇಷ್ಟು ಅವಸರ ಎಂದು ಕೇಳುತ್ತಾನೆ. ಆಗ ಸಿದ್ಧಾಥನು ಪಟ್ಟು ಹಿಡಿದಾಗ ತಂದೆಯ ಅಪ್ಪಣೆ ಕೇಳಿ ಬರುವೆನೆಂದು ಹೊರಡುತ್ತಾನೆ. ಬುದ್ಧನ ಮನದ ಪ್ರಶ್ನೆಗಳಿವು ಸೌಧದಾಚೆಗೆ ಏನಿದೆ? ನಗರದಾಚೆಗೆ ಏನಿದೆ? ಬಯಲಿನಾಚೆಗೆ ಏನಿದೆ? ಬಾಳಿನಾಚೆಗೆ ಏನಿದೆ? ಇವೆಲ್ಲದರ ಆಚೆಗೂ ಏನಿದೇ? ಎಂದು ಕಂಡುಹಿಡಿಯುವುದಾಗಿತ್ತು.

---

[1] ಗೀತನಾಟಕಗಳು ಶಿವರಾಮ ಕಾರಂತ ಪು.ಸಂ.149, ರಾಜಲಕ್ಷ್ಮಿ ಪ್ರಕಾಶನ

ಜ್ಯೋತಿಷ್ಯಕ್ಕೆ ಹಲವಾರು ವರ್ಷಗಳಿಂದ ಮಹತ್ವವಾದ ಸ್ಥಾನವಿದೆ. ಅದನ್ನು ನಂಬುವವರೂ ಇದ್ದಾರೆ ನಂಬದೇ ಇರುವವರೂ ಇದ್ದರೆ. ಆದರೆ ಸಿದ್ಧಾರ್ಥನ ಮನಸ್ಸು ವೈರಾಗ್ಯದತ್ತ ಹೊರಳುತ್ತದೆ. ಎಂಬ ಭವಿಷ್ಯವಾಣಿ ನಿಜವಾಗುತ್ತದೆ. ಎಲ್ಲಾ ನಾಟಕಕಾರರೂ ಕಲ್ಪಿಸಿರುವ ಬುದ್ಧನ ನಾಟಕಗಳಲ್ಲೂ ಜ್ಯೋತಿಷ್ಯರ ಭವಿಷ್ಯವಾಣಿ ನಿಜವಾಗುತ್ತದೆ. ಇದು ಕಾರಂತರ ದೃಷ್ಟಿಯಲ್ಲೂ ನಿಜವಾಗುತ್ತದೆ.

ಚೆನ್ನ ಶುದ್ಧೋದನನಿಗೆ ಸಿದ್ಧಾರ್ಥನ ಮನದ ಇಂಗಿತವನ್ನು ತಿಳಿಸುತ್ತಾನೆ. ಆಗ ಶುದ್ಧೋದದನನು ನಗರ ಸಂಚರವನ್ನು ತಡೆಯುವುದೇ ಮೇಲು ಎಂದು ಹೇಳುತ್ತಾನೆ. ಆಗ ಚೆನ್ನನು, ಬೇಡ ಹರಿಯುವ ನೀರನು ತಡೆದು ನಿಲ್ಲಿಸುವುದು ಸಾಧ್ಯವೇ ಎಂದು ಹೇಳಿದಾಗ ಶುದ್ಧೋದನ ಚೆನ್ನನಿಗೆ, ಎಲ್ಲವನ್ನು ನಿನಗೊಪ್ಪಿಸುವೆ. ಕಪಿಲವಸ್ತುವಿಗೆ ಹರ್ಷವನ್ನು ತಂದು ಕೊಡುವುದು ನಿನ್ನ ಜವಾಬ್ದಾರಿ ಎಂದು ಹೇಳುತ್ತಾನೆ.

ಏಕೆಂದರೆ ಚೆನ್ನ ಆ ಅರಮನೆಯ ಸೇವಕನಾದರೂ ಒಬ್ಬ ಸದಸ್ಯನಾಗಿರುತ್ತಾನೆ. ಎಲ್ಲಾ ಕೆಲಸ ಕಾರ್ಯಗಳನ್ನು ಯಾವುದೇ ರಹಸ್ಯ ವಿಚಾರಗಳನ್ನು ಶುದ್ದೋಧನ ಚೆನ್ನನಿಗೆ ವಹಿಸುತ್ತಿದ್ದನು. ಸಿದ್ಧಾರ್ಥನ ಭವಿಷ್ಯವಾಣಿಯು ಸಹ ಅವನಿಗೆ ತಿಳಿದಿತ್ತು.

ನಂತರ ಚೆನ್ನ ಮತ್ತು ಸಿದ್ಧಾರ್ಥನು ನಗರ ಪ್ರವೇಶಿಸುತ್ತಾರೆ. ಎಂಬ ಅಂಶವನ್ನು ನಗರದ ಎಲ್ಲಾಕಡೆ ಹರಡಿಸುತ್ತಾನೆ. ಎಲ್ಲರಿಗೂ ಇದು ಶುಭ ವಾರ್ತೆಯಾಗಿ ಕೇಳಿಸುತ್ತದೆ.

ಚೆನ್ನ ಮತ್ತು ಸಿದ್ಧಾರ್ಥ ನಗರವನ್ನು ಪ್ರವೇಶ ಮಾಡುತ್ತಾರೆ. ಎಲ್ಲರೂ ಸಿದ್ಧಾರ್ಥನ ಸ್ವಾಗತಕ್ಕೆ ಅಣಿಯಾಗಿ ನಿಂತುಕೊಳ್ಳುತ್ತಾರೆ. ಆಗ ಸಿದ್ಧಾರ್ಥನಿಗೆ ತುಂಬಾ ಆನಂದವಾಗುತ್ತದೆ. ತಕ್ಷಣ ಸಿದ್ಧಾರ್ಥನ ಮನಸ್ಸು ಚಂಚಲವಾಗುತ್ತದೆ. ಏಕೆಂದರೆ, ದಾರಿಯಲ್ಲಿ ಕಂಡಂತಹ ಕುಷ್ಟರೋಗಿ, ಮುಪ್ಪಿನವನನ್ನು ಮತ್ತು ಶವವನ್ನು ಕ್ರಮವಾಗಿ ಕಾಣುತ್ತಾನೆ. ಆಗ ಚೆನ್ನನಿಗೆ ಈ ಮೂರು ಘಟನೆಗಳು ಪ್ರತಿಯೊಬ್ಬ ಮನುಷ್ಯನಿಗೆ ಘಟಿಸುತ್ತದೆಯಾ? ಎಂದು ಕೇಳಿದನು ಆಗ ಚೆನ್ನನು ಆ ಮೂರು ಘಟನೆಗಳನ್ನು ಪ್ರತಿಯೊಬ್ಬರೂ ಅನುಭವಿಸಬೇಕು ಎಂದು ಕ್ರಮವಾಗಿ ವಿವರಿಸುತ್ತಾನೆ. ಅವನ ಮಾತುಗಳಿಂದ ಸಿದ್ಧಾರ್ಥನು ವೈರಾಗ್ಯದತ್ತ ಹೊರಳುತ್ತಿರುವುದನ್ನು ಇಲ್ಲಿ ಕಾರಂತರು ಚಿತ್ರಿಸಿದ್ದಾರೆ.

ಇಲ್ಲಿ ಕಾರಂತರು ಚೆನ್ನನ ಮೂಲಕ ಸಿದ್ಧಾರ್ಥನಿಗೆ ರೋಗಿ; ಮುಪ್ಪಿನವನನ್ನು ಸಾವನ್ನು, ವಿವರಿಸಬಾರದಿತ್ತು. ಏಕೆಂದರೆ ಚೆನ್ನನಿಗೆ ಮೊದಲೇ ಸಿದ್ಧಾರ್ಥನ ಭವಿಷ್ಯವಾಣಿ ತಿಳಿದಿತ್ತು. ಎಂಬ ಅಂಶವನ್ನು ಇಲ್ಲ ತಿಳಿಯಬೇಕು.

ಅರಮನೆಯಲ್ಲಿ ರಾಹುಲ ಮತ್ತು ಯಶೋಧರೆಯು ಸಿದ್ಧಾರ್ಥನ ಬರುವಿಕೆಗಾಗಿ ಕಾಯುತ್ತಿದ್ದಾರೆ. ರಾಹುಲ ತನ್ನ ತಾಯಿಯ ಹತ್ತಿರ ಏಕೆ ತಂದೆಯು ಆಟಕೆ ಬರುದಿಲ್ಲ ಮತ್ತು

ಯಾವಾಗಲೂ ಬೇಸರದಿಂದ ಇರುತ್ತಾರೆ ಎಂದು ಕೇಳುತ್ತಾನೆ. ಆಗ ಯಶೋಧರೆಯು ಪ್ರಜೆಗಳ ಉದ್ಧಾರದ ಚಿಂತೆಯು ದೊರೆಗೆ ಅತ್ಯಂತವಾದುದು ಎಂದು ಹೇಳುತ್ತಾಳೆ ಅಂದರೆ ಯಶೋಧರೆಗೆ ಸಿದ್ಧಾರ್ಥನ ವೈರಾಗ್ಯವನ್ನು ಮೊದಲೇ ಊಹಿಸಿದಂತಿದೆ. ಸಿದ್ಧಾರ್ಥನು ಇವರ ಮಾತನ್ನು ಕೇಳಿಸಿಕೊಳ್ಳುತ್ತಾನೆ. ಮತ್ತು ಸಮಾಧಾನಮಾಡಿ ಮಲಗಿಸುತ್ತಾನೆ. ಯಶೋಧರೆಯೊಂದಿಗೆ ಮಲಗಿ ಅವಳು ನಿದ್ರೆ ಹೋದ ಬಳಿಕ ಸಿದ್ಧಾರ್ಥನು ಚೆನ್ನನ ಬರುವಿಕೆಗಾಗಿ ಕಾಯುತ್ತಿರುತ್ತಾನೆ. ಬಂದ ನಂತರ ಸಂತೋಷ ವ್ಯಕ್ತಪಡಿಸುತ್ತಾನೆ.

ಇತಿಹಾಸದಲ್ಲಿ ಬುದ್ಧನನ್ನು ಚಿತ್ರಿಸುವುದಾದರೆ, ಸಿದ್ಧಾರ್ಥ ರಾಹುಲ ಹುಟ್ಟಿದ ದಿನ, ರಾಹು ಕಂಟಕವಾಗಿ ಮಗ ಹುಟ್ಟಿದ್ದಾನೆ ಎಂದು ಭಾವಿಸಿದ, ನಂತರ ನಡುರಾತ್ರಿ ಚೆನ್ನನೊಂದಿಗೆ ಮನೆಬಿಟ್ಟು ಹೊರಟ ಆದರೆ ಕಾರಂತರ ಬುದ್ಧ ಮಗ ಮತ್ತು ಹೆಂಡತಿಯೊಂದಿಗೆ ಸ್ವಲ್ಪಕಾಲ ಕಳೆದು ಅವರನ್ನು ಎದುರುಗೊಂಡು ನನ್ನನ್ನು ಕ್ಷಮಿಸಿ ಎಂದು ಹೇಳಿ ಚೆನ್ನನೊಂದಿಗೆ ಹೊರಡುತ್ತಾನೆ. ಹಲವು ವರ್ಷಗಳು ಕಳೆದ ನಂತರ ಬುದ್ಧ ತನ್ನ ಸಾಧನೆಯಿಂದ ಭೋಧಿವೃಕ್ಷದ ಕೆಳಗೆ ಜ್ಞಾನವನ್ನು ಪಡೆಯುತ್ತಾನೆ. ಜಗತ್ತಿಗೆ ಬೆಳಕಾಗುತ್ತಾನೆ. ಅವನ ನಿಜವಾದ ಈ ಜ್ಞಾನವನ್ನು ಎಲ್ಲರೂ ಅರಿಯುತ್ತಾರೆ.

ಇ) ಕುವೆಂಪುರವರ 'ಮಹಾರಾತ್ರಿ'

ಕುವೆಂಪುರವರ 'ಮಹಾರಾತ್ರಿ' ನಾಟಕವು ಭಿನ್ನ ನೆಲೆಯಲ್ಲಿ, ವೈಚಾರಿಕ ಅಂಶಗಳನ್ನು ಒಳಗೊಂಡು ರಚಿತವಾಗಿದೆ. ನಾಟಕದಲ್ಲಿ ಪ್ರಮುಖವಾಗಿ ಸಿದ್ಧಾರ್ಥ ಬುದ್ಧನಾಗಲು ಹವಣಿಸಿ ಸಂಸಾರ ಬಂಧನದಿಂದ ದೂರಾಗುವುದು, ಆ ಸಂದರ್ಭದಲ್ಲಿ ಉಂಟಾದ ತಳಮಳಗಳನ್ನು ಕಾಣಬಹುದು. ಮಹಾರಾತ್ರಿ ಎಂಬ ಶೀರ್ಷಿಕೆಯಲ್ಲಿಯೇ ಕುವೆಂಪುರವರ ವಿಶಾಲ ದೃಷ್ಟಿಯನ್ನು ಕಾಣಬಹುದು. ಆ ರಾತ್ರಿ ಇತರೆ ಸಾಮಾನ್ಯ ರಾತ್ರಿಗಳಂ ತಿರದೆ ಬೇರೆಯದೇ ಆಗಿರುತ್ತದೆ. ಇದನ್ನು ಕಿನ್ನರನ ಮಾತಿನಲ್ಲಿ ಕಾಣಬಹುದು.

"ಇದು ಮಾಹಾರಾತ್ರಿ, ಸಿದ್ಧಾರ್ಥ ಬುದ್ಧನಾ
ಗುವ ರಾತ್ರಿ, ಸಗ್ಗದೊಲವಿಳೆಗಿಳಿವ ರಾತ್ರಿ!" [1]

ಸಿದ್ಧಾರ್ಥ ಬುದ್ಧನಾಗಲು ಸಂಸಾರ ಬಂಧನಗಳನ್ನು ತ್ಯಜಿಸಿ ಹೊರಡುವ ಅಂದಿನ ರಾತ್ರಿ ಸಾಮಾನ್ಯ ರಾತ್ರಿಯಾಗಿರದೆ ಮಹಾರಾತ್ರಿಯಾಗಿದೆ. ಆ ಮುಖಾಂತರ ಕುವೆಂಪುರವರ ಅಂದಿನ ರಾತ್ರಿಗೆ ತುಂಬಾ ಪ್ರಾಮುಖ್ಯತೆಯನ್ನು ನೀಡಿದ್ದಾರೆ.

ಸಿದ್ಧಾರ್ಥ ಬುದ್ಧನಾಗುವ ಸಂದರ್ಭವನ್ನು ಕುವೆಂಪುರವರು ಬೇರೆಯದೇ ಆದ ರೀತಿಯಲ್ಲಿ ವೈಚಾರಿಕ ದೃಷ್ಠಿಯಲ್ಲಿ ನೋಡಿದ್ದಾರೆ. ಏಕೆಂದರೆ ಹಿಂದೂ ಸಂಸ್ಕೃತಿಯಲ್ಲಿ ಪುರೋಹಿತಶಾಹಿ ಮತ್ತು ಪ್ರಭುತ್ವಶಾಹಿ ಎಂಬ ಎರಡು ವರ್ಗಗಳಿದ್ದು ಇವು ಸಮಾಜವನ್ನು ತಮ್ಮ ಕಪಿಮುಷ್ಠಿಯಲ್ಲಿ ಹಿಡಿದುಕೊಂಡೂ ನಿಯಂತ್ರಿಸುತ್ತಿದ್ದವು ಹಾಗಾಗಿ ಕುವೆಂಪುರವರಿಗೆ ಈ ಎರಡು ವರ್ಗಗಳ ಮೇಲೂ ದ್ವೇಷ, ಪುರೊಹಿತಶಾಗಿ ಮತ್ತು ಪ್ರಭುತ್ವಶಾಹಿಯನ್ನು ವಿರೋಧಿಸಿದವರು. ಈ ಎರಡು ವರ್ಗಗಳು ನಾಶವಾಗದ ಹೊರತು ಅಭಿವೃದ್ಧಿ ಸಾಧ್ಯವಿಲ್ಲ ಎಂಬುದನ್ನು ಘಂಟಾಘೋಷವಾಗಿ ಘೋಷಿಸಿದವರು ಕುವೆಂಪು. ಅಂದರೆ ಅಂದಿನ ಪರಿಸ್ಥಿತಿಯಲ್ಲಿ ಇವೆರೆಡರ ಪ್ರಭಾವ ಅತಿಯಾಗಿದ್ದಿತು, ಹಾಗಾಗಿ ಸಿದ್ಧಾರ್ಥ ಬುದ್ಧನಾಗಲೇ ಬೇಕು ಎಂದು ಆಶಿಸಿದವರು. ಇದನ್ನು ಯಕ್ಷನ ಮಾತಿನಲ್ಲಿ ಕಾಣಬಹುದು.

"ಯಜ್ಞಯಾಗಾದಿಗಳು
ಹಿಂಸೆಯಲ್ಲಿ ಬೆಂದು, ಕೃತ್ರಿಮದ ವೈದಿಕರ
ದೌಷ್ಟ್ಯದೊಳುನೊಂದು, ಒಣವೇದ ಪಂಡಿತರ
ವಾದದೊಳು ಮುಳುಮುಳಿಗಿ ಗೊಳಿಡುವ ಭಾರತೀಯ

[1] ಮಹಾರಾತ್ರಿ, ಕುವೆಂಪು, ಮು.ಸಂ. 1, 1995, ಉದಯ ರವಿ ಪ್ರಕಾಶನ

ಪುಣ್ಯಗಗನದ ಪೂರ್ವದೊಳು, ನೋಡು ಹರ್ಷದರು–

ಸೋದರುಣೋದಯವು ಶೋಭಿಸ್ತುದೆಂತು"[1]

ಪುರೋಹಿತಷಾಹಿಯ ಹಿಡಿತದಲ್ಲಿ ಸಿಕ್ಕಿ ನರಳುತ್ತಿರುವ ಭಾರತೀಯ ಸಮಾಜಕ್ಕೆ ಬಿಡುಗಡೆಯ ಹಾದಿಗಳಲ್ಲೊಂದು ಬುದ್ಧಮಾರ್ಗ ಎಂಬುದು ಕುವೆಂಪುರವರ ಅಭಿಪ್ರಾಯ. ಆರಂಭದಲ್ಲೇ ಸಿದ್ಧಾರ್ಥನು ಭವಬಂಧನದಿಂದ ಬಿಡುಗಡೆ ಹೊಂದಲು ನಿರ್ಧರಿಸಿ ನಿಂತಿದ್ದಾನೆ. ಇಂದಿನ ಈ ತೀರ್ಮಾನ ಇಂದು ಮಾತ್ರ ಬಂದಿರದೆ ಹಲವಾರು ದಿನಗಳ ಹಿಂದೆಯೇ ಮಾಡಿದುದಾಗಿರುತ್ತದೆ. ಇದು ಆತನ ಮಾತುಗಳಲ್ಲೇ ವ್ಯಕ್ತವಾಗುತ್ತದೆ.

"ಇಲ್ಲ. ನಾನ್

ಇರಲಾರೆ–ನಿನ್ನು । ಇಂದಿನಿರುಳನ್ನು ಬಿಟ್ಟರೆ

ಎನಗಿನ್ನು ಗತಿ ಇಲ್ಲ, ನಾಳೆ ನಾಳೇ ಎಂದು

ವರ್ಷಗಳ ಕಳೆದಾಯ್ತು! ನಾಳೆ ಎಂದಿಗೂ ನಾಳೇ!

ಇಂದಿಂದೆ!"[2]

ಈ ರೀತಿ ತೀರ್ಮಾನ ಮಾಡಿರುವಾಗ ಸಿದ್ಧಾರ್ಥನಿಗೆ ಪುತ್ರೋದಯದ ವಿಚಾರ ತಿಳಿಯುತ್ತದೆ. ಪ್ರತ್ರ್ಯೋದಯ ಆತನಿಗೆ ಸಂತೋಷವನ್ನು ತರದೆ ಬದಲಾಗಿ

"ಮತ್ತೊಂದು

ಪಾಶ ಕಬ್ಬಿಣದ ಸರಪಣಿಯ ಬಂಧನ !

ದಿನ ಕಳೆದ ಹಾಗೆಲ್ಲ ಭುವಿಯ ಜಾಲವು

ನಮ್ಮ ಸುತ್ತುವುದೇ ಹೊರತು ಬಿಗಿಬಿಗಿಯುವುದೆ ಹೊರತು

ಬಿಚ್ಚಿಡುವುದು ಎಂಬ ನೆಚ್ಚಿನ ಕಾಣೆ"[3]

ಎಂಬರೀತಿ ಆತನಿಗೆ ಮತ್ತೊಂದು ಬಂಧನವಾಗಿದೆ, ಆದರೂ ಕಠಿಣ ನಿರ್ಧಾರವನ್ನು ತಳೆದಿರುವ ಆತ ಒಂದೆ ಸರಿಯಲು ಒಪ್ಪುತ್ತಿಲ್ಲ, ಬದಲಾಗಿ ತನ್ನ ಕೆಲಸವನ್ನು ನೆರವೇರಿಸಲು ಚೆನ್ನನ ಸಹಾಯವನ್ನು

---

[1] ಮಹಾರಾತ್ರಿ–ಕುವೆಂಪು ಪು.ಸಂ.2, 1995, ಉದಯರವಿ ಪ್ರಕಾಶನ

[2] ಮಹಾರಾತ್ರಿ–ಕುವೆಂಪು ಪು.ಸಂ.5, 1995, ಉದಯರವಿ ಪ್ರಕಾಶನ

[3] ಅದೇ

ಬೇಡುತ್ತಾನೆ. ಚೆನ್ನನು ಸಿದ್ಧಾರ್ಥನ ಈ ಮಾತನ್ನು ಕೇಳಿ ಬೆರಗಾಗಿ ತಾವಿಲ್ಲಿ ಸುಖದಿಂದ ಇಲ್ಲವೇ ಎಂದು ಪ್ರಶ್ನಿಸುತ್ತಾನೆ. ಅದಕ್ಕೆ ಸಿದ್ಧಾರ್ಥ ಹೇಳುವ ಮಾತುಗಳು ಭಾರತೀಯ ಸಮಕಾಲೀನ ಸಂದರ್ಭವನ್ನು ಪ್ರತಿಬಿಂಬಿಸುತ್ತದೆ. ಕುವೆಂಪುರವರ ಸಾಮಾಜಿಕ ಕಳಕಳಿಯನ್ನು ಬುದ್ಧನ ಈ ಮಾತುಗಳಲ್ಲಿ ಕಾಣಬಹುದು.

"ನಾನೊಬ್ಬ ಸುಖಿಯಾದರೇನಾಯ್ತು? ಲೋಕವೇ
ಬೊಬ್ಬರಿಯುತ್ತಿಹುದಲ್ಲ ಬೆಂದು ಬಡತನದಲ್ಲಿ
ಮೌಢ್ಯಾಂಧಕಾರದೊಳು ಸಿಕ್ಕಿ, ದಾರಿಯ ತಪ್ಪಿ,
ಕಾಡುಪಾಲಾಗಿಹಳು ಭರತಾಂಬೆಯು. ಚೆನ್ನ,
ಕಾಡುಪಾಲಾಗಿಹಳು!" [1]

ಸೃಜನಶೀಲ ಲೇಖಕರಾದ ಕುವೆಂಪು ನಮ್ಮ ಕಾಲದ ಶ್ರೇಷ್ಠ ಸಾಮಾಜಿಕ ಚಿಂತಕರು ಹೌದು, ಎಂಬುದನ್ನು ಸಿದ್ಧಾರ್ಥನ ಈ ಮಾತುಗಳಿಂದ ನಾವು ಅರಿಯಬಹುದು,

ಸಿದ್ಧಾರ್ಥನು ವೃದ್ಧ, ರೋಗಿ, ಹೆಣ ಮತ್ತು ಯೋಗೀಶನೊಬ್ಬನನ್ನು ನೋಡಿ ಈ ಎಲ್ಲಾ ವಿಷಯಗಳಿಗೆ ಕಾರಣ, ಸತ್ಯವನ್ನು ಹುಡುಕುವ ಕಾರಣದಿಂದ ಗೃಹತ್ಯಾಗಮಾಡಲು ನಿರ್ಧರಿಸಿದ್ದಾನೆ. ಗಟ್ಟಿ ನಿರ್ಧಾರವನ್ನು ಮಾಡಿರುವ ಸಿದ್ಧಾರ್ಥ ಅಂದಿನಿರುಳು ಚೆನ್ನನ ಸಹಾಯವನ್ನು ಪಡೆದು ಹೊರಡಲು ಸಿದ್ಧನಾಗಿದ್ದಾನೆ.

ಸಿದ್ಧಾರ್ಥ ಇಂದು ಯಾವ ಅಡ್ಡಿ ಬಂದರೂ ನಿಲ್ಲದೆ ಅರಮನೆ ತೊರೆದು ಹೋಗುವ ನಿರ್ಧಾರ ಮಾಡಿದ್ದಾನೆ, ಈ ಮೊದಲು ತಾಳಿದ ನಿರ್ಧಾರ ಬೇರೆ ಬೇರೆ ಕಾರಣಗಳಿಗಾಗಿ ಕಾರ್ಯಗತವಾಗಿಲ್ಲ ಎಂಬ ಅರಿವು ಆತನಿಗಿದೆ. ಆದ್ದರಿಂದಲೇ ಇಂದು ಆತ ಭಾವನಾತ್ಮಕ ಸಂಬಂಧ ಕಡಿದುಕೊಳ್ಳುವ ಕಠಿಣ ನಿರ್ಧಾರಮಾಡಿದ್ದಾನೆ. ಹೀಗೆ ಮನಸ್ಸನ್ನು ದೃಢ ಮಾಡಿಕೊಳ್ಳಲು ಪ್ರಯತ್ನಿಸಿದರೂ ಮಗ, ಹೆಂಡತಿಯನ್ನು ನೋಡುವ ಹಂಬಲವನ್ನು ಆತ ಮೀರಲಾಗಿಲ್ಲ ಕಡೆಯ ಸಲ ನೋಡಿ ಬರುವೆ ಎಂದು ಆತ ಯಶೋಧರೆಯ ಅಂತಃಪುರಕ್ಕೆ ಹೋಗುತ್ತಾನೆ. ಎಲ್ಲಾ ಮಲಗಿರುವಾಗ ಕತ್ತಲಿನಲ್ಲಿ ಪ್ರವೇಶಮಾಡಿ ಮಗನನ್ನು ಮನಸಾರೆ ನೋಡುತ್ತಾನೆ; ಮುಟ್ಟಲಾರ, ಮುಟ್ಟದಿರಲಾರ, ಮಗುವಿನ ಆಕರ್ಷಣೆಯ ಸೆಳೆತದಿಂದ ತಪ್ಪಿಸಿಕೊಳ್ಳುವ ಎಚ್ಚರದಲ್ಲೇ ಮಗುವನ್ನು ನೋಡಿ ಆನಂದಿಸುತ್ತಾನೆ, ಕಡೆಗೆ ಯಶೋಧರೆಯ ಕಡೆ ತಿರುಗಿ

[1] ಮಹಾರಾತ್ರಿ–ಕುವೆಂಪು ಪು.ಸಂ.7, 1995 ಉದಯರವಿ ಪ್ರಕಾಶನ

"ನಿದ್ರಿಸು, ಯಶೋಧರಾ, ನಿದ್ರಿಸೆಲೆ ತಾಯಿ;

ಇಂದು ನಾನಿನ್ನ ಸುತ, ಪತಿಯಲ್ಲ, ಪತಿಯಲ್ಲ !

ನೀನೆನಗೆ ದೇವತೆ, ನಿನ್ನ ಬಳಿನಾ ಸಾರೆ;

ನಿನ್ನ ನಾನಿನ್ನೊಲಿಯೆ; ಭಕ್ತಿಯಂ ಪೂಜಿಸುವೆ" [1]

ಸಿದ್ಧಾರ್ಥನ ಈ ಮಾತುಗಳನ್ನು ನೋಡಿದಾಗ ರಾಮಕೃಷ್ಣ ಪರಮಹಂಸರ ನೆನಪು ಬರುತ್ತದೆ. ಪರಮಹಂಸರು ತಮ್ಮ ಪತ್ನಿಯನ್ನು ತಾಯಿಯಂತೆ ಭಾವಿಸಿದ್ದವರು, ಪರಮಹಂಸರ ಪ್ರಭಾವ ಕುವೆಂಪು ಅವರ ಮೇಲೆ ಆಗಿರುವುದನ್ನು ಕಾಣಬಹುದು ಏಕೆಂದರೆ ಕುವೆಂಪುರವರು ಈ ನಾಟಕವನ್ನು ರಚಿಸುವ ಕಾಲಕ್ಕೆ ರಾಮಕೃಷ್ಣ ಆಶ್ರಮದಲ್ಲಿದ್ದರು. "ಸಿದ್ದೇಶ್ವರಾನಂದರ ಪ್ರಭಾವ ಅವರ ಮೇಲೆ ಗಾಢವಾಗಿದ್ದ ದಿನಗಳಿವು. ಸಮಕಾಲಿನ ಭಾರತದ ಮೌಢ್ಯದ ವಿರುದ್ಧ ಹೋರಾಡುವ ದನಿಯೆತ್ತುವ ಹಂಬಲದ ಜೊತೆಜೊತೆಗೆ ಕೌಟುಂಬಿಕ ಬಂಧನಕ್ಕೆ ಒಳಗಾಗದೆ ಮಹತ್ವಾಕಾಂಕ್ಷೆಗೆ ತನ್ನನ್ನು ಒಪ್ಪಿಸಿಕೊಳ್ಳುವ ಅಪೇಕ್ಷೆಯು ಆಗ ಕುವೆಂಪು ಅವರಲ್ಲಿದ್ದಂತೆ ತೋರುತ್ತದೆ. ಸಿದ್ಧಾರ್ಥನ ಒಳತೋಟಿಯ ಮೂಲಕ ಕುವೆಂಪು ತಮ್ಮ ಮನಸ್ಥಿತಿಯನ್ನು ದೃಢಪಡಿಸಿಕೊಳ್ಳುವ ರೀತಿಯಾಗಿಯೂ ಈ ಚಿತ್ರಣವಿದೆ" [2]

ಮಗ ಮತ್ತು ಹೆಂಡತಿಯನ್ನು ನೋಡೀ ಆತ ಪೂರ್ವನಿಗದಿಯಂತೆ ಕುದುರೆಯ ಸಮೇತ ಸಿದ್ದವಾಗಿರುವ ಚೆನ್ನನ ಕಡೆಗೆ ತೆರಳುತ್ತಾನೆ ಆ ಸಂದರ್ಭಲ್ಲಿ ಮಾರ ಎದುರಾಗಿ ಸಿದ್ಧಾರ್ಥನನ್ನು ತಡೆಯುವ ಪ್ರಯತ್ನ ಮಾಡುತ್ತಾನೆ. ನೀನು ಹೊರಡುವುದನ್ನು ಬಿಟ್ಟು ಬಂದರೆ ನಿನಗೆ ಈ ಸಂಪೂರ್ಣ ಧರೆಯನ್ನು ನೀಡುವೆ ಸರ್ವ ಸಾಮ್ರಾಜ್ಯಕ್ಕೆ ಅಧಿಕಾರಿಯಾಗಿ ಪಟ್ಟಕಟ್ಟಿವೆ ಎಂದು ಆಸೆಯನ್ನು ತೋರಿಸುತ್ತಾನೆ. ಆದರೆ ಸಿದ್ಧಾರ್ಥ ಹೊರಡುತ್ತಿರುವುದು ಯಾವುದೋ ಸಂಪತ್ತು ಅಧಿಕಾರಗಳಿಸುವುದಕ್ಕಾಗಿ ಅಲ್ಲ, ಬದಲಾಗಿ

"ಪೊರಮಡುವುದೀ

ಭೋಗಸಾಮ್ರಾಜ್ಯಕ್ಕಲ್ಲ,

ದೂರ, ಮುಕ್ತಿ ಸಾಮ್ರಾಜ್ಯಕ್ಕೆ, ಬ್ರಹ್ಮಾಂಡ

ದಲ್ಲಿರುವ ಪರಮತಮ ಪದವಿಗಾಗಿಳಸುತಿಹೆ,

---

[1] ಮಹಾರಾತ್ರಿ-ಕುವೆಂಪು ಪು.ಸಂ.18, 1995 ಉದಯರವಿ ಪ್ರಕಾಶನ

[2] ಕುವೆಂಪು ನಾಟಕಗಳ ಅಧ್ಯಯನ, ನರಹಳ್ಳಿ ಬಾಲಸುಬ್ರಮಣ್ಯಂ, ಪು.ಸಂ.111, 2002 ಅಂಕಿತ ಪುಸ್ತಕ ಪ್ರಕಾಶನ

ಸರ್ವಸೃಷ್ಟಿಯ ಹರ್ಷಕ್ಕಾಗಿಳೆಸುತ್ತಿರುವೆ,

ಸರ್ವಜೀವರ ಶಾಂತಿಗಾಗಳಿಸುತ್ತಿರುವೆ.

ನನ್ನ ಮುಕ್ತಿಯನ್ನೊಂದ ನಾನೆಂದು ಬಯಸೆ"[1]

ಈ ಮಾತುಗಳ ಮುಖಾಂತರ ಸಿದ್ಧಾರ್ಥನ ಧೋರಣೆ ಏನು ಎಂಬುವುದು ಅರಿವಾಗುತ್ತದೆ. ಮುಂದುವರೆದು ಮಾರ ಸಂಸಾರಕ್ಕೆ ಹೆದರಿ ಓಡಿಹೋಗುತ್ತಿದ್ದಿಯೇ ಹೇಡಿ ಎಂದೆಲ್ಲಾ ಹೀಯಾಳಿಸಿ ಆ ಮುಖಾಂತರ ಆತನನ್ನು ತಡೆಯುವ ಪ್ರಯತ್ನ ಮಾಡುತ್ತಾನೆ. ಆದರೂ ದೃಢ ನಿರ್ಧಾರವನ್ನು ಮಾಡಿರುವ ಸಿದ್ಧಾರ್ಥ.

"ಬೈಯದಿರು, ಮಾರಾ, ಬೈಯದಿರು.

ಕಡಲಾಗಿ ಹಿಂತಿರುಗಲೆಂದೇ ಹನಿಯಾಗಿ

ಹೊರಟಿಹೆನು. ಹನಿಯೊಂದು ಎನಿತು ಕೊಳಕೊಡ್ಡಂ

ತೊಳೆಯ ಬಲ್ಲುದು ಮಾರ?"[2]

ಎಂದು ಸಮರ್ಪಕ ಉತ್ತರ ನೀಡುತ್ತಾನೆ. ಅನಂತರ ಮಾರ ಆತನನ್ನು ತಡೆಯುವ ಪ್ರಯತ್ನದಲ್ಲಿ ವಿಫಲನಾಗಿ ಹಿಂತಿರುಗುತ್ತಾನೆ.

ಸಿದ್ಧಾರ್ಥ ನನ್ನ ನೆಚ್ಚಿನ ಸೇವಕನಾದ ಚೆನ್ನಜ್ಜನ ಜೊತೆ ನೆಚ್ಚಿನ ಕುದುರೆ ಕಂಥಕನನ್ನು ತೆಗೆದುಕೊಂಡೂ, ಭವಬಂಧನದಿಂದ ದೂರಾಗುತ್ತಾನೆ. ಆನಂತರ ಮಲಗಿರುವ ಚೆನ್ನಜ್ಜನನ್ನು ಬಿಟ್ಟು ಹೊರಡುತ್ತಾನೆ. ಇನ್ನೂ ಮುಂದುವರಿದು ನೆಚ್ಚಿನ ಕುದುರೆ ಕಂಥಕನನ್ನು ವಾಪಸ್ಸು ಕಳುಹಿಸುತ್ತಾನೆ. ಇದು ಹಂತಹಂತವಾಗಿ ಎಲ್ಲಾ ಬಂಧನಗಳಿಂದ ವಿಮುಕ್ತಿ ಹೊಂದಿದುದರ ಸಂಕೇತವಾಗಿ ಕಂಡು ಬರುತ್ತದೆ.

ಒಟ್ಟಾರೆಯಾಗಿ ಜಗತ್ತಿನ ನೋವು ನಲಿವುಗಳಿಗೆ, ಮೇಲು ಕೀಳುಗಳಿಗೆ ಕಾರಣವನ್ನು ಹುಡುಕಲು ಸಿದ್ಧಾರ್ಥನ ಮನಸ್ಸು ಸಿದ್ಧವಾಗಿದ್ದು, ಆ ಒಂದು ಸಾಧನೆಯನ್ನು ಮಾಡಲು ಎಲ್ಲ ಅಡ್ಡಿ ಆತಂಕಗಳನ್ನು ನಿವಾರಿಸಿಕೊಂಡು ಮುನ್ನುಗ್ಗುತ್ತಾನೆ ಆತನಿಗೆ ತನ್ನ ಕ್ಷೇಮಕ್ಕಿಂತ ಮುಖ್ಯವಾಗಿ ಜಗದ ಕ್ಷೇಮ ಮಹತ್ವವನ್ನು ಪಡೆದಿದೆ, ಈ ಎಲ್ಲಾ ಕಾರಣಗಳಿಂದ ಆತ ರಾತ್ರೋರಾತ್ರಿ ಭವಬಂಧನದಿಂದ ದೂರಾಗುತ್ತಾನೆ. ಆ ರಾತ್ರಿಯೇ ಮಹಾರಾತ್ರಿ ಎಂದು ಕರೆಯಲ್ಪಟ್ಟಿದೆ.

---

[1] ಮಹಾರಾತ್ರಿ – ಕುವೆಂಪು ಪು.ಸಂ.20, 1995 ಉದಯ ರವಿ ಪ್ರಕಾಶನ

[2] ಮಹಾರಾತ್ರಿ – ಕುವೆಂಪು ಪು.ಸಂ.22, 1995 ಉದಯ ರವಿ ಪ್ರಕಾಶನ

ಈ) ಮಾಸ್ತಿಯವರ 'ಯಶೋಧರಾ'

ಮಾಸ್ತಿಯವರ 'ಯಶೋಧರಾ' ನಾಟಕವು ಗೌತಮನ ಬದುಕನ್ನು ಆತನ ಮಡದಿ ಯಶೋಧರೆಯ ನೆಲೆಯಿಂದ ಕಾಣಿಸುತ್ತದೆ. ಈ ನಾಟಕಕಕ್ಕೆ ಯಶೋಧರೆಯೇ ಕೇಂದ್ರ ಪಾತ್ರ.

ಸಾಮಾನ್ಯವಾಗಿ ಬುದ್ಧನ ನಾಟಕಗಳೆಲ್ಲವೂ ಸಿದ್ಧಾರ್ಥನು ಚೆನ್ನನೊಡನೆ ನಗರ ಸಂಚಾರಕ್ಕೆ ಹೋದಾಗ ರೋಗಿ, ಮುಪ್ಪಿನವನ, ಸಾವು, ಈ ದೃಶ್ಯವನ್ನು ನೋಡಿದಾಗ ಅವನ ಮನಸ್ಸು ವೈರಾಗ್ಯದತ್ತ ತಿರುಗಿ ಚೆನ್ನನೊಡನೆ ಮನೆಬಿಟ್ಟು ಹೋಗುವ ಸನ್ನಿವೇಶವನ್ನು ತಿಳಿಸುತ್ತದೆ. ಆದರೆ ಮಾಸ್ತಿಯವರ 'ಯಶೋಧರಾ' ನಾಟಕವು ಅದರ ಮುಂದುವರೆದ ಭಾಗದ ಕಡೆ ಬೆಳಕು ಚೆಲ್ಲುವಂತಿದೆ. ಬುದ್ಧನು ಮನೆ ಬಿಟ್ಟು ಹೋಗಿ ಹತ್ತು ವರುಷ ಕಳೆದು, ಅನಂತರದ ಸನ್ನಿವೇಶವನ್ನು ಈ ನಾಟಕ ಪ್ರತಿನಿಧಿಸುವಂತಿದೆ.

ಇಲ್ಲಿ ಮಾಸ್ತಿಯವರು ಧರ್ಮದ ಹಿನ್ನಲೆಯಲ್ಲಿ 'ಯಶೋಧರಾ' ನಾಟಕವನ್ನು ಚಿತ್ರಿಸಿದ್ದಾರೆ, ರಾಹುಲ ತನ್ನ ತಂದೆಯ ಬಗ್ಗೆ ತಿಳಿದು ಅವನನ್ನು ಮತ್ತೆ ಕರೆದುಕೊಂಡು ಬರುವುದಾಗಿ ತನ್ನ ಮನದ ಇಂಗಿತವನ್ನು ತಾಯಿಯಲ್ಲಿ ನಿವೇದಿಸಿಕೊಳ್ಳುತ್ತಾನೆ. ಇದಕ್ಕೂ ಮೊದಲು 'ಯಶೋಧರಾ' ಒಂದು ಕನಸನ್ನು ಕಂಡಿರುತ್ತಾಳೆ ಆಗ ಸಿದ್ಧಾರ್ಥ ಮನೆಬಿಟ್ಟು ಹೋಗಿರುತ್ತಾನೆ. ಈಗ ಮತ್ತದೇ ಕನಸನ್ನು ಕಾಣುತ್ತಾಳೆ ಎಲ್ಲಿ ನನ್ನ ಮಗ, ಗಂಡನ ಹಾಗೆ ಮನೆ ಬಿಟ್ಟು ಹೋಗುತ್ತಾನೋ ಎಂಬ ಶಂಕೆಯನ್ನು ಅಂಜಿಕೆಯಲ್ಲಿ ವ್ಯಕ್ತಪಡಿಸುತ್ತಾಳೆ. ಅಂಬಿಕೆಯು ಯಶೋಧರಾಗೆ ಸಾಂತ್ವಾನವನ್ನು ಹೇಳಿ, ರಾಜನಲ್ಲಿ, ರಾಹುಲ ತಂದೆಯನ್ನು ಕರೆತರುವ ವಿಚಾರವನ್ನು ತಿಳಿಸುತ್ತಾಳೆ. ಆಗ ರಾಹುಲ ರಾಜನಲ್ಲಿ ನನ್ನ ತಾಯಿ, ತಂದೆ ಬರುವವರೆಗೂ ಅಳುತ್ತಲೇ ಇರುತ್ತಾಳೆ. ಅದಕ್ಕಾಗಿ ಕರೆತರುತ್ತೇನೆ. ಎಂದು ಭಿನ್ನವಿಸಿಕೊಳ್ಳುತ್ತಾನೆ, ಆಗ ರಾಜ ಅಂಬಿಕೆಯೊಂದಿಗೆ ರಾಹುಲನನ್ನು ಕಳುಹಿಸಲು ಒಪ್ಪುತ್ತಾನೆ. ಆಗ ಯಶೋಧರಾ ನಾನೇ ಹೋಗುತ್ತೇನೆ, ರಾಹುಲನನ್ನು ಕಳುಹಿಸಬೇಡಿ ಎಂದು ಹೇಳುತ್ತಾಳೆ. ಆಗ ರಾಜ

"ಸನ್ಯಾಸಿಯಾದವನು ಸತಿಯ ನೋಡುವ ಮಾತು ಸಂಪ್ರದಾಯಕೆ ವಿರೋಧ" [1]

ಎಂದು ಹೇಳುತ್ತಾನೆ, ಅಂದರೆ ಮಾಸ್ತಿಯವರು, ಧರ್ಮದ ತಳಹದಿಯಲ್ಲಿ ನಾಟಕವನ್ನು ಚಿತ್ರಿಸುತ್ತಿರುವಂತೆ ಕಾಣುತ್ತಿದೆ, ಆಗ ಯಶೋಧರಾ ರಾಮಾಯಣದಲ್ಲಿ ಸೀತೆ ರಾಮನೊಂದಿಗೆ ಕಾಡಿಗೆ ಹೋಗಿ ಸನ್ಯಾಸ ಸ್ವೀಕರಿಸಿದ್ದ ರೀತಿ ನಾನು ಸಿದ್ಧಾರ್ಥನಲ್ಲಿಗೆ ಹೋಗುತ್ತೇನೆ. ಎಂದಾಗ ರಾಜ

---

[1] ಯಶೋಧರಾ – ಮಾಸ್ತಿವೆಂಖಟೇಶ ಅಯ್ಯಂಗಾರ್ ಪು.ಸಂ.19, 2008, ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಜೀವನ ಕಾರ್ಯಾಲಯ ಟ್ರಸ್ಟ್.

ಈಗ ನೀನಿರುವ ರೀತಿಯೂ ಸಹ ಸನ್ಯಾಸವ್ವೇ ಎಂದು ಹೇಳಿ ಅಂಜಿಕೆಯೊಂದಿಗೆ ರಾಹುಲನನ್ನು ಬುದ್ಧನಿರುವಲ್ಲಿಗೆ ಕಳುಹಿಸುತ್ತಾರೆ.

ಇಲ್ಲಿ ರಾಹುಲನು ತಂದೆಯನ್ನು ಕರೆತರುವ ಉದ್ದೇಶವೆಂದರೆ ಯಶೋಧರಾ ಸಂತೋಷದಿಂದ ಇರಬೇಕು. ಎಂಬ ಇಂಗಿತವಾಗಿತ್ತು.

ಇಲ್ಲಿ ರಾಹುಲ ತಂದೆ ತಾಯಿಯನ್ನು ಒಂದುಗೂಡಿಸುವ ಹಾಗೆ ಮಾಸ್ತಿಯವರು ಚಿತ್ರಿಸಿದ್ದಾರೆ. ಈ ಕಲ್ಪನೆಯನ್ನು ಬೇರೆ ನಾಟಕದಲ್ಲಿ ನಾವು ನೋಡುವುದಿಲ್ಲ. ರಾಹುಲ ತನ್ನ ತಂದೆ, ತಾಯಿಯ ಬಗ್ಗೆ ಇಟ್ಟಿರುವ ಮಮತೆಯನ್ನು ನಾಟಕ ಚಿತ್ರಿಸುತ್ತದೆ.

ಇಬ್ಬರೂ ಶ್ರಾವಸಿಯ ನಗರಕ್ಕೆ ಬಂದರು, ಅಲ್ಲ ಮಾನಂದನನ್ನು ಎದುರುಗೊಂಡು, ಅವರ ಪರಿಚಯವನ್ನ ರಾಹುಲನೇ ಮಾಡಿಕೊಂಡನು. ಮಾನಂದ ಅವರನ್ನು ಜೇತವನದಲ್ಲಿ ಬುದ್ದನು ಕುಳಿತು ಉಪದೇಶ ಮಾಡುತ್ತಿದ್ದ ಸ್ಥಳಕ್ಕೆ ಕರೆದುಕೊಂಡು ಹೋದನು. ಅಲ್ಲಿ ಬುದ್ಧನ ಉಪದೇಶವನ್ನು ಇವರಿಬ್ಬರೂ ಕೇಳುತ್ತಿದ್ದರು. ಅಲ್ಲಿಗೆ ಬಂದ ಅಂಬಾ ನಮ್ಮ ಮನೆಗೆ ಬಂದು ಆತಿಥ್ಯ ಸ್ವೀಕರಿಸಬೇಕೆಂದು ಕೇಳಿಕೊಂಡಳು ಬುದ್ಧ ಒಪ್ಪಿಗೆ ನೀಡಿದ. ಏಕೆಂದರೆ ಬೌದ್ಧ ಧರ್ಮದ ಪ್ರಕಾರ ಪ್ರೀತಿಯಿಂದ ನೀಡಿದ ಆತಿಥ್ಯವನ್ನು ಸ್ವೀಕರಿಸುವುದು ಅದನ್ನು ತಿರಸ್ಕರಿಸುವ ಹಾಗಿಲ್ಲ. ಏಕೆಂದರೆ ಪ್ರಪಂಚದ ಎಲ್ಲಾ ಜೀವಿಯು ಒಂದೇ ಎಂಬ ಭಾವನೆ ಆ ಧರ್ಮದ ಸಾರವಾಗಿದೆ. ನಂತರ ಮಾನಂದ ಉತ್ತರದ ಕೋಸಲದ ನಾಡಿಂದ ತಮ್ಮಲ್ಲಿ ಮನವಿ ಮಾಡಲಪೇಕ್ಷಿಸಿ ಬಂದಿರುವ ವಿಚಾರವನ್ನು ತಿಳಿಸುತ್ತಾನೆ. ಆಗ ಬುದ್ಧನು.

"ಬಹು ಸಂತೋಷ ಉತ್ತರದ ಕೋಶಲವು ನಮ್ಮ ಜನ್ಮದ ನಾಡು" [1]

ಎಂಬ ಅಭಿಮಾನವನ್ನು ವ್ಯಕ್ತಪಡಿಸುತ್ತಾನೆ, ಅಂದರೆ ಮಾಸ್ತಿಯವರು ಇಲ್ಲಿ ಸಿದ್ಧಾರ್ಥನನ್ನು ವಿಭಿನ್ನವಾಗಿ ಚಿತ್ರಿಸಿದ್ದಾರೆ. ಸನ್ಯಾಸಿಯಾದವನು ಯಾವುದೇ ಮೋಹ, ಮಮತೆಗೆ ಒಳಗಾಗಬಾರದು. ಎಲ್ಲವನ್ನು ತ್ಯಾಗಮಾಡಿ ಹೊರಬಂದವನು, ಮತ್ತೆ ಸಿದ್ಧಾರ್ಥ ತನ್ನ ಜನ್ಮಭೂಮಿಯ ಬಗ್ಗೆ ಪ್ರೀತಿಯನ್ನು, ವ್ಯಕ್ತಪಡಿಸುವಂತೆ ಮಾಸ್ತಿಯವರು ಚಿತ್ರಿಸಿದ್ದಾರೆ. ಅಲ್ಲದೇ ತನ್ನ ವಂಶದ ಬಗ್ಗೆ ಸಿದ್ಧಾರ್ಥ ಗೌರವವನ್ನು ವ್ಯಕ್ತಪಡಿಸುವಂತೆ ಮಾಸ್ತಿಯವರು ಚಿತ್ರಿಸಿದ್ದಾರೆ. ಜ್ಞಾನವನ್ನುಪಡೆದ ಬುದ್ಧ ಪ್ರಪಂಚದ ಸಮಸ್ತ ಜನರು ಒಂದೇ ಎಂಬ ಮನೋಸ್ಥಿತಿಯುಳ್ಳವನು. ಆದರೆ ಮಾನಂದ ಉತ್ತರ ಕೋಸಲದ ನಾಡಿಂದ ಬಂದಿರುವ ವಿಚಾರ ಹೇಳಿದಾಗ ಬುದ್ಧ ತನಗರಿವಿಲ್ಲದೆಯೇ ಸಂತೋಷ ವ್ಯಕ್ತಪಡಿಸುತ್ತಾನೆ. ಇಲ್ಲಿ ಮಾಸ್ತಿಯವರು ಚಿತ್ರಿಸಿರುವ ಬುದ್ಧ ತನ್ನ ಜನರನ್ನು ಮಾತ್ರ ವಿಶೇಷ ಒಲವಿನಿಂದ ಕಾಣುತ್ತಿರುವ ರೀತಿ ವ್ಯಕ್ತವಾಗುತ್ತದೆ.

---

[1] ಯಶೋಧರ –ಮಾಸ್ತಿ ವೆಂಕಟೇಶ ಅಯ್ಯಂಗಾರ್ – 2008, ಮಾಸ್ತಿ ವೆಂಕಟೇಶ್ ಜೀವನ ಕಾರ್ಯಾಲಯ ಟ್ರಸ್ಟ್.

ನಂತರ ರಾಹುಲ ಬಂದು ಬುದ್ಧನನ್ನು ಅಪ್ಪಿಕೊಂಡು ಅಳುತ್ತಾನೆ. ನಂತರ ಅಂಜಿಕೆಯಿಂದ ರಾಹುಲ ತನ್ನ ಮಗನೆಂದು ಬುದ್ಧನಿಗೆ ಅರಿವಾಗುತ್ತದೆ.

ಆಗ ಬುದ್ಧ ಎಲ್ಲರೂ ಕ್ಷೇಮವೇ ಎಂದು ವಿಚಾರಿಸುತ್ತಾನೆ. ನಂತರ ಎಲ್ಲರಿಗೂ ರಾಹುಲ ಬುದ್ಧನ ಮಗನೆಂದು ತಿಳಿದಾಗ ಎಲ್ಲರೂ ಅವನನ್ನು ಮುದ್ದಿಸುತ್ತಾರೆ. ಇಲ್ಲಿ ಬುದ್ಧನಿಗೆ 'ರಾಹುಲ' ತನ್ನ ಮಗನೆಂದು ತಿಳಿದಿದ್ದರೂ ಅದನ್ನು ಎಲ್ಲರ ಮುಂದೆ ವ್ಯಕ್ತಪಡಿಸಬಾರದಿತ್ತು. ಏಕೆಂದರೆ ಬುದ್ಧನ ತತ್ವಕ್ಕೆ ಇದು ವಿರುದ್ಧವಾದಂತಿದೆ. ಅಲ್ಲದೇ ರಾಹುಲ ಬುದ್ಧನನ್ನು ತಾತ ಅಮ್ಮ ಅಳುತ್ತಿದ್ದಾರೆ. ಬಂದು ಅವರನ್ನು ಸಂತೈಸು ಎಂದು ಕೇಳಿದಾಗ ಬುದ್ಧ ಒಪ್ಪುತ್ತಾನೆ. ಈ ಮಾತು ಅಷ್ಟು ಸೂಕ್ತವಾಗಿಲ್ಲ. ಏಕೆಂದರೆ ತನ್ನವರನ್ನು ಬಿಟ್ಟು ಬಂದ ಮೇಲೆ ಅವರ ಮೇಲೆ ಅತಿಯಾದ ಕಾಳಜಿ ಸೂಕ್ತವಲ್ಲ. ಇಲ್ಲಿ ಬುದ್ಧ ಕಾಳಜಿಯನ್ನು ತೋರುತ್ತಿರುವಂತೆ ಮಾಸ್ತಿಯವರು ಚಿತ್ರಿಸಿದ್ದಾರೆ.

ಬುದ್ಧ ಕೋಸಲದ ನಾಡಿಗೆ ಬರಲು ಒಪ್ಪಿದ ನಂತರ ಅಂಬಾಪಾಲಿ ಮನೆಯಲ್ಲಿ ಆತಿಥ್ಯ ಸ್ವೀಕರಿಸಿ ನಂತರ ಹೋಗುವುದಾಗಿ ತಿಳಿಸುತ್ತಾನೆ. ಅಂಬಾಪಾಲಿ, ನಿಮ್ಮ ತಂದೆ ಹೆಂಡತಿ ಕಾದಿರುತ್ತಾರೆ. ನಾಳೆ ಅಲ್ಲಿ ಭಿಕ್ಷೆ ಸ್ವೀಕರಿಸಿ ಎಂದಾಗಿ ಬುದ್ಧ ಒಪ್ಪುವುದಿಲ್ಲ. ಏಕೆಂದರೆ ಬುದ್ಧ ಅಂಬಾಪಾಲಿ ಮನೆಗೆ ಭಿಕ್ಷೆ ಕೇಳಲು ಮೊದಲು ಒಪ್ಪಿದ್ದನು. ಅವನ ತತ್ವದ ಪ್ರಕಾರ ಪ್ರಪಂಚದ ಎಲ್ಲಾ ಜೀವಿಗಳೂ ಸಮಾನರು ಎಂಬ ಸಾರದನ್ವಯ ಬುದ್ಧ ಅಂಬಾಪಾಲಿ ಮನೆಯಲ್ಲಿ ಆತಿಥ್ಯ ಸ್ವೀಕರಿಸಿ ನಂತರ ಮುಂದಿನ ಪಯಣವನ್ನು ಕೊಸಲ ನಾಡಿಗೆ ಮುಂದುವರಿಸುವ ಇಚ್ಛೆ ವ್ಯಕ್ತಪಡಿಸುತ್ತಾನೆ. ಬುದ್ಧ ತನ್ನ ನಾಡು ಜನರ ಬಗ್ಗೆ ವಿಶೇಷ ಪ್ರೀತಿ ವ್ಯಕ್ತಪಡಿಸಿದರೂ, ತತ್ವಕ್ಕೆ ಅನುಗುಣವಾಗಿ ಬುದ್ಧ ನಡೆದುಕೊಳ್ಳಲಿಲ್ಲ ಎಂಬ ಮಾತನ್ನು ಮಾಸ್ತಿಯವರು ಹೇಳಿದ್ದಾರೆ.

ಇಲ್ಲಿ ಮಾಸ್ತಿಯವರು ಕೌಂಡಿನ್ಯ, ಕೌಶಿಕ, ಭಾರದ್ವಾಜ, ವಸಿಷ್ಟರವಾದ ವಿವಾದಗಳು. 'ಯಶೋಧರಾ' ನಾಟಕವನ್ನು ಧರ್ಮದ ವಿಶಾಲ ವ್ಯಾಪ್ತಿಗೆ ಒಯ್ದಿವೆ. ಇಲ್ಲದಿದ್ದರೆ ಕೇವಲ ಯಶೋಧರೆಯ ವಯಕ್ತಿಕ ಸಮಸ್ಯೆಗೆ ಅತಿಯಾದ ಮಹತ್ವ ಉಂಟಾಗಿ ಬುದ್ಧನ ಸಾರ್ವತ್ರಿಕ ವ್ಯಕ್ತಿತ್ವದ ಪರಿಚಯವೇ ಇಲ್ಲವಾಗುತ್ತಿತ್ತು.

ಇಲ್ಲಿ ಬುದ್ಧನು ಜನರಿಗೆ ಉಪದೇಶ ನೀಡುತ್ತಿರುವುದು ಅವನು ಕಂಡ ಸತ್ಯದ ಜ್ಞಾನದಿಂದ ಆದರೆ ಇಲ್ಲಿ ಮಾಸ್ತಿಯವರು ಬುದ್ಧನು ಜಾಬಾಲಿಗಳ ಉಪದೇಶದಿಂದ ಜ್ಞಾನಪಡೆದು ಆ ಜ್ಞಾನದ ಮುಖಾಂತರ ಜನತೆಗೆ ಮುಂದಿನ ಜ್ಞಾನವನ್ನು ಅಂದರೆ ಸತ್ಯವನ್ನು ಮುಂದುವರಿಸುವುದಾಗಿ ಚಿತ್ರಿಸಿದ್ದಾರೆ. ಈ ಮಾತನ್ನು ವಸಿಷ್ಠರ ಮಾತಿನಿಂದ ತಿಳಿಯಬಹುದು. "ಧರ್ಮವನು ತೆಗಳಿದುದು

ಏನು? ಸಿದ್ಧಾರ್ಥನಿಗೆ ನಮ್ಮ ಜಾಬಾಲಿಗಳ ಉಪದೇಶ ಹಿರಿದಾಗಿ ಅದನವನು ಮುಂದುವರಿಸಿಹನು."[1] ಎಂದು ಹೇಳುತ್ತಾರೆ. ಹಾಗೂ ಜಾಬಾಲಿಯ ಮಾತಿನಲ್ಲಿಯೂ ಕಾಣಬಹುದು. "ಈತನುಪದೇಶ ನಮ್ಮವರ ಉಪದೇಶವನ್ನು ಮುಂದುವರಿಸಿಹುದು."[2] ಎಂದು ಹೇಳುತ್ತಾನೆ.

ಆದರೆ ಇಲ್ಲಿ ಬುದ್ಧ ಉಪದೇಶದಿಂದ ಜ್ಞಾನಪಡೆದರೂ ಕೂಡ ಅವನ ನಿಜವಾದ ಜ್ಞಾನ ಅವನ ಸಾಧನೆಯಿಂದ ಬಂದದ್ದು ಎಂದು ತಿಳಿಯಬಹುದು.

ಬುದ್ಧ ಕೊಸಲ ರಾಜ್ಯಕ್ಕೆ ಆಗಮಿಸಿದಾಗ ಊರಿಗೆ ಊರೇ ಬುದ್ಧನನ್ನು ಎದುರುಗೊಳ್ಳಲು ನಿಂತಿತು. ಆಗ ಯಶೋಧರೆ ದೇಹ, ಮನ, ಉಸಿರು, ಎಲ್ಲವೂ ಅವನುಸಿರು. ಮನ ದೇಹದಲ್ಲಿ ಬೆರಸಿ, ಒಂದಾಗಿ ಬಾಳಿನ ಒಂದು ಅರ್ಥವಾಗಿದ್ದವಳು ನಾನು ನೋಡಬಾರದೆ ಎಂದು, ವ್ಯವಸ್ಥೆ ಪಡುತ್ತಿದ್ದಾಳೆ. ಏಕೆಂದರೆ ಮಾಸ್ತಿಯವರು ಧರ್ಮದ ಹಿನ್ನಲೆಯಲ್ಲಿ ಈ ನಾಟಕವನ್ನು ರಚಿಸಿದ್ದಾರೆ. ಈ ಧರ್ಮದ ಪ್ರಕಾರ ಹೆಂಡತಿಯಾದವಳು ಗಂಡ ಸನ್ಯಾಸ ಸ್ವೀಕಾರಮಾಡಿದಾಗ ಎದುರು ನೋಡಬಾರದು ಎಂಬ ತತ್ವವನ್ನು ಅಳವಡಿಸಿಕೊಂಡಿತ್ತು. ಏಕೆಂದರೆ ಅದು ಅಶುಭದ ಸಂಕೇತವಾಗಿತ್ತು, ಯಶೋಧರೆಯೂ ಸಹ ಮತ್ತೇನು ಕೆಡಕು ಸಂಭವಿಸುವುದೋ ಎಂದು ತಿಳಿದು ಬುದ್ಧ ಬಂದಾಗ ಅವನನ್ನು ನೋಡಲು ನಿರಾಕರಿಸುತ್ತಾಳೆ. ಅಂಬಿಕೆಯಲ್ಲಿ ಏನೇನು ನಡೆಯುತ್ತದೆ ಅದನ್ನು ವಿವರಿಸುವ ಎಂದು ಕೇಳಿಕೊಳ್ಳುತ್ತಾಳೆ. ಆಗ ಅಂಬಿಕೆ ಪ್ರತಿಯೊಂದನ್ನು ವಿವರಿಸುತ್ತಾಳೆ. ಮಾಸ್ತಿಯವರು ಯಶೋಧರೆಯ ಚಿಂತನೆಯಲ್ಲಿ ವೈಚಾರಿಕತೆಯನ್ನು ಸಹ ಗುರುತಿಸಿದ್ದಾರೆ. ಅಂದರೆ ಅವಳ ಪ್ರಕಾರ "ಸತಿಯಾದ ನಾರಿ ಸನ್ಯಾಸದಲ್ಲಿ ಪತಿಯ ನೋಡುವುದು ಸಲ್ಲದು ಎಂಬ ಧರ್ಮದಲೆ, ಮತದಲೆ ತಪ್ಪಿಹುದೋ? ನನಗಿಂತೆ ತೋರುತ್ತಿದೆ ಇದು ಯಾವ ಮತ ಯಾವ ಧರ್ಮ?"[3] ಎಂದು ಆಲೋಚಿಸುತ್ತಾಳೆ. ಬುದ್ಧನನ್ನು ಕಾಣುವ ತವಕ ಎಷ್ಟಿದೆಯೆಂದು ಇವಳ ಮಾತಿನಿಂದ ಅರ್ಥವಾಗುತ್ತದೆ. ಅವಳ ಮನಸ್ಸಿನ ವೇದನೆ ಎಷ್ಟಿದೆಯೆಂದರೆ ಧರ್ಮವನ್ನು ಹೀಯಾಳುವಷ್ಟು ಅದನ್ನ ಮಾಸ್ತಿಯವರು ಗುರುತಿಸಿದ್ದಾರೆ.

ನಂತರ ಆನಂದನಲ್ಲಿ ಇಷ್ಟುದಿನ ನನ್ನ ನೆನಪಿಸಿಕೊಳ್ಳುತ್ತಿದ್ದರೆ ಎಂದುಕೊಳ್ಳುತ್ತಾಳೆ, ಅದಕ್ಕೆ ಆನಂದ ಧರ್ಮಿಷ್ಟೆಯಾದ ಸತಿ ಎಂದು ವರ್ಣಿಸುತ್ತಿರುತ್ತಾರೆ ಎಂದು ಹೇಳುತ್ತಾನೆ. ಅಂದರೆ ಬುದ್ಧ ಎಲ್ಲಿ ಉಪದೇಶ ಮಾಡುತ್ತಾನೋ ಅಲ್ಲೆಲ್ಲಾ ತನ್ನ ವೈಯಕ್ತಿಕತೆಯ ಬಗ್ಗೆ ಹೇಳುವಂತಹ ಮಾತುಗಳನ್ನು ಮಾಸ್ತಿಯವರು ಚಿತ್ರಿಸಿದ್ದಾರೆ.

---

[1] ಯಶೋಧರಾ ಮಾಸ್ತಿವೆಂಕಟೇಶ್ ಅಯ್ಯಂಗಾರ್ ಪ್ರ.ಸಂ.43, 2008 ಮಾಸ್ತಿವೆಂಕಟೇಶ್ ಅಯ್ಯಂಗಾರ್ ಜೀವನ ಕಾರ್ಯಾಲಯ.

[2] ಯಶೋಧರಾ ಮಾಸ್ತಿವೆಂಕಟೇಶ್ ಅಯ್ಯಂಗಾರ್ ಪ್ರ.ಸಂ.43, 2008 ಮಾಸ್ತಿವೆಂಕಟೇಶ್ ಅಯ್ಯಂಗಾರ್ ಜೀವನ ಕಾರ್ಯಾಲಯ.

[3] ಅದೇ: ಪ್ರ.ಸಂ.54

ಅಂಜಿಕೆ ಯಶೋಧರೆಗೆ ಬುದ್ಧನನ್ನು ನೋಡಲು ತಪ್ಪಿಲ್ಲವೆಂದು ಹೇಳುತ್ತಿದ್ದಾಳೆ. ಅದಕ್ಕೆ ಯಶೋಧರಾ ಉಪದೇಶಮಾಡುವಾಗ ಮರೆಯಲ್ಲಿ ನಿಂತು ನೋಡುತ್ತೇನೆ ಎಂದು ಹೇಳುತ್ತಾಳೆ. ಅದಕ್ಕೆ ಅಂಜಿಕೆ, ಯಾರಾದರೂ ಇಲ್ಲಿ ಬರಬಹುದು ನಾವು ಹೊಗಳುತಲಿರುವ ಧರ್ಮದಲ್ಲಿ ಇವರು ಬರಬಾರದು ನೋಡಬಾರದು ಎಂಬ ನಿಯಮ ನಿಷೇಧಗಳಿಲ್ಲ ಎಂದರು. ಎಂದಳು ಅಂದರೆ ಬುದ್ಧನ ತತ್ವದ ಪ್ರಕಾರ ಜಗತ್ತಿನ ಎಲ್ಲಾ ಜೀವಿಯೂ ಸರ್ವ ಸಮಾನರು ಎಂಬ ನಿಯಮದ ತಳಹದಿಯಾಗಿತ್ತು.

ಬುದ್ಧ ಯಶೋಧರೆಯನ್ನು ನೋಡಲು ಅರಮನೆಗೆ ಬರುತ್ತಿದ್ದಾನೆ. ಏಕೆಂದರೆ ಯಶೋಧರೆ ಆನಂದನೊಂದಿಗೆ ಪೂರ್ವಾಶ್ರಮದ ಸತಿ ಎಂದು ಕೃಪೆಯನ್ನು ತೋರಿ, ಇಲ್ಲಿಗೆ ಬಂದು ನನ್ನ ಸೇವೆಯನ್ನು ಕೊಳ್ಳಲಿ ಎಂದು ಹೇಳಿರುತ್ತಾಳೆ. ಈ ಮಾತುಗಳು ಬುದ್ಧನ ಕಿವಿಗೆ ತಲುಪಿ ಯಶೋಧರೆಯ ಆಶ್ರಮಕ್ಕೆ ಬಂದಿರಬಹುದು. ಅಂದರೆ ಬುದ್ಧ ಸಂಸಾರದ ವ್ಯಾಮೋಹವನ್ನು ಸಂಪೂರ್ಣವಾಗಿ ತೊರೆದಿಲ್ಲ ಎಂದು ಹೇಳಬಹುದು. ತೊರೆದಿದ್ದರೂ ಎಲ್ಲರೂ ಸಮಾನರು ಎಂಬ ದೃಷ್ಠಿಯಲ್ಲಿ ಬಂದಿರಬಹುದು.

ಯಶೋಧರಾ, ಬುದ್ಧನ ಪಾದವನ್ನು ಮುಟ್ಟಿ ನಮಸ್ಕಾರಮಾಡುವಾಗ ಅಡಿಯ ಮುಟ್ಟಬಹುದೇ? ಎಂದು ಕೇಳುತ್ತಾಳೆ ಆಗ ಬುದ್ಧ ಮುಟ್ಟಿದೊಡೆ ತಪ್ಪಲ್ಲ, ಮುಟ್ಟಿದರೆ ಒಳಿತು ಎಂದು ಹೇಳುತ್ತಾನೆ. ಇಲ್ಲಿ ಬುದ್ಧ ಕೇವಲ ಪತಿಯಾಗಿ ಇಲ್ಲ. ಲೋಕೊದ್ಧಾರದ ಮಹಾತ್ಮನಾಗಿ ಈ ಮಾತನ್ನು ಹೇಳುತ್ತಿದ್ದಾನೆ. ಆಗ ಯಶೋಧರೆ ಪಾದ ಮುಟ್ಟಿ ನಮಸ್ಕಾರ ಮಾಡುತ್ತಾಳೆ.

ನಂತರ ಯಶೋಧರಾ "ಮನೆಬಿಟ್ಟು ವನಕ್ಕೆ ಹೋಗುವ ಕಾರ್ಯವೇನಿತ್ತು?"[1] ಎಂದು ಕೇಳುತ್ತಾಳೆ ಆಗ ಬುದ್ಧನು ಎನ್ನಿಂದ ಅನ್ಯರಿಗೆ ಒಳಿತಾಗಲೆಂಬುದು ಸದ್ಯದ ಕಾರಣ ಎಂದು ಹೇಳುತ್ತಾನೆ. ಮತ್ತೆ ಮುಂದುವರೆದು "ನನ್ನ ಕೈಹಿಡಿದಾಕೆ ಧರ್ಮಿಷ್ಠೆ ದೃಢಚಿತ್ತೆ ಎಂಬುವನ್ನು ಮೊದಲಿಂದ ಬಲ್ಲೆನು"[2] ಎಂದು ಹೇಳುತ್ತಾನೆ. ಅಂದರೆ ಬುದ್ಧನಾದರೂ ಸಂಸಾರದ ನೆನಪು ಅವನ ಮನಸ್ಸಿನಿಂದ ಮಾಸಿಲ್ಲ ಎಂಬ ಅಂಶವನ್ನು ಎತ್ತಿ ಹಿಡಿಯುತ್ತದೆ.

ವೈರಾಗ್ಯದ ಹೆಸರಿನಲ್ಲಿ ಕಠೋರನಾಗದೆ ಬುದ್ಧನು ತನ್ನ ಪೂರ್ವಾಶ್ರಮದ ಪತ್ನಿ ಯಶೋಧರೆಯನ್ನು ಕಾಣುವ ಸನ್ನಿವೇಶ ಹೃದಯವೇಧಕವಾಗಿದ್ದು ಅಲ್ಲಿನ ಸಂಭಾಷಣೆಯಲ್ಲಿ ಮಾಸ್ತಿಯವರ ಪಕ್ವವಾದ ಜೀವನದೃಷ್ಠಿ ಪ್ರತಿಫಲಿಸಿದೆ.

---

[1] ಯಶೋಧರಾ ಮಾಸ್ತಿವೆಂಕಟೇಶ್ ಅಯ್ಯಂಗಾರ್ ಪು.ಸಂ.72, 2008, ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಕಾರ್ಯಾಲಯ ಪು.ಸಂ.74

[2] ಅದೇ

ಸತಿಯನ್ನು ತೊರೆದು ಕಾಡಿಗೆ ಹೋದ ತನ್ನ ವರ್ತನೆಯನ್ನು ಯಶೋಧರೆಗೆ ವಿವರಿಸುವ ಗೌತಮ ಬುದ್ಧನು ಹೇಳುವ ಮಾತಿನ ಹಿಂದೆ ಭಾರತೀಯ ನವೋದಯದ ಆಧ್ಯಾತ್ಮಿಕ ದೃಷ್ಟಿಯೂ ಅಡಗಿದೆಯೆಂಬುದು ಗೋಚರವಾಗದಿರುವಂತಿಲ್ಲ. "ಪತಿಯಾದವನು ಸತಿಯ ಸಮ್ಮತಿಯ ಪಡೆಯದೆ ದಾಂಪತ್ಯವನ್ನು ಮುಗಿಸಬಾರದೆಂಬುದು ಸತ್ಯ. ಆದರೆ ನಮ್ಮಯ ಧರ್ಮದಲ್ಲಿ ವಿರಾಗವೇ ಮುಖ್ಯ. ದಾಂಪತ್ಯ ಕೊನೆಯಾಯಿತೆಂಬ ಮಿತಿ ಗೌಣ. ಸಾಧನವ ಮುಗಿಸಿ ಸತಿ ಇರುವೆಡೆಗೆ ಇರಬಹುದು. ಧರ್ಮದಲ್ಲಿ ಎರಡುಸಿರು ಜೊತೆಗಿರಬಹುದು ಸ್ವಾರ್ಥವನು ಮರೆಯುವರೆ. ಅದು ಇದಕ್ಕೆ ಇದು ಅದಕ್ಕೆ ನೆರವಾಗಿ ಗುರುವಾಗಿ ಶುಭವ ಸಾಧಿಸಬಹುದು"[1]

ಧರ್ಮ ಸೂಕ್ಷವನ್ನು ಅರಿಯುವ ಅಧಿಕಾರ ಯಾರಿಗಿದೆಯೆಂದು ಹೇಳುವ ಬುದ್ಧನ ಮಾತುಗಳು ನೇರವಾಗಿ ಪರಿಣಾಮಕಾರಿಯಾಗಿವೆ. "ಧರ್ಮ ಸೂಕ್ಷ್ಮವನರಿವ ಮನ ತನ್ನ ಸುಖದಿಂದ ಧರ್ಮವನ್ನು ಅಳೆಯಲಾಗದು. ಮೂಲ ಸೂತ್ರವಿದು."[2] ಎಂದು ಹೇಳುವ ಬುದ್ಧನಿಗೆ ಸ್ವಸುಖದ ನೆಲೆಯಲ್ಲಿಯೇ ಉಳಿದಿರುವ ಜೀವಿಗಳನ್ನು ಕುರಿತು ಅಪಾರ ಕರುಣೆಯಿದೆ.

ಯಶೋಧರಾ ಬುದ್ಧನಲ್ಲಿ ಧೀಕ್ಷೆಯನ್ನು ಕೇಳುತ್ತಿದ್ದಾಳೆ ಅದಕ್ಕೆ ಆನಂದ ಹೆಣ್ಣು ಧೀಕ್ಷೆ ಬಯಸಿದರೆ ಧರ್ಮದಲ್ಲಿ ಒಂದು ಕುಂದುಗುತ್ತದೆ ಎಂದು ಹೇಳಿದಾಗ ಬುದ್ಧ "ಸ್ತ್ರೀಯರಿಗೆ ಧೀಕ್ಷೆ ಕೊಡುವೆಡೆ ನಾನು ಮೊಳೆಯಿಟ್ಟ ಧರ್ಮದಾಯುಷ್ಯದಲ್ಲಿ ಅರ್ಧ ಅಳಿವುದು"[3] ಎಂದಾಗ ಯಶೋಧರಾ ಸ್ತ್ರೀ ಎಂದರೆ ಅಷ್ಟು ಅಲ್ಪವಾಯಿತೇ ಎಂದು ಹೇಳುತ್ತಾಳೆ. ಆಗ ಬುದ್ಧ ಸ್ತ್ರೀಗೆ ಇದರಿಂದ ಕೆಡಕು ಉಂಟಾಗುವುದಿಲ್ಲ. ಎಂದು ಸ್ತ್ರೀಯ ಸ್ಥಾನಮಾನವನ್ನು ಉತ್ತುಂಗಕ್ಕೆ ಏರಿಸಿದ್ದಾನೆ. ಸ್ತ್ರೀ ಭಿಕ್ಷುಣಿಯಾಗಲು ಅರ್ಹಳೆ ಆದರೆ ಪುರುಷ ಭಿಕ್ಷುಗಳಿಗೆ ಇದರಿಂದ ಅವರ ಸಾಧನೆಗೆ ಕಷ್ಟವಾಗಬಹುದು. ಹಲವರ ಮನಸ್ಸು ಚಂಚಲವಾಗಬಹುದು ಎಂದು ಹೇಳುತ್ತಾನೆ.

ಮಾಸ್ತಿ ಸ್ತ್ರೀಯನ್ನು ಉನ್ನತ ಸ್ಥಾನಕ್ಕೆ ತೆಗೆದುಕೊಂಡೂ ಹೋಗಿದ್ದರೂ ಪುರುಷ ಪ್ರಧಾನ ವ್ಯವಸ್ಥೆಯನ್ನು ಎತ್ತಿಹಿಡಿದಿದ್ದಾರೆ.

ಆಗ ಯಶೋಧರ ಪುರುಷ ಮಾತ್ರ ಸಾಧನೆ ಮಾಡಿದರೆ ಒಂದು ಯುಗ, ಸ್ತ್ರೀ ಪುರುಷರಿಬ್ಬರೂ ಸೇರಿ ಸಾಧನೆ ಮಾಡಿದರೆ ಅಲ್ಪದರಲ್ಲೇ ದೊಡ್ಡ ಸಾಧನೆ ಮಾಡಬಹುದೆಂದು ಹೇಳುತ್ತಾಳೆ. ಆಗ ಸ್ತ್ರೀ ಕೇವಲ ಅಡುಗೆ ಮನೆಯ ನಾಲ್ಕು ಗೋಡೆಗಳ ಮಧ್ಯದ ವಸ್ತುವಾಗಿದ್ದರೂ

---

[1] ಆಧುನಿಕ ಕನ್ನಡ ನಾಟಕ : ಡಾ॥ ಕೆ.ಮರುಳ ಸಿದ್ದಪ್ಪ ಪು.ಸಂ.155, 1983, ಅಂಕಿತ ಪುಸ್ತಕ ಪ್ರಕಾಶನ

[2] ಅದೇ

[3] ಯಶೋಧರಾ ಮಾಸ್ತಿವೆಂಕಟೇಶ್ ಅಯ್ಯಂಗಾರ್ ಪು.ಸಂ.78, ಮಾಸ್ತಿವೆಂಕಟೇಶ್ ಅಯ್ಯಂಗಾರ್ ಕಾರ್ಯಾಲಯ

ಮಾಸ್ತಿಯವರು. ಯಶೋಧರಾ ನಾಟಕದ ಮೂಲಕ ಕಾಲದ ಸ್ತ್ರೀಗೆ ತನ್ನ ಸ್ವಂತಿಕೆಯನ್ನು ಪಡೆಯುವ ಅಧಿಕಾರವನ್ನು ನೀಡಿದ್ದಾರೆ. ಪುರುಷನಿಗೆ ಸಮಾನವಾಗಿ ಸ್ತ್ರೀಯನ್ನು ಚಿತ್ರಿಸಿದ್ದಾರೆ.

ಆಗ ಬುದ್ಧನು ಧರ್ಮವನ್ನು ಅನುಸರಿಸಲು ಬಹುಕಠಿಣ ನಿಯಮವನ್ನು ಪಾಲಿಸಬೇಕು ಎಂದಾಗ ಯಶೋಧರಾ ಎಲ್ಲದಕ್ಕೂ ಒಪ್ಪುತ್ತಾಳೆ ಇಲ್ಲಿ ಮಾಸ್ತಿ ಸ್ತ್ರೀಯ ಆತ್ಮವಿಶ್ವಾಸ, ದೃಢ ಚಿತ್ತತೆಯನ್ನು ಚಿತ್ರಿಸಿದ್ದಾರೆ. ನಂತರ ಯಶೋಧರ ಕಷಾಯವಸ್ತ್ರವನ್ನು ಧರಿಸಿ, ತನ್ನ ಮಗನಿಗೂ ದೀಕ್ಷೆಯನ್ನು ಕೊಡಿಸಿದಳು. ಯಶೋಧರಾ ಧೀಕ್ಷೆ ಸ್ವೀಕರಿಸಿದರೂ ಕೂಡ ಬುದ್ಧನೊಂದಿಗೆ ಹೋಗಲಿಲ್ಲ. ಇರುವಲ್ಲಿಯೇ ಎಲ್ಲಾ ಆಸೆಗಳನ್ನು ಜಯಿಸಿ, ಸಾಧನೆಯನ್ನು ಮಾಡಿದಳು.

ಇಲ್ಲಿ ಮಾಸ್ತಿಯವರು, ಸನ್ಯಾಸ ಸ್ವೀಕರಿಸಿದ ಗಂಡನನ್ನು ನೋಡುವುದೇ ಅಶುಭ ಎಂದು ನಾಟಕವನ್ನು ಧರ್ಮದ ಹಿನ್ನಲೆಯಲ್ಲಿ ಪ್ರಾರಂಭಿಸಿದರೂ ಕೂಡ ಬರಬರುತ್ತಾ ಅದು ವೈಚಾರಿಕ ನೆಲೆಗಟ್ಟನ್ನು ತಲುಪಿತು. ಯಶೋಧರಾ ತಾನು ಭಿಕ್ಷುಣಿಯ ಧೀಕ್ಷೆ ಸ್ವೀಕರಿಸಿದ ಪ್ರಸಂಗವನ್ನು ಇಲ್ಲಿ ಕಾಣಬಹುದು.

ಒಟ್ಟಾರೆಯಾಗಿ "ಬುದ್ಧನಾದ ಮೇಲೂ ತನ್ನ ಬಾಲ್ಯ ಜೀವನವನ್ನು ಮಮತೆಯಿಂದ ನೆನಪಿಸಿಕೊಳ್ಳುವ ಮಾಸ್ತಿಯವರ ಗೌತಮ ಬುದ್ಧನ ಪಾತ್ರಕಲ್ಪನೆ ಮಹಾಪುರುಷನಿಗೆ ಉಚಿತವಾಗಿದೆ."[1]

[1] ಆಧುನಿಕ ಕನ್ನಡ ನಾಟಕ –ಡಾ॥ ಕೆ.ಮರುಳ ಸಿದ್ದಪ್ಪ ಪು.ಸಂ.155, 1983, ಅಂಕಿತ ಪುಸ್ತಕ ಪ್ರಕಾಶನ.

ಉ) ಮ.ನ.ಜವರಯ್ಯ ಅವರ 'ಜಲ'

ಸಿದ್ಧಾರ್ಥ ಬುದ್ಧನಾಗುವ ವಿಷಯಕ್ಕೆ ಸಂಬಂಧಿಸಿದಂತೆ ಹಲವಾರು ಕಥೆಗಳಿವೆ ಬುದ್ಧನ ಕಾಲದ ಅನಂತರದಲ್ಲಿ ಆತನ ಅನುಯಾಯಿಗಳು ಬುದ್ಧನ ವಿಚಾರಗಳನ್ನು ವಿಧವಿಧವಾಗಿ ಬರೆದಿಟ್ಟಿದ್ದಾರೆ. ಅವುಗಳಲ್ಲಿ ಮುಖ್ಯವಾಗಿ "ಬುದ್ಧನ ಜಾತಕ ಕಥೆಗಳು". ಇವು ಮುಖ್ಯವಾಗಿ ಪಾಲಿ ಭಾಷೆಯಲ್ಲಿವೆ ಬುದ್ಧನ ಜಾತಕ ಕಥೆಗಳು ಮತ್ತು ಇತಿಹಾಸಕಾರರ ಹೇಳಿಕೆಗಳು ಒಂದೇ ರೀತಿಯಾಗಿ ನಮಗೆ ಕಂಡು ಬರುತ್ತವೆ. ಸಿದ್ಧಾರ್ಥನ ಜನನದ ತರುವಾಯ ಆತನ ತಾಯಿ ಮರಣವನ್ನಪ್ಪಿದಳು ಎಂದೂ ಅನಂತರ ಪ್ರಜಾಪತಿ ಗೋತಮಿ ಎಂಬುವವಳು ಸಿಧಾರ್ಥನ ಲಾಲನೆ-ಪಾಲನೆ ಮಾಡಿ ಬೆಳಸಿದಳೆಂದು ತಿಳೀಯುತ್ತದೆ. ಸಿದ್ಧಾರ್ಥ ಜನಿಸಿದಾಗ ಅತನ್ನ ನೋಡಿದ ಜ್ಯೋತಿಷಿಗಳು ಪ್ರಸಿದ್ಧರಾಜ ಇಲ್ಲವೆ, ಪ್ರಸಿದ್ಧ ಸನ್ಯಾಸಿ ಆಗುವನೆಂದು ತಿಳೀಸಿದ್ದರೆಂದೂ ಆ ರೀತಿ ಸನ್ಯಾಅಸಿಯಾಗಲು ಆತ ವೃದ್ಧ, ರೋಗಿ, ಹೆಣ ಮತ್ತು ಭಿಕ್ಷುಕನನ್ನು ಏಕಕಾಲದಲ್ಲಿ ಕಾಣುವುದು ಕಾರಣವಾಗುತ್ತದೆ ಎಂದು ತಿಳಿಸಿರುತ್ತಾರೆ. ಅದೇ ರೀತಿ ಸಿದ್ಧಾರ್ಥ ಚೆನ್ನನ ಜೊತೆ ನಗರ ಪ್ರದಕ್ಷಿಣೆಯನ್ನು ಮಾಡುವ ಸಂದರ್ಭದಲ್ಲಿ ವೃದ್ಧ, ರೋಗಿ, ಹೆಣ ಮತ್ತು ಯೋಗಿಶನೊಬ್ಬನನ್ನು ನೋಡಿದನೆಂದೂ ಇದರಿಂದ ಜಿಗುಪ್ಸೆಗೊಂಡು ಗೃಹತ್ಯಾಗ ಮಾಡಿ ಸನ್ಯಾಸಿಯಾದನೆಂದೂ ಇವು ತಿಳಿಸುತ್ತವೆ. ಇದನ್ನು ನಂಬಿರುವ ಎಲ್ಲರೂ ಇದನ್ನ ನಂಬಿಕೊಂಡು ಉಳಸಿಕೊಂಡು ಬಂದಿದ್ದಾರೆ.

ಮ.ನ.ಜ.ರವರು ತಮ್ಮ ನಾಟಕ 'ಜಲ'ವನ್ನು ಗೌತಮ ಬುದ್ಧನನ್ನು ಕುರಿತ ಒಂದು ಅಜ್ಞಾತ ಕಥಾವಸ್ತು ಎಂಬುದಾಗಿ ತಿಳಿಸಿ ಇತಿಹಾಸದಲ್ಲಿ ನಮೂದಾಗಿರುವ ಕಥೆಗಿಂತ ಬೇರೆಯೇ ಆದ ಕಥೆಯನ್ನು ಈ ನಾಟಕದಲ್ಲಿ ತಿಳಿಸಿದ್ದಾರೆ. ಅವರು ತಿಳಿಸಿರುವ ಕಥೆ ಸತ್ಯಕ್ಕೆ ಹತ್ತಿರವಾದುದೋ? ಇಲ್ಲವೋ? ಎಂಬುದು ಸಂಶೋಧನೆಗಳಿಂದ ದೃಢಪಡಬೇಕಾಗಿದೆ. ನಾಟಕಕಾರರಲ್ಲಿ ಬುದ್ಧನ ಕುರಿತ ಐತಿಹಾಸಿಕ ಕಥೆಯ ಬಗ್ಗೆ ಅನುಮಾನ ಉಂಟಾಗಲು ಅಂಬೇಡ್ಕರರ ಹೇಳಿಕೆಯೇ ಕಾರಣವಾಗಿರಬಹುದು. ಅಂಬೇಡ್ಕರರ 'Buddha and his Dharma' ಎಂಬ ಕೃತಿಯಲ್ಲಿ "ಬುದ್ಧನು, ಒಬ್ಬ ಮೃತ ವ್ಯಕ್ತಿಯನ್ನು, ಒಬ್ಬ ರೋಗಿಷ್ಟನನ್ನು ಮತ್ತೊಬ್ಬ ಅತಿ ವೃದ್ಧನನ್ನು ನೋಡಿದ್ದರಿಂದಲೇ, ಅವನಲ್ಲಿ ವೈರಾಗ್ಯ ಉಂಟಾಯಿತೆಂದು ಸಾಂಪ್ರದಾಯಿಕ ಚರಿತ್ರೆಯ ಉದ್ದಕ್ಕೂ ಹೇಳಿಕೊಂಡು ಬರಲಾಗಿದೆ. ಆದರೆ, ಅವನು ಪರಿವ್ರಾಚಕ ದೀಕ್ಷೆ ತೆಗೆದುಕೊಂಡ ತನ್ನ 21ನೇಯ ವಯಸ್ಸಿನರೆಗೂ, ಸತ್ತವರನ್ನೂ, ರೋಗಿಗಳನ್ನು ವೃದ್ಧರನ್ನು ನೋಡಿಯೇ ಇರಲಿಲ್ಲವೆನ್ನುವ ಈ ಚರಿತ್ರೆಯನ್ನು ನಂಬುವುದಾದರೂ ಹೇಗೆ?" ಎಂದು ತಿಳಿಸಿದ್ದಾರೆ. ಈ ಹೇಳಿಕೆಯಿಂದ ಸ್ಫೂರ್ತಿಗೊಂಡ ಮ.ನ.ಜ ರವರು ಬೇರೆಯದೇ ಆದ ಕಾರಣವನ್ನು ತಿಳಿಸುವ ಪ್ರಯತ್ನಮಾಡಿದ್ದಾರೆ.

ಮ.ನ.ಜ ರವರು ದಲಿತ ಸಂವೇದನೆಯ ಹಿನ್ನಲೆಯಲ್ಲಿ ಬಂದವರಾದ್ದರಿಂದ ಬುದ್ಧನನ್ನು ಕುರಿತ ಈ ನಾಟಕದಲ್ಲಿಯೂ ದಲಿತ ಸಂವೇದನೆಯ ಹಿನ್ನಲೆಯಲ್ಲಿಯೇ ರಚನೆ ಮಾಡಿದ್ದಾರೆ. ಅಂಬೇಡ್ಕರ್‌ರವರು ತಮ್ಮ ಜೀವಮಾನದ ಕೊನೆಯಲ್ಲಿ ಬೌದ್ಧಧರ್ಮದ ಕಡೆ ವಾಲು ಹೋಗಿ ಆ ಧರ್ಮವನ್ನು ಸ್ವೀಕರಿಸಿದ್ದರು ಹೀಗಾಗಿ, ಅಂಬೇಡ್ಕರ ಅನುಯಾಯಿಯಾದ ಮ.ನ.ಜ ರವರು ಬುದ್ಧನ ವಸ್ತುವನ್ನಿಟ್ಟುಕೊಂಡು ದಲಿತ ಸಂವೇದನೆಯನ್ನು ಬೆರಸಿ ನಾಟಕ ರಚನೆಮಾಡಿದ್ದಾರೆ. ಬುದ್ಧನನ್ನು ಕುರಿತ ಕಥಾವಸ್ತು ಮ.ನ.ಜ ರವರಲ್ಲಿ ಬೇರೆಯೇ ಆಗಿದೆ. ಇದನ್ನು ನಾಟಕದ ಆರಂಭದಲ್ಲಿಯೇ ಕಾಣಬಹುದು. ಮೇಳನಾಯಕ ನಾಟಕವನ್ನು ಆರಂಭ ಮಾಡುವ ಸಂದರ್ಭದಲ್ಲಿ ಪ್ರೇಕ್ಷಕರನ್ನು ಕುರಿತು ಕೇವಲ ಮನುಷ್ಯನೊಬ್ಬನ ಸಾವನ್ನು ನೋಡೀ, ಮುಪ್ಪಾದ ವ್ಯಕ್ತಿಯನ್ನು ಕಂಡು, ರೋಗಿಯೊಬ್ಬನ ಯಾತನೆಯನ್ನು ತಿಳಿದು, ಸಿದ್ಧಾರ್ಥ ಗೌತಮನು ಮನಕರಗಿ ವೈರಾಗ್ಯ ಬಂದು ಸರಿ ರಾತ್ರಿಯಲ್ಲಿ ಸತಿ ಸುತರ ಬಿಟ್ಟು ಓಡಿದ ಎಂಬ ಸುಳ್ಳಿನ ಕಥೆಯನ್ನೇ 2,500 ವರ್ಷಗಳಿಂದಲೂ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಬೆಳೆಸಿಕೊಂಡು ಬಂದಿದ್ದಾರೆ. ಅಂತಹವರ ಆ ಹೇಳಿಕೆಗಳನ್ನು ಸುಟ್ಟು ಹಾಕಬೇಕೆಂದು ಹೇಳುತ್ತಾನೆ. ಎಂದು ಹೇಳಿ ಅದಕ್ಕಿಂತ ಬೇರೆಯದೇ ಆದ ಇತಿಹಾಸದ ಪುಟದಿಂದ ಮರೆಯಾಗಿರುವ ನಿಜವಾದ ಕಥೆಯನು ತಿಳಿಸುವುದಾಗಿ ನಾಟಕಕಾರರು ತಿಳಿಸಿದ್ದಾರೆ. ನಿಜವಾಗಿಯೂ ಸಿದ್ಧಾರ್ಥ ಬುದ್ಧನಾಗಲು ಇದುವರೆಗೂ ತಿಳಿದುಕೊಂಡಿರುವ ಕಾರಣ ನಿಜವಾದ ಕಾರಣವಲ್ಲ ಬದಲಾಗಿ ಜಲ ವಿವಾದವೇ ಆತ ಸನ್ಯಾಸತ್ವವನ್ನು ಸ್ವೀಕರಿಸಲು ಕಾರಣ ಎಂಬುದನ್ನು ಸವಿವರವಾಗಿ ಇಲ್ಲಿ ತಿಳಿಸಿದ್ದಾರೆ.

ನಾಟಕದ ಆರಂಭದಲ್ಲಿಯೇ ಶಾಕ್ಯ ಸಂಘದ ಪ್ರಭಾವವನ್ನು ನಾಟಕಕಾರರು ತಿಳಿಸಿದ್ದಾರೆ. ಇಲ್ಲಿ ರಾಜನಿಗಿಂತ ಮುಖ್ಯವಾದುದು ಶಾಕ್ಯ ಸಂಘ. ಶಾಕ್ಯ ಸಂಘದ ತೀರ್ಮಾನಗಳಂತೆಯೇ ನಿಯಮಗಳಂತೆಯೇ ಅಲ್ಲಿನ ಆಡಳಿತ ನಡೆಯಬೇಕು. ಅಲ್ಲಿನ ರಾಜ ಶಾಕ್ಯ ಸಂಘದ ಅಧ್ಯಕ್ಷನಾಗಿದ್ದು ಇತರರು ಸದಸ್ಯರಾಗಿರುತ್ತಾರೆ. ಯಾವುದೇ ಕೆಲಸಗಳನ್ನು ಮಾಡಬೇಕಾದರೂ ಬಹುಮತದ ಆಧಾರದ ಮೇಲೆಯೇ ನಡೆಯಬೇಕು. ರಾಜನನ್ನು ಅಧಿಕಾರಕ್ಕೇರಿಸುವ ಅಥವಾ ಅಧಿಕಾರದಿಂದ ಕೆಳಗಿಳಿಸುವ ಸಾಮರ್ಥ್ಯ ಶಾಕ್ಯ ಸಂಘಕ್ಕಿದೆ. ಮುಂದೆ ರಾಜನಾಗುವಂತಹವನು ಶಾಕ್ಯ ಸಂಘದ ಸದಸ್ಯನಾಗಿರಬೇಕು ಈ ರೀತಿ ಸದಸ್ಯನಾಗಲು ಆತ ಅರ್ಹನೇ ಎಂಬುದನ್ನು ಶಾಕ್ಯ ಸಂಘದ ಸಭೆಯಲ್ಲಿ ತೀರ್ಮಾನಿಸಿ ಪರೀಕ್ಷಿಸಿ ಅನಂತರ ಶಾಕ್ಯ ಸಂಘ ನೀತಿ ಬೋಧನೆ ಮಾಡುವುದರ ಮುಖಾಂತರ ಸದಸ್ಯತ್ವವನ್ನು ನೀಡಲಾಗುತ್ತದೆ. ಶಾಕ್ಯ ಸಂಘದ ಸದಸ್ಯರ ಕರ್ತವ್ಯವಾಗಿರುತ್ತದೆ. ಶಾಕ್ಯದ ನೀತಿ ಸಂಹಿತೆಯ ಪ್ರಕಾರ ಜೀವರಕ್ಷಣೆ, ಜಲರಕ್ಷಣೆ ಮತ್ತು ನೆಲರಕ್ಷಣೆಗಳು ಪ್ರಥಮ ಕರ್ತವ್ಯಗಳಾಗಿರುತ್ತವೆ. ಶಾಕ್ಯ ಸಂಘದ ಸದಸ್ಯರು ಇವುಗಳಿಗಾಗಿ ಪ್ರಾಣತ್ಯಾಗ ಮಾಡಲು ಸಿದ್ಧರಿರಬೇಕು. ಇದರ ಆಧಾರದ ಮೇಲೆ ಸದಸ್ಯರ ಸದಸ್ಯತ್ವ ಮುಂದುವರಿಯುತ್ತದೆ.

ಮುಂದೆ ರಾಜನಾಗಬೇಕಾಗಿದ್ದ ಗೌತಮನು ಶಾಕ್ಯ ಸಂಘದ ಸದಸ್ಯತ್ವವನ್ನು ಪಡೆದುಕೊಳ್ಳಬೇಕಾಗಿರುತ್ತದೆ. ಹಾಗಾಗಿ ಶಾಕ್ಯ ಸಂಘದ ಸಭೆ ಸೇರಿ ಆತನಿಗೆ ಸದಸ್ಯತ್ವ ನೀಡುವ ಬಗ್ಗೆ ಅಭಿಪ್ರಾಯಗಳನ್ನು ಕೋರಲಾಗುತ್ತದೆ. ಆದರೆ ದಾಯಾದಿ ಮತ್ಸರದಿಂದ ಕೂಡಿದ ದೇವದತ್ತನು ಗೌತಮನಿಗೆ ಆ ಅರ್ಹತೆ ಇಲ್ಲ ಎಂದು ವಿವಾದವನ್ನೆಬ್ಬಿಸುತ್ತಾನೆ. ಕೊನೆಗೆ ದೇವದತ್ತನ ಮಾತು ನಿಲ್ಲದೆ ಗೌತಮನಿಗೆ ಸದ್ಸ್ಯತ್ವ ಲಭ್ಯವಾಗುತ್ತದೆ. ಇದು ದೇವದತ್ತನಲ್ಲಿ ಕೋಪ ತೀವ್ರಗೊಳ್ಳಲು ಕಾರಣವಾಗುತ್ತದೆ. ಸದಸ್ಯತ್ವ ಪಡೆದ ಗೌತಮನು ಶಾಕ್ಯರ ನೀತಿ ಸಂಹಿತೆಯಲ್ಲಿರುವ ಜೀವರಕ್ಷಣೆ ನೆಲರಕ್ಷಣೆ, ಜಲರಕ್ಷಣೆಗೆ ಟೊಂಕಕಟ್ಟಿ ನಿಲ್ಲುತ್ತಾನೆ.

ನಾಟಕದಲ್ಲಿ ಜೀವರಕ್ಷಣೆಗೆ ಸಂಬಂಧಿಸಿದಂತೆ ಎರಡು ಘಟನೆಗಳು ಕಾಣಬಹುದು, ಮೊದಲನೆಯದಾಗಿ ದೇವದತ್ತನು ಪಕ್ಕದ ರಾಜ್ಯ ಕೋಲಿಯ ಪ್ರಾಂತ್ಯದ ಹುಡ್ಗಿಯೊಬ್ಬಳನ್ನು ಎಳೆತಂದು ಆಕೆಯ ಮೇಲೆ ಅತ್ಯಾಚಾರ ಮಾಡಲು ಪ್ರಯತ್ನಿಸಿ ಆಕೆ ಒಪ್ಪದಿದ್ದಾಗ ಆಕೆಯನ್ನು ರೋಹಿಣಿ ನದಿಯಲ್ಲಿ ಬಿಸಾಡುತ್ತಾನೆ. ಆವೇಳೆಗೆ ಚೆನ್ನನ ಜೊತೆ ರೋಹಿಣಿ ನದಿಯಲ್ಲಿ ಈಜಲು ಹೋಗಿದ್ದ ಗೌತಮನು ಆಕೆ ಬೇರೆ ಪ್ರಾಂತ್ಯದ ಸ್ತ್ರೀಯಾಗಿದ್ದರೂ ಆಪ್ರಾಂತ್ಯದ ಮೇಲೆ ವೈರತ್ವವಿದ್ದರೂ ನೀರಿನಲ್ಲಿ ಧುಮುಕಿ ಆಕೆಯ ಪ್ರಾಣ ರಕ್ಷಣೆಮಾಡುತ್ತಾನೆ. ಎರಡನೆಯದು ಗೌತಮ ಮತ್ತು ರಣತುಂಗ ಹಾಗೂ ರೈತ ಸ್ನೇಹಿತರು ಪರಸ್ಪರ ಸಮಾಲೋಚನೆಯಲ್ಲಿದ್ದಾಗ ದೇವದತ್ತನು ಬೇಟಿಯ ನೆಪದಲ್ಲಿ ಪಕ್ಷಿಯೊಂದಕ್ಕೆ ಬಾಣ ಪ್ರಯೋಗಮಾಡಿರುತ್ತಾನೆ. ಅದು ಪಕ್ಷಿಯ ರೆಕ್ಕೆಗೆ ತಗುಲಿ ಪಕ್ಷಿಯು ನೆಲಕ್ಕೆ ಉರುಳುತ್ತದೆ. ಇದನ್ನು ಕಂಡ ಗೌತಮ ಕೂಡಲೇ ಪಕ್ಷಿಯನ್ನೆತ್ತಿಕೊಂಡು ತನಗೆ ಗೊತ್ತಿರುವ ಔಷಧೋಪಚಾರ ಮಾಡಿ ಅದರ ಜೀವ ರಕ್ಷಣೆ ಮಾಡುತ್ತಾನೆ.

ನೆಲರಕ್ಷಣೆ ಮತ್ತು ಜಲ ರಕ್ಷಣೆ ಶಾಕ್ಯರ ಸಂಹಿತೆಯ ಮತ್ತೆರಡು ಆಧ್ಯ ಕರ್ತವ್ಯಗಳಾಗಿರುತ್ತದೆ. ಪಕ್ಕದ ಪ್ರಾಂತ್ಯ ಕೋಲಿಯಾಕ್ಕೂ ಇವರ ಪ್ರಾಂತ್ಯ ಕಪಿಲವಸ್ತುವಿಗೂ ಪರಸ್ಪರ ವೈರತ್ವವಿರುತ್ತದೆ. ಕೋಲಿಯಾ ರೋಹಿಣಿ ನದಿಯ ನೀರನ್ನು ಪಡೆಯುವ ಉದ್ದೇಶವನ್ನಿಟ್ಟುಕೊಂಡು ಕಪಿಲ ವಸ್ತುವಿನ ಮೇಲೆ ಆಗಾಗ ದಾಳಿ ಮಾಡುತ್ತಿರುತ್ತದೆ. ಹಾಗಾಗಿ ಕೊಲಿಯ ಪ್ರಾಂತ್ಯದಿಂದ ನೆಲ ಮತ್ತು ಜಲ ರಕ್ಷಣೆಮಾಡಬೇಕಾಗಿರುತ್ತದೆ. ದೇವದತ್ತನು ಧನದತ್ತನ ಮಗ ಧನದತ್ತ ರಾಜನಾಗಿದ್ದು, ಶಾಕ್ಯ ಸಂಘದಿಂದ ಉಚ್ಛಾಟನೆಗೊಂಡಿರುತ್ತಾನೆ. ಹಾಗಾಗಿ ದೇವದತ್ತನಿಗೆ ಶಾಕ್ಯಸಂಘದ ಮೇಲೆ ದ್ವೇಷವಿರುವುದು ಒಂದು ಬಗೆಯಾದರೆ, ತನ್ನ ತಂದೆಯ ದಾಯಾದಿ ಶುದ್ಧೋದನ ರಾಜನಾಗಿರುವುದು, ಆತನ ಮಗನಾದ ಗೌತಮನಿಂದ ಹಲವಾರು ಬಾರಿ ಅವಮಾನಕ್ಕೀಡಾಗಿರುವುದು ಮತ್ತೊಂದು ದ್ವೇಷದ ಬಗೆಯಾಗಿದೆ. ಹಾಗಾಗಿ ಹೇಗಾದರೂ ಮಾಡಿ ಶಾಕ್ಯ ಸಂಘ ಮತ್ತು

ಶುದ್ಧೋಧನ ಗೌತಮರ ಅಧಿಕಾರವನ್ನು ಕೊನೆಗಾಣಿಸಬೇಕೆಂದು ತೀರ್ಮಾನಿಸಿರುತ್ತಾನೆ. ಅದಕ್ಕಾಗಿ ಶಾಕ್ಯ ಸಾಮ್ರಾಜ್ಯದ ಮಹಾಮಂತ್ರಿ ಉದಯಿನ ಮತ್ತು ಶಾಕ್ಯ ಸಾಮ್ರಾಜ್ಯದ ಸೇನಾಪತಿ ಯೋಧನೇತ ಅವರ ಒಡಗೂಡಿ ಕೊಲಿಯಾ ಸಾಮ್ರಾಜ್ಯದ ಸಹಕಾರವನ್ನು ಪಡೆದುಕೊಂಡು ಹಾಕುತ್ತಿರುತ್ತಾನೆ. ಹೀಗಿರುವಲ್ಲಿ ಕೊಲಿಯಾ ರಾಜ್ಯದ ಸೈನಿಕರು ಶಾಕ್ಯ ಸಾಮ್ರಾಜ್ಯದ ರೈತರ ಮೇಲೆ ದಾಳಿಮಾಡಿ ಹೊಡೆದು ಕಳುಹಿಸುತ್ತಾರೆ. ಈ ಸನ್ನಿವೇಶವನ್ನು ಮಹಾಮಂತ್ರಿ, ಸೇನಾನಿ ಮತ್ತು ದೇವದತ್ತ ಮೂವರು ತಮ್ಮ ಅನುಕೂಲಕ್ಕಾಗಿ ಬಳಸಿಕೊಳ್ಳುತ್ತಾರೆ. ಯುದ್ಧ ಸಿದ್ಧತೆಯನ್ನು ಮಾಡಿ ಶಾಕ್ಯ ಸಂಘದ ಅನುಮೋದನೆ ಪಡೆಯಲು ಸಭೆ ಕರೆಯಲಾಗುತ್ತದೆ. ಆದರೆ ಗೌತಮ ಜೀವರಕ್ಷಣೆಯ ಉದ್ದೇಶವನ್ನಿಟ್ಟುಕೊಂಡು ಏಕಾಏಕಿ ಯುದ್ಧ ಘೋಷಣೆ ಮಾಡುವುದು ಬೇಡ ಅದರಿಂದ ಹಲವಾರು ಸಾವು ನೋವುಗಳು ಉಂಟಾಗುತ್ತವೆ. ಎಂದು ತಿಳಿಸಿ, ಮೊದಲಿಗೆ ಮಾತುಕತೆಯ ಮುಖಾಂತರ ಸಮಸ್ಯೆಯನ್ನು ಬಗೆಹರಿಸಿಕೊಳ್ಳೋಣ. ಸಾಧ್ಯವಾಗದಿದ್ದರೆ ಯುದ್ಧದ ಮಾರ್ಗ ಇದ್ದೇ ಇದೆ. ಎಂದು ಶಾಕ್ಯ ಸಂಘಕ್ಕೆ ಮನವರಿಕೆ ಮಾಡುವ ಪ್ರಯತ್ನಮಾಡುತ್ತಾನೆ. ಆದರೆ ಪೂರ್ವನಿಯೋಜಿತದಂತೆ ಮಹಾಮಂತ್ರಿ ಮತ್ತು ಸೇನಾನಿ ಇಬ್ಬರೂ ಕೂಡ ಶುದ್ಧೋದನನ ಮೇಲೆ ಸ್ವಜನ ಪಕ್ಷಪಾತದ ಆರೋಪವನ್ನು, ಗೌತಮನ ಮೇಲೆ ದೇಶದ್ರೋಹದ ಆರೋಪವನ್ನು ಹೊರಿಸಿ ಶುದ್ಧೋದನನನ್ನು ರಾಜಪದವಿಯಿಂದ ಕೆಳಗಿಸಿಳಿಸಿ, ಗೌತಮನ ಮೇಲೆ ವಿಚಾರಣೆ ಆದೇಶಿಸುತ್ತಾರೆ. ದೇಶದ್ರೋಹದ ಆರೋಪವನ್ನು ಹೊತ್ತ ಗೌತಮನಿಗೆ ಮೂರು ಆಯ್ಕೆಗಳನ್ನು ನೀಡುತ್ತಾರೆ.

1. ಶಾಕ್ಯರ ಸೈನಿಕನಾಗಿ ಸದ್ಯದ ಯುದ್ಧದಲ್ಲಿ ಪಾಲ್ಗೊಳ್ಳುವುದು
2. ಶಾಕ್ಯ ಸಾಮ್ರಾಜ್ಯದಿಂದ ಗಡಿಪಾರಾಗುವುದು.
3. ಆತನ ಮನೆತನಕ್ಕೆಲ್ಲ ಬಹಿಷ್ಕಾರ ಹಾಕಿ ಅವರ ಆಸ್ತಿಪಾಸ್ತಿಗಳನ್ನೆಲ್ಲಾ ಮುಟ್ಟುಗೋಲು ಹಾಕಿಕೊಳ್ಳುವುದು.

ಗೌತಮ ಮೊದಲಿಗೆ ಎರಡನೆಯದನ್ನು ಆಯ್ಕೆಮಾಡಿಕೊಳ್ಳುತ್ತಾನೆ. ಆದರೆ ಶಾಕ್ಯ ಸಂಘದವರು ಪಕ್ಕದ ರಾಜ್ಯದವರು ನಿಮಗೆ ಸಂಬಂಧಿಗಳಾದ್ದರಿಂದ ಅವರು ನಮ್ಮ ಮೇಲೆ ಯುದ್ಧ ಸಾರಬಹುದು ಎಂಬ ಭೀತಿಯನ್ನು ವ್ಯಕ್ತಪಡಿಸುತ್ತಾರೆ. ಹಾಗಾಗಿ ಗೌತಮ "ನಾನು ಎಸಗಿರೋ ದೇಶದ್ರೋಹದ ಅಪರಾಧಕ್ಕಾಗಿ, ನನಗೆ ಗಡಿ ಪಾರು ಶಿಕ್ಷೆ ವಿಧಿಸೋದ್ರಿಂದ, ನಾಡಿಗೆ ರಾಜಕೀಯ ತೊಂದರೆಯು ನಾಡಿನ ನನ್ನ ಪ್ರಜಾಮಿತ್ರರಿಗೆ ಯಾವುದೇ ದುಃಖ ದುರಂತಗಳು ಉಂಟಾಗೊದನ್ನ ನಾನೂ ಸಹಿಸೋದಿಲ್ಲ. ಆದ್ದರಿಂದ ನನ್ನ ಪರ್ಯಾಯ ಕೋರಿಕೆ ಏನೂ ಅಂದ್ರೆ, ಸ್ವಯಂ ಪ್ರೇರಣೆಯಿಂದ ನಾನು ಭಿಕ್ಷಾಟನ ಸನ್ಯಾಸ ಸ್ವೀಕಾರ ಮಾಡ್ತೇನೆ ಮತ್ತು ಶಾಕ್ಯ ಸಾಮ್ರಾಜ್ಯವನ್ನು ತೊರೆದು ಹೋಗ್ತೇನೆ.

ಹಾಗೆ ಮಾಡೋದ್ರಿಂದ ನನಗೆ ಗಡಿಪಾರು ಶಿಕ್ಷೆ ವಿಧಿಸಿದಂತೇನೂ ಆಗ್ತದೆ. ದೇಶದ ಯಾವುದೇ ರಾಜಕೀಯ ಸಮಸ್ಯೆಗೂ ಅವಕಾಶವಿರೋದಿಲ್ಲ."1 ಎಂಬ ಪರ್ಯಾಯ ಉಪಾಯವನ್ನು ತಿಳಿಸಿ ಸನ್ಯಾಸ ಸ್ವೀಕರಿಸಿ ಹೊರಟು ಬುದ್ಧನಾದನು.

ಒಟ್ಟಾರೆಯಾಗಿ ಗೌತಮ ಬುದ್ಧನಾಗಲು ಇತಿಹಾಸಕಾರರು ಹೇಳಿದಂತೆ ವೃದ್ಧ, ರೋಗಿ, ಹೆಣವನ್ನು ಕಂಡು ಜಿಗುಪ್ಸೆ ಬಂದು ಹೊರಟಿದ್ದಲ್ಲ. ಬದಲಾಗಿ ಆಂತರಿಕ ಕಲಹದಿಂದ ಜಲರಕ್ಷಣೆಯಲ್ಲಿ ವಿಫಲನಾಗಿ ಶಿಕ್ಷೆಯ ರೂಪದಲ್ಲಿ ಆತ ಸನ್ಯಾಸದೀಕ್ಷೆ ಸ್ವೀಕರಿಸಿದನು ಎಂಬ ವಿಷಯವನ್ನು ಮ.ನ.ಜ ರವರು ತಿಳಿಸಿದ್ದಾರೆ. ಇದು ಈವರೆಗೂ ಒಎಲ್ಲೂ ಕಂಡು ಬರದ ವಿಷಯ ವಸ್ತುವಾಗಿದೆ.

ಅಧ್ಯಾಯ – 5

ಸಾಮ್ಯತೆ ಮತ್ತು ವೈಷಮ್ಯತೆಗಳು

ಕನ್ನಡ ಸಾಹಿತ್ಯದಲ್ಲಿ ನಾಟಕ ಪ್ರಕಾರ ಬೆಳೆದು ಬಂದ ಬಗೆಯನ್ನು ನಾವು ಈಗಾಗಲೇ ನೋಡಿದ್ದೇವೆ. ಕನ್ನಡ ಸಾಹಿತ್ಯದ ನಾಟಕ ಪ್ರಕಾರದಲ್ಲಿ ಬುದ್ಧನನ್ನು ಕೇಂದ್ರವಾಗಿಟ್ಟುಕೊಂಡು ಹಲವಾರು ನಾಟಕಗಳು ರಚನೆಯಾಗಿವೆ. ಆದರೆ ಕೆಲವು ಮಿತಿಗಳಿಗೆ ಒಳಪಟ್ಟು ಇಲ್ಲಿ ಕೆಲವೇ ನಾಟಕಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ಪ್ರಭುಶಂಕರರ ನಾಟಕಗಳಾದ 'ಅಂಗುಲಿಮಾಲಾ', 'ಆಮ್ರಪಾಲಿ', 'ಸುಜಾತ' ಮತ್ತು 'ಗಾಳಿಯೆಂಬ ಕುದುರೆ ಏರಿ,' ಶಿವರಾಮ ಕಾರಂತರ ನಾಟಕಗಳಾದ 'ಕಿಸಾಗೋತಮಿ' ಮತ್ತು 'ಬುದ್ಧೋದಯ,' ಕುವೆಂಪು ಅವರ ನಾಟಕ 'ಮಹಾರಾತ್ರಿ,' ಮಾಸ್ತಿಯವರ 'ಯಶೋಧರಾ' ಹಾಗೂ ಮ.ನ.ಜ.ರವರ 'ಜಲ.'

ಪ್ರಭುಶಂಕರರ 'ಅಂಗುಲಿಮಾಲ' ಮತ್ತು 'ಆಮ್ರಪಾಲಿ 'ಈ ಎರಡೂ ನಾಟಕಗಳು ಮನಃ ಪರಿವರ್ತನೆಯ ಹಿನ್ನೆಲೆಯಲ್ಲಿ ರಚನೆಯಾಗಿರುವಂತಹವು. ಅಂಗುಲಿಮಾಲ ಒಬ್ಬ ಕ್ರೂರ ವ್ಯಕ್ತಿಯಾಗಿದ್ದು, ಜನರನ್ನು ಕೊಂದು, ಹಿಂಸೆ ಮಾಡಿ ಬದುಕುತ್ತಿದ್ದವನು. ಇಂತಹ ಕ್ರೂರಿಯನ್ನು ನೇರವಾಗಿ ಭೇಟಿ ಮಾಡಿದ ಬುದ್ಧನು ತನ್ನ ಹಿತ ವಚನಗಳಿಂದ ಆತನ ಮನಸ್ಸಿನಲ್ಲಿದ್ದ ಕ್ರೂರತ್ವದ ಭಾವನೆಯನ್ನು ತೊಲಗಿಸಿ ಒಬ್ಬ ಸದ್‌ವ್ಯಕ್ತಿಯನ್ನಾಗಿ ಮಾಡುತ್ತಾನೆ. ಆ ಮುಖಾಂತರ ಅಂಗುಲಿಮಾಲನ ಮನಃಪರಿವರ್ತನೆ ಈ ನಾಟಕದ ವಿಷಯವಸ್ತು. ಆಮ್ರಪಾಲಿಯು ವೇಶ್ಯಾವೃತ್ತಿಯಲ್ಲಿ ನಿರತಳಾಗಿರುತ್ತಾಳೆ. ಈ ರೀತಿ ಸಮಾಜಕ್ಕೆ ಸಲ್ಲದ ದುರ್ಮಾರ್ಗದಲ್ಲಿ ನಡೆಯುತ್ತಿರುವ ಸಂದರ್ಭದಲ್ಲಿ ಬುದ್ಧನ ಆಗಮನವಾಗುತ್ತದೆ. ಆ ವಿಚಾರವನ್ನು ಕೇಳಿ ತಿಳಿದ ಆಮ್ರಪಾಲಿ ಬುದ್ಧ ಉಪದೇಶ ನೀಡುವ ಸ್ಥಳಕ್ಕೆ ಹೋಗಿ, ಆತನ ಉಪದೇಶವನ್ನು ಕೇಳಿ ಆ ಮುಖಾಂತರ ತನ್ನ ದುರ್ಮಾರ್ಗದ ಅರಿವಾಗಿ ಪರಿವರ್ತನೆಗೊಂಡು ಸದ್‌ಗೃಹಿಣಿಯಾಗುತ್ತಾಳೆ. ಆ ಮುಖಾಂತರ ಆಕೆಗೆ ಮನಃ ಪರಿವರ್ತನೆಯಾಗುತ್ತದೆ. ಹೀಗೆ ಈ ಎರಡು ನಾಟಕಗಳಲ್ಲಿ ಪರಿವರ್ತನೆಯ ರೂಪದಲ್ಲಿ ಸಾಮ್ಯತೆಗಳನ್ನು ಗುರುತಿಸಬಹುದು. ಆದರೆ 'ಅಂಗುಲಿಮಾಲ' ನಾಟಕದಲ್ಲಿ ಬುದ್ಧನೇ ನೇರವಾಗಿ ಅಂಗುಲಿಮಾಲನ ಬಳಿ ಹೋಗಿ, ಆತನ ಮನಃ ಪರಿವರ್ತನೆಗೆ ಕಾರಣನಾಗುತ್ತಾನೆ. ಆಮ್ರಪಾಲಿಯಲ್ಲಿ ಆಮ್ರಪಾಲಿಯ ಮನಃಪರಿವರ್ತನೆಗೆ ಪರೋಕ್ಷವಾಗಿ ಕಾರಣನಾಗುತ್ತಾನೆ. ಈ ರೀತಿ ವೈಷಮ್ಯತೆಗಳನ್ನು ಗುರುತಿಸಬಹುದು.

ಪ್ರಭುಶಂಕರರ 'ಸುಜಾತ,' ಕಾರಂತರ 'ಕಿಸಾಗೋತಮಿ' ಮತ್ತು ಮಾಸ್ತಿಯವರ 'ಯಶೋಧರಾ' ಈ ಮೂರು ನಾಟಕಗಳು ಸ್ತ್ರೀ ಕೇಂದ್ರಿತ ನೆಲೆಯಲ್ಲಿ ರಚನೆಯಾಗಿವೆ. ಸುಜಾತ ಒಬ್ಬ ಕುಲೀನ ಸ್ತ್ರೀ.

ಆಕೆ ಕನಸಿನಲ್ಲಿ ಕಂಡ ವಿಚಾರವನ್ನು ಸಿಕಾರಗೊಳಿಸಿಕೊಳ್ಳುವುದು. ಆ ಮುಖಾಂತರ ಮಗುವನ್ನು ಪಡೆಯುವ ಅಪೇಕ್ಷೆ ಮತ್ತು ದಿವ್ಯಮೂರ್ತಿಯೊಂದರ ಸೃಷ್ಟಿ ಈ ನಾಟಕದಲ್ಲಿ ಕಂಡುಬರುತ್ತದೆ. ಈ ಎಲ್ಲಾ ವಿಚಾರಗಳಲ್ಲಿ ಆಕೆಯ ಮನಸ್ಸಿನಲ್ಲಿ ಉಂಟಾಗುವ ತಳಮಳದ ವಿವರಣೆ ಈ ನಾಟಕದಲ್ಲಿ ಕಂಡುಬರುತ್ತದೆ. ಕಿಸಾಗೋತಮಿ ಒಂದು ಮಗುವನ್ನು ಕಳೆದುಕೊಂಡು ರೋಧಿಸುತ್ತಿರುವ ಆ ಮುಖಾಂತರ ಆಕೆಯ ಮನಸ್ಸಿನ ತಳಮಳವನ್ನು ನಾವಿಲ್ಲಿ ಕಾಣಬಹುದು. ಮಗುವನ್ನು ಕಳೆದುಕೊಂಡು ಮಗುವಿಗಾಗಿ ಪರಿತಪಿಸುವುದು. ಬುದ್ಧನಿಂದ ಸತ್ಯವನ್ನರಿತು ಸುಮ್ಮನಾಗುವುದು ಇಲ್ಲಿ ಪ್ರಮುಖವಾಗಿ ಕಂಡುಬರುವ ಅಂಶಗಳು ಯಶೋಧರಾ ಸಿದ್ಧಾರ್ಥನ ಪತ್ನಿಯಾಗಿದ್ದು ಪತಿಯಿಂದ ದೂರವಾದ ಅನಂತರದಲ್ಲಿ ಆಕೆಯ ಮನಸ್ಸಿನಲ್ಲುಂಟಾದ ತಳಮಳಗಳು ಈ ನಾಟಕದಲ್ಲಿ ಪ್ರಮುಖವಾಗಿ ಕಂಡುಬರುವಂತಹದು. ಹಲವಾರು ವರ್ಷಗಳ ಕಾಲ ಪತಿಯಿಂದ ದೂರವಿದ್ದು ಮತ್ತೆ ಅವರನ್ನು ಸಂಧಿಸಿದಾಗ ತಾನು ನಿಮ್ಮ ಮಾರ್ಗವನ್ನು ಅನುಸರಿಸುತ್ತೇನೆ ಎಂದು ಕೇಳುವುದು ಅದಕ್ಕೆ ಪ್ರತಿಯಾಗಿ ನಿರಾಕರಣೆಯ ಉತ್ತರ ನಮಗಿಲ್ಲಿ ಪ್ರಮುಖವಾಗಿ ಕಂಡುಬರುತ್ತದೆ. ಒಟ್ಟಾರೆಯಾಗಿ ಈ ಮೂರು ನಾಟಕಗಳಲ್ಲಿ ಹೆಣ್ಣಿನ ಮನಸ್ಸಿನ ತಳಮಳಗಳು ಮುಖ್ಯವಾಗಿವೆ.

ಸುಜಾತದಲ್ಲಿ ಕನಸಿನ ಮುಖಾಂತರ ಒಬ್ಬ ಮಹಾಜ್ಞಾನಿಯ ಜನನ ಹಾಗೂ ಮಗುವನ್ನು ಪಡೆಯುವ ಇಚ್ಛೆ ಕಂಡು ಬರುತ್ತದೆ. ಗೋತಮಿಯಲ್ಲಿ ಮಗುವನ್ನು ಕಳೆದುಕೊಂಡಿರುವುದು ಕಂಡುಬರುತ್ತದೆ. ಆದರೆ 'ಯಶೋಧರಾ'ದಲ್ಲಿ ಸ್ತ್ರೀಯೊಬ್ಬಳು ಪತಿಯಿಂದ ದೂರವಾಗುವುದು ಕಂಡುಬರುತ್ತದೆ. ಈ ರೀತಿಯಾಗಿ ಮೂರೂ ನಾಟಕಗಳಲ್ಲಿ ವೈಷಮ್ಯತೆಗಳನ್ನು ಗುರುತಿಸಬಹುದು.

ಪ್ರಭುಶಂಕರರ 'ಗಾಳಿಯೆಂಬ ಕುದುರೆ ಏರಿ,' ಕುವೆಂಪುರವರ 'ಮಹಾರಾತ್ರಿ,' ಕಾರಂತರ 'ಬುದ್ಧೋದಯ' ಈ ಮೂರೂ ನಾಟಕಗಳಲ್ಲಿಯೂ ಸಾಮ್ಯತೆ ಗುರುತಿಸಬಹುದು. ಅಂದರೆ ಈ ಮೂರೂ ನಾಟಕಗಳಲ್ಲಿ ಸಿದ್ಧಾರ್ಥನು ಸಮಾಜದ ಅವ್ಯವಸ್ಥೆಗಳನ್ನು ಕಂಡು ಜೀವನದಲ್ಲಿ ಜಿಗುಪ್ಸೆಗೊಂಡು ಸಂಸಾರ ಬಂಧನದಿಂದ ವಿಮುಕ್ತಿ ಹೊಂದಿ ಬುದ್ಧನಾಗುವ ಕಥೆ ಕಂಡುಬರುತ್ತದೆ.

ಒಟ್ಟಾರೆ ಮೂರು ನಾಟಕಗಳಲ್ಲೂ ಚೆನ್ನನ ಜೊತೆ ನಗರವನ್ನು ನೋಡಲು ಹೋಗಿದ್ದ ಸಮಯದಲ್ಲಿ ವೃದ್ಧ, ರೋಗಿ, ಹೆಣ ಮತ್ತು ಯೋಗೀಶನೊಬ್ಬನನ್ನು ಕಂಡು ಆ ಮುಖಾಂತರ ಜಿಗುಪ್ಸೆ ಹೊಂದಿ ಸಂಸಾರ ಬಂಧನದಿಂದ ವಿಮುಕ್ತಿಯನ್ನು ಹೊಂದಿ ಗೃಹತ್ಯಾಗ ಮಾಡುವುದು ಕಂಡುಬರುತ್ತದೆ. ಆದರೆ ಈ ರೀತಿ ಗೃಹತ್ಯಾಗ ಮಾಡುವ ಸಂದರ್ಭವನ್ನು ಗಾಳಿಯೆಂಬ ಕುದುರೆ ಏರಿ ನಾಟಕದಲ್ಲಿ ಪ್ರಶ್ನೋತ್ತರದ ರೂಪದಲ್ಲಿ ಚಿತ್ರಿಸಲಾಗಿದೆ. ಅಂದರೆ ಸಿದ್ಧಾರ್ಥ ಗೃಹತ್ಯಾಗ ಮಾಡುವುದರಿಂದ ಉಂಟಾಗಬಹುದಾದ ಸಂದೇಹ ಮತ್ತು ಪರಿಣಾಮಗಳನ್ನು ನಿವಾರಿಸುವ

ರೀತಿಯಲ್ಲಿ ಚಿತ್ರಿತವಾಗಿದೆ. 'ಮಹಾರಾತ್ರಿ' ನಾಟಕವು ಐತಿಹಾಸಿಕ ವಿಷಯವನ್ನು ಸಮರ್ಥಿಸುವ ರೀತಿಯಲ್ಲಿಯೇ ಮೂಡಿ ಬಂದಿದ್ದರೂ ರಾಲ ಮತ್ತು ಮಾರನ ಪಾತ್ರಗಳ ಮುಖಾಂತರ ಆತನನ್ನು ತಡೆಯುವ ಪ್ರಯತ್ನ ಕಂಡುಬರುತ್ತದೆ. ಹಾಗೂ ಕುವೆಂಪುರವರ ಸಮಕಾಲೀನ ವಸ್ತುಸ್ಥಿತಿಗೆ ಅನುಗುಣವಾಗಿ ನಾಟಕವನ್ನು ರಚಿಸಿರುವುದು ಕಂಡುಬರುತ್ತದೆ. ಕಾರಂತರ ಬುದ್ಧೋದಯದಲ್ಲಿ ಇತಿಹಾಸದ ವಿಷಯವನ್ನು ಸಮರ್ಥಿಸುವುದರ ಜೊತೆಗೆ ಸಿದ್ಧಾರ್ಥ ಜಿಗುಪ್ಸೆ ಹೊಂದಲು ಚೆನ್ನ ಮತ್ತು ಆತನ ಮಗನೇ ಕಾರಣ ಎಂಬ ರೀತಿಯಲ್ಲಿ ಇದೆ.

ಮನಜ ಅವರ 'ಜಲ' ಸಂಪೂರ್ಣವಾಗಿ ಭಿನ್ನ ನೆಲೆಯಲ್ಲಿ ರಚನೆಗೊಂಡಿರುವುದನ್ನು ಕಾಣಬಹುದು. ಇತಿಹಾಸ ಇದುವರೆಗೂ ನಮಗೆ ಏನನ್ನು ಹೇಳಿಕೊಂಡು ಬಂದಿದೆಯೋ ಅದಕ್ಕೆ ತದ್ವಿರುದ್ಧವಾದ ರೀತಿಯಲ್ಲಿ ಈ ನಾಟಕ ರಚಿತವಾಗಿದೆ. ಇಲ್ಲಿ ಸಿದ್ಧಾರ್ಥ ಗೌತಮನಿಗೆ ಜಿಗುಪ್ಸೆ ಉಂಟಾಗಲು ವೃದ್ಧ, ರೋಗಿ, ಹೆಣ ಮತ್ತು ಯೋಗೀಶ ಕಾರಣರಾಗುವುದಿಲ್ಲ. ಈತನಿಗೆ ಯಾವುದೇ ಜ್ಯೋತಿಷ್ಯದ ಕಂಠಕ ಕಾರಣವಾಗುವುದಿಲ್ಲ. ಅರಮನೆಯ ವಾಸಿಯೇ ಆಗಿರುವುದಿಲ್ಲ. ಬದಲಾಗಿ ಎಲ್ಲರ ರೀತಿ ಸಮಾಜದಲ್ಲಿ ಹೊಂದಿಕೊಂಡೆ ಬಾಳುತ್ತಿರುತ್ತಾನೆ. ಹೀಗಿದ್ದೂ ಆಂತರಿಕ ಕಲಹ, ರಾಜಕೀಯ ಕುತಂತ್ರ, ಶಾಕ್ಯ ಸಂಹಿತೆಯ ನಿಯಮ ಮತ್ತು ಶಾಕ್ಯ ಸಂಘದ ಬಿಗಿಯಾದ ಹಿಡಿತ ಇವುಗಳೇ ಕಾರಣವಾಗಿ ಆತನ ಮೇಲೆ ದೇಶದ್ರೋಹದ ಆಪಾದನೆ ಮಾಡಲಾಗುತ್ತದೆ. ಇದಕ್ಕೆ ಶಿಕ್ಷೆ ಎಂಬಂತೆ ಆತ ಸನ್ಯಾಸ ದೀಕ್ಷೆ ಸ್ವೀಕರಿಸಿ ಬುದ್ಧನಾದ ಎಂಬಂತಿದೆ ನಾಟಕದ ರಚನೆ.

ಈ ರೀತಿಯಾಗಿ ಎಲ್ಲಾ ನಾಟಕಗಳಲ್ಲೂ ಬುದ್ಧನೇ ಕೇಂದ್ರ ಪಾತ್ರವಾದರೂ ಆತನ ಚಿತ್ರಿಸುವ ದೃಷ್ಟಿಕೋನದಲ್ಲಿ ಮಾತ್ರ ವಿಭಿನ್ನತೆಯನ್ನು ಕಾಣಬಹುದಾಗಿದೆ.

ಉಪಸಂಹಾರ

ಸಾವಿರಾರು ವರ್ಷಗಳ ಇತಿಹಾಸವಿರುವ ಕನ್ನಡ ಸಾಹಿತ್ಯದಲ್ಲಿ ಹಲವಾರು ಸಾಹಿತ್ಯದ ಪ್ರಕಾರಗಳು ಕಂಡು ಬರುತ್ತವೆ. ಅದರಲ್ಲಿ ನಾಟಕ ಪ್ರಕಾರವೂ ಒಂದು ಈ ನಾಟಕ ಪ್ರಕಾರವು ಹಳೆಗನ್ನಡ ಸಾಹಿತ್ಯದಲ್ಲಿ ಕಂಡು ಬರುವುದಿಲ್ಲ. ಬದಲಾಗಿ ಹೊಸಗನ್ನಡ ಸಾಹಿತ್ಯದ ಘಟ್ಟದಲ್ಲಿ ನಾಟಕ ಪ್ರಕಾರ ಹುಲುಸಾಗಿ ಬೆಳೆದಿದೆ. ಈ ರೀತಿ ಹುಲುಸಾಗಿ ಬೆಳೆಯುವ ಸಂದರ್ಭದಲ್ಲಿ ನಾಟಕ ಪ್ರಕಾರಕ್ಕೆ ಹಲವಾರು ಬಗೆಯ ವಸ್ತು ವಿಷಯಗಳು, ಕಥಾವಸ್ತುಗಳು ದೊರೆತವು. ಅವುಗಳಲ್ಲಿ ಬುದ್ಧನೂ ಒಂದು. ಬುದ್ಧನನ್ನು ಕುರಿತು ಹಲವಾರು ನಾಟಕಗಳು ರಚನೆಯಾಗಿವೆ. ಈ ಪ್ರಬಂಧದ ಉದ್ದೇಶ ಕನ್ನಡದಲ್ಲಿ ಬುದ್ಧನನ್ನು ಕುರಿತು ನಾಟಕಗಳ ವಿವೇಚನೆಯಾಗಿದೆ.

ಬುದ್ಧ ಒಬ್ಬ ಐತಿಹಾಸಿಕ ವ್ಯಕ್ತಿ ಸಾಮಾಜಿಕ ಕಳಕಳಿಯನ್ನು ಉಳ್ಳ ಆದರ್ಶದಾರ್ಶನಿಕ ವ್ಯಕ್ತಿ ಒಂದು ಉತ್ತಮ ಕುಲದಲ್ಲಿ ಜನಿಸಿ ಅಪಾರ ಐಶ್ವರ್ಯವನ್ನು ಒಳಗೊಂಡು, ಸುಖ–ಭೋಗದಲ್ಲಿ ವಿಹರಿಸುತ್ತಿದ್ದ ಈತನಿಗೆ ಯಾವುದರಲ್ಲೂ ಕೊರತೆ ಎಂಬುದು ಇರಲಿಲ್ಲ. ಮಾನವೀಯ ಗುಣಗಳ ಮೂರ್ತಿಯಂತಿದ್ದ ಬುದ್ಧನಿಗೆ ಹೊರ ಜಗತ್ತಿನಲ್ಲಿ ನಡೆಯುವ ಅಪಾರ ಸಾವು ನೋವು, ದುಃಖ, ಹಿಂಸೆ, ಕ್ರೌರ್ಯ, ತಾರತಮ್ಯ –ಇವೇ ಮುಂತಾದವು ಏಕೆ ಎಂಬುದು ತಿಳಿಯುವುದಿಲ್ಲ. ಇವೆಲ್ಲಕ್ಕೂ ಶಾಶ್ವತ ಪರಿಹಾರವನ್ನು ಹುಡುಕಲೇ ಬೇಕು ಎಂದು ನಿರ್ಧರಿಸಿ ತನ್ನ ಸುಖ–ಭೋಗಗಳನ್ನು ತ್ಯಜಿಸಿ, ಭವಬಂಧನದಿಂದ ಮುಕ್ತನಾಗುತ್ತಾನೆ. ಅನಂತರ ಕಠಿಣ ಪರಿಶ್ರಮದಿಂದ ಹಲವಾರು ವರ್ಷಗಳ ಅನುಭವದಿಂದ 'ಜ್ಞಾನ ಪ್ರಾಪ್ತಿ'ಯನ್ನು ಪಡೆದು ಸಿದ್ಧಾರ್ಥನಾಗಿದ್ದವನು ಬುದ್ಧನಾಗುತ್ತಾನೆ. ಬೌದ್ಧ ಧರ್ಮದ ಸ್ಥಾಪಕನಾಗುತ್ತಾನೆ. ಜನರ ಈ ಎಲ್ಲಾ ಸಮಸ್ಯೆಗಳಿಗೆ ಕಾರಣವನ್ನು ತಿಳಿಸುತ್ತಾ 'ಆಸೆಯೇ ದುಃಖದ ಮೂಲ' ಎಂದು ತಿಳಿಸಿದನು. ತನ್ನ ಅಪಾರ ಜ್ಞಾನವನ್ನು ಎಲ್ಲರಿಗೂ ತಿಳಿಸಿದನು.

ಇಂಥ ವ್ಯಕ್ತಿತ್ವದ ಬುದ್ಧ ಸರ್ವಕಾಲದಲ್ಲೂ ಚಿರಸ್ಥಾಯಿಯಾಗಿ ಜನಮನದ ಅಂತರಂಗದಲ್ಲಿ ನೆಲಸಿದ್ದಾನೆ. ಆದ್ದರಿಂದ ಆತನನ್ನು ಕುರಿತು ಹಲವು ರೀತಿಯ ಸಾಹಿತ್ಯ ರಚನೆ ಅಪಾರವಾಗಿ ನಡೆದಿದೆ. ಅದೇ ರೀತಿ ಈ ವಿಷಯಗಳು ಕನ್ನಡ ಸಾಹಿತ್ಯದಲ್ಲಿ ನಾಟಕದ ರೂಪವನ್ನು ತಳೆದಿವೆ. ಬುದ್ಧನನ್ನು ಕುರಿತು ಕನ್ನಡದಲ್ಲಿ ಹಲವಾರು ನಾಟಕಗಳು ರಚನೆಯಾಗಿದ್ದರೂ ಇಲ್ಲಿ ಕೆಲವೇ ನಾಟಕಗಳನ್ನು ಅಧ್ಯಯನಕ್ಕೆ ಒಳಪಡಿಸಿ, ಅವುಗಳ ಸಾರವನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆ.

ಪ್ರಭುಶಂಕರ ಅವರು ಬುದ್ಧನನ್ನು ಕುರಿತು ಅತಿ ಹೆಚ್ಚು ಅಂದರೆ ನಾಲ್ಕು ನಾಟಕಗಳನ್ನು ರಚನೆ ಮಾಡಿದ್ದಾರೆ. ಮೊದಲೆರಡು ನಾಟಕಗಳಾದ ಅಂಗುಲಿಮಾಲಿ ಮತ್ತು ಆಮ್ರಪಾಲಿಯನ್ನು ಬುದ್ಧನ ತತ್ತ್ವೋಪದೇಶವನ್ನು ಕೇಳಿದ ವ್ಯಕ್ತಿಗಳು ಕೆಟ್ಟಮಾರ್ಗದಲ್ಲಿ ನಡೆಯುತ್ತಿದ್ದರೂ ಸರಿದಾರಿಗೆ ಬರುವ,

ಮನಃ ಪರಿವರ್ತನೆಗೆ ಒಳಗಾಗುವುದನ್ನು ಕಾಣಬಹುದು. ಅಂಗುಲಿಮಾಲ ಬಹಳ ಕ್ರೂರಿಯಾಗಿದ್ದು, ಯಾವಾಗಲೂ ಕೊಲೆ, ಸುಲಿಗೆಯಲ್ಲಿ ತೊಡಗಿರುತ್ತಾನೆ. ಆತನನ್ನು ನೋಡಲು ಜನರೆಲ್ಲರೂ ಭಯ ಪಡುತ್ತಿರುತ್ತಾರೆ. ಅಂತಹ ಕ್ರೂರಿಯಾದ ಅಂಗುಲಿಮಾಲನನ್ನು ತನ್ನ ಹಿತ ನುಡಿಗಳ ಮುಖಾಂತರ ಬದಲಾಯಿಸಿ ಸರಿದಾರಿಗೆ ತರುವುದು ಅಂಗುಲಿಮಾಲಾ ನಾಟಕದಲ್ಲಿ ಕಂಡು ಬರುತ್ತದೆ. ಹಾಗೆಯೇ ಸಮಾಜದ ವಕ್ರ ದೃಷ್ಟಿಗೆ ಒಳಗಾದ ಅಮ್ರಪಾಲಿ ವಿಧಿಯಿಲ್ಲದೆ ವೇಶ್ಯಾವೃತ್ತಿಯನ್ನು ಮಾಡುತ್ತಾ, ಅಪಾರ ಹೆಸರು ಮತ್ತು ಸಂಪತ್ತನ್ನು ಗಳಿಸಿರುತ್ತಾಳೆ ಅಂತಹ ಆಮ್ರಪಾಲಿ ಬುದ್ಧನ ತತ್ತ್ವೋಪದೇಶವನ್ನು ಕೇಳಿ ಮನಃ ಪರಿವರ್ತನೆಯಾಗಿ ತನ್ನ ವೃತ್ತಿಯನ್ನು ಬಿಡುತ್ತಾಳೆ. ಅನಂತರ ಬುದ್ಧನ ಅನುಯಾಗಿಯಾಗುವ ಆಸೆಯನ್ನು ವ್ಯಕ್ತಪಡಿಸುವಷ್ಟರ ಮಟ್ಟಿಗೆ ಪರಿವರ್ತನೆಯನ್ನು ಕಾಣಬಹುದು. ಮೂರನೇ ನಾಟಕವಾದ 'ಸುಜಾತ'ದಲ್ಲಿ ಬುದ್ಧನಿಗೆ ಜ್ಞಾನಪ್ರಾಪ್ತಿಯಾಗುವುದರ ಹತ್ತಿರ ಕಾಲದ ಘಟನೆ ಕಂಡುಬರುತ್ತದೆ. ಅರಳೀ ಮರದಲ್ಲಿ ಒಂದು ಶಕ್ತಿ ಲೀನವಾದುದನ್ನು, ಅಲ್ಲಿ ಒಬ್ಬ ಮಹಾ ಪುರುಷ ಹುಟ್ಟಿ ಬರುತ್ತಾನೆ ಎದು ಕನಸು ಕಾಣುವ ಸುಜಾತಳಂ ಕನಸು ನನಸಾಗುವುದನ್ನು ಈ ನಾಟಕದಲ್ಲಿ ಕಾಣಬಹುದು. ನಾಲ್ಕನೇ ಮತ್ತು ಕೊನೆಯ ನಾಟಕವಾದ 'ಗಾಳಿ ಎಂಬ ಕುದುರೆ ಏರಿ' ನಾಟಕದಲ್ಲಿ ಬುದ್ಧ ಗೃಹ ತ್ಯಾಗ ಮಾಡಲು ಕಾರಣ ಹಾಗೂ ಆ ರೀತಿ ಗೃಹ ತ್ಯಾಗ ಮಾಡಿದ್ದರಿಂದ ಜನ ಸಾಮಾನ್ಯರಲ್ಲಿ ಉಂಟಾಗಬಹುದಾದ ಹಲವಾರು ಪ್ರಶ್ನೆಗಳಿಗೆ ಉತ್ತರ ನೀಡುವ ರೂಪದಲ್ಲಿದೆ.

ಪ್ರಭುಶಂಕರರ ಅನಂತರ ಹೆಚ್ಚು ನಾಟಕಗಳನ್ನು ಅಂದರೆ ಎರಡು ನಾಟಕಗಳನ್ನು ಬರೆದಿರುವವರು ಶಿವರಾಮ ಕಾರಂತರು. ಇವರ ಮೊದಲ ನಾಟಕವಾದ 'ಕಿಸಾ ಗೋತಮಿ'ಯಲ್ಲಿ ಮಗನ ಮೇಲಿನ ಮಮಕಾರದಿಂದ ಸತ್ತ ಮಗುವನ್ನು ಬದುಕಿಸಿಕೊಡುವಂತೆ ಕೇಳುವ ಗೋತಮಿಗೆ, ಸಾವು ಜಗದ ನಿಯಮ ಎಂಬುದನ್ನು ಸಾಸಿವೆಯ ಮುಖಾಂತರ ತಿಳಿಸುವುದು ಕಂಡುಬರುತ್ತದೆ. ಎರಡನೆಯ ನಾಟಕವಾದ ಬುದ್ಧೋದಯ ನಾಟಕದಲ್ಲಿ ಬುದ್ಧ ಉದಯವಾದ ವಿಚಾರವನ್ನು, ಚನ್ನನಿಂದಲೇ ವೈರಾಗ್ಯದ ಕಡೆಗೆ ನಡೆದುದನ್ನು ತಿಳಿಯಬಹುದು.

ಉಳಿದಂತೆ ಕುವೆಂಪು ಅವರ 'ಮಹಾರಾತ್ರಿ'ಯಲ್ಲಿ ಸಿದ್ಧಾರ್ಥನು ವೃದ್ಧ, ರೋಗಿ, ಶವ, ಯೋಗೀಶನನ್ನು ಕಂಡು ಜಿಗುಪ್ಸೆಹೊಂದಿ ಭವಬಂಧನದಿಂದ ದೂರಾಗುವುದು ಕಂಡು ಬರುತ್ತದೆ. ಅದಕ್ಕಾಗಿ ಆತ ಅನುಭವಿಸುವ ಯಾತನೆ ಪೂರ್ವ ಸಿದ್ಧತೆ ಇವೆ ಮುಂತಾದವುಗಳು ಕಂಡುಬರುತ್ತವೆ. ಮಾಸ್ತಿಯವರ 'ಯಶೋಧರಾ' ನಾಟಕದಲ್ಲಿ ಸಿದ್ಧಾರ್ಥನ ಪತ್ನಿಯಾದ ಯಶೋಧರೆಯ ಮನಸ್ಸಿನ ತಳಮಳವನ್ನು ಕಾಣಬಹುದು. ಮನೆಯ ಆಧಾರ ಸ್ತಂಭವಾಗಿದ್ದ ಪತಿ ದೂರಾದರೆ ಆ ಸಂದರ್ಭದಲ್ಲಿ ಆಕೆಯ ಸ್ಥಿತಿ ಮತ್ತು ಬುದ್ಧನಾಗಿ ಮತ್ತೆ ಕಾಣಿಸಿಕೊಂಡಾಗ ತಾನೂ ಕೂಡ ಅವರನ್ನು ಅನುಸರಿಸುವ

ಬಯಕೆಯನ್ನು ವ್ಯಕ್ತಿಪಡಿಸುವುದು. ಅದನ್ನು ಬುದ್ಧ ನಿರಾಕರಿಸುವುದನ್ನು ಕಾಣಬಹುದು. ಮ.ನ.ಜ ಅವರ 'ಜಲ' ನಾಟಕವೂ ಈ ಎಲ್ಲಾ ಅನಾಟಕಗಳಿಗಿಂತ ಭಿನ್ನವಾದ ನೆಲೆಯಲ್ಲಿ ರಚಿತವಾಗಿರುವುದನ್ನು ಕಾಣಬಹುದು. ಅಂದರೆ ಇತಿಹಾಸಕಾರರು ಮತ್ತು ಉಳಿದ ನಾಟಕಕಾರರು ಸಿದ್ಧಾರ್ಥ ಗೃಹ ತ್ಯಾಗಮಾಡಿದುದಕ್ಕೆ ಬೇರೆಯದೇ ಕಾರಣನೀಡಿದರೆ ಮ.ನ.ಜ ಅವರು ಅದು ಸಾಂಪ್ರದಾಯಿಕ ಕಾರಣವಾಗಿದ್ದು, ಸತ್ಯವನ್ನು ಬಚ್ಚಿಟ್ಟಿದ್ದಾರೆ ಎಂದು ಹೇಳಿ ರಾಜ್ಯದ ಆಂತರಿಕ ಕದನ, ಜೀವರಕ್ಷಣೆ, ನೆಲ ರಕ್ಷಣೆ ಮತ್ತು ಜಲರಕ್ಷಣೆಯಲ್ಲಿ ವಿಫಲನಾದುದರಿಂದ ಆತ ರಾಜತ್ವವನ್ನು ಬಿಟ್ಟು ಸನ್ಯಾಸಿಯಾದ ಎಂಬುದಾಗಿ ತಿಳಿಸಿದ್ದಾರೆ.

ಬುದ್ಧನ ಹುಟ್ಟು, ಆತನ ಸಾಧನೆಗಳನ್ನು ನಾಟಕದ ವಸ್ತುವಾಗಿ ಮಾಡಿಕೊಂಡು ಕನ್ನಡದಲ್ಲಿ ಸುಮಾರು ಇಪ್ಪತ್ತಕ್ಕಿಂತಲೂ ಹೆಚ್ಚು ನಾಟಕಗಳನ್ನು ರಚಿಸಲಾಗಿದೆ. ಆದರೆ ಸಮಯಭಾವ ಮತ್ತು ಪುಟಮಿತಿಗೆ ಒಳಪಟ್ಟು ಕೆಲವು ನಾಟಕಗಳನ್ನು ಮಾತ್ರ ವಿವೇಚನೆಗೆ ಒಳಪಡಿಸಲಾಗಿದೆ. ಇದು ಒಂದು ಪಿಎಚ್.ಡಿ..ಗೆ ಆಗುವಷ್ಟು ಸಾಮಗ್ರಿಗಳನ್ನು ಒಳಗೊಂಡಿದೆ. ಜೊತೆಗೆ ಕನ್ನಡದಲ್ಲಿ ಬುದ್ಧನ ಕುರಿತು ನಾಟಕ ಪ್ರಕಾರವಷ್ಟೆ ಬೆಳೆದು ಬಂದಿರದೇ ಬೇರೇ ಪ್ರಕಾರಗಳಲ್ಲಿಯೂ ಬುದ್ಧನನ್ನು ಕಾಣಬಹುದು, ಹಾಗಾಗಿ ಆ ಎಲ್ಲಾ ಪ್ರಕಾರಗಳಲ್ಲಿ ಕೆಲಸನಡೆಯಬೇಕಾಗಿದೆ ಎಂದು ತಿಳಿಸುತ್ತೇನೆ.

ಗ್ರಂಥಸೂಚಿ

1. ಪ್ರಭುಶಂಕರ : ಬುದ್ಧನಾಟಕ ಚಕ್ರ
ಡಿ.ವಿ.ಕೆ. ಮೂರ್ತಿ ಪ್ರಕಾಶನ
ಕೃಷ್ಣಮೂರ್ತಿ ಪುರಂ, ಮೈಸೂರು – 4,
ಮೂರನೆಯ ಮುದ್ರಣ, 2009.

2. ಶಿವರಾಮ ಕಾರಂತ : ಗೀತ ನಾಟಕಗಳು
ರಾಜಲಕ್ಷ್ಮೀ ಪ್ರಕಾಶನ, ಬೆಂಗಳೂರು–53.
ಮೂರನೇ ಮುದ್ರಣ, 1981.

3. ಕುವೆಂಪು : ಮಹಾರಾತ್ರಿ
ಉದಯರವಿ ಪ್ರಕಾಶನ
ವಾಣಿವಿಲಾಸಪುರಂ
ಮೈಸೂರು – 2
ಐದನೆಯ ಮುದ್ರಣ, 1995.

4. ಮಾಸ್ತಿವೆಂಕಟೇಶ ಅಯ್ಯಂಗಾರ್ (ಶ್ರೀನಿವಾಸ) : ಯಶೋಧರಾ
ಮಾಸ್ತಿ ವೆಂಕಟೇಶ ಅಯ್ಯಂಗಾರ್
ಜೀವನ ಕಾರ್ಯಾಲಯ ಟ್ರಸ್ಟ್
ಬೆಂಗಳೂರು.
ವಿಶೇಷ ವಿದ್ಯಾರ್ಥಿ ಆವೃತ್ತಿ, 2008.

5. ಮ.ನ.ಜ. : ಜಲ

6. ಡಾ॥ ಕೆ. ಮರುಳಸಿದ್ದಪ್ಪ : ಆಧುನಿಕ ಕನ್ನಡ ನಾಟಕ
ಅಂಕಿತ ಪುಸ್ತಕ ಪ್ರಾಧಿಕಾರ
53, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್
ಗಾಂಧಿ ಬಜಾರ್ ಮುಖ್ಯರಸ್ತೆ
ಬಸವನಗುಡಿ, ಬೆಂಗಳೂರು-4
ನಾಲ್ಕನೇ ಮುದ್ರಣ; 2009.

7. ನರಹಳ್ಳಿ ಬಾಲಸುಬ್ರಹ್ಮಣ್ಯ : ಕುವೆಂಪು ನಾಟಕಗಳ ಅಧ್ಯಯನ
ಅಂಕಿತ ಪುಸ್ತಕ ಪ್ರಾಧಿಕಾರ
53, ಶ್ಯಾಮ್‌ಸಿಂಗ್ ಕಾಂಪ್ಲೆಕ್ಸ್
ಗಾಂಧಿಬಜಾರ್ ಮುಖ್ಯರಸ್ತೆ
ಬಸವನಗುಡಿ, ಬೆಂಗಳೂರು-4
ಮೊದಲನೆ ಮುದ್ರಣ, 2002.

8. ರಾಜಪ್ಪ ದಳವಾಯಿ : ಕನ್ನಡ ಸಾಹಿತ್ಯಕೋಶ
ದಳವಾಯಿ ಪ್ರಕಾಶನ
ಅಧ್ಯಾಪಕರ ನಿವಾಸಗಳು, ಜ್ಞಾನ ಭಾರತಿ
ಬೆಂಗಳೂರು ವಿಶ್ವವಿದ್ಯಾನಿಲಯ
ಬೆಂಗಳೂರು.
ಆರನೇ ಮುದ್ರಣ, 2008.

9. ಡಾ॥ ಎಚ್. ತಿಪ್ಪೇರುದ್ರಸ್ವಾಮಿ : ತೌಲನಿಕ ಕಾವ್ಯ ಮೀಮಾಂಸೆ
ಡಿ.ವಿ.ಕೆ. ಮೂರ್ತಿ ಪ್ರಕಾಸನ
ಕೃಷ್ಣಮೂರ್ತಿ ಪುರಂ, ಮೈಸೂರು-4
ನಾಲ್ಕನೇ ಮುದ್ರಣ, 1998.

10. ಡಾ॥ ಕೆ. ಸದಾಶಿವ : ಪ್ರಾಚೀನ ಭಾರತದ ಇತಿಹಾಸ
ಪ್ರಿಯದರ್ಶಿನಿ ಪ್ರಕಾಶನ,
ಎ-01-03 ಸ್ಟ್ರೀಟ್ ಅಂಡ್ ಹಿಯರಿಂಗ್
ಲೇಔಟ್, ಬೋಗಾಧಿ ಎರಡನೇ ಹಂತ,
ಮೈಸೂರು ದಕ್ಷಿಣ
ಮೈಸೂರು – 570026
ಹೊಸ ಮುದ್ರಣ, 2004.

11. ಆರ್.ಜಿ. ಶಿವಣ್ಣ : ಭಾರತದ ಇತಿಹಾಸ
ಚೇತನ ಬುಕ್ ಹೌಸ್
ಮೈಸೂರು

ಮೊದಲನೇ ಮುದ್ರಣ, 1997.

12. ಡಿ.ಟಿ. ಜೋಷಿ : ಭಾರತದ ಇತಿಹಾಸ
ವಿದ್ಯಾನಿಧಿ ಪ್ರಕಾಶನ, ಗದಗ
ಪರಿಷ್ಕೃತ ಆವೃತ್ತಿ, 1995.